ಯಕ್ಷಗಾನ ಪ್ರಸಂಗದಶಕ

ಅಗರಿ ಭಾಸ್ಕರ ರಾಯರ ಯಕ್ಷಗಾನಪ್ರಸಂಗಸಂಪುಟ

ಸಂಪಾದಕರು
ಡಾ। ಪಾದೇಕಲ್ಲು ವಿಷ್ಣು ಭಟ್ಟ



https://yakshaprasangakosha.blogspot.com/2018/11/blog-~~post~~ [illegible].html

4/11/18

ಯಕ್ಷಗಾನ ಪ್ರಸಂಗದಶಕ

[ಅಗರಿ ಭಾಸ್ಕರ ರಾಯರ ಯಕ್ಷಗಾನಪ್ರಸಂಗಸಂಪುಟ]

YAKSHAGANA PRASANGADASHAKA

An anthology of 10 Yakshagana Prasangas written by **Agari Bhaskar Rao,** Shri Bhramari, Near Diana Talkies, Indira Nagar, Udupi - 576 101 (Ph: 9448261703)

Edited by

Dr. Padekallu Vishnu Bhatta, `Dhathri', P.o. Athradi, UDUPI - 576107 (Ph: 9448986527)

Published by

Shevadhi Prakashana, Vibudhapriyanagara, Udupi - 576102 (Ph: 9448931556)

2018

Pages : xxx+374 (404) Price : ₹ **360/-**

Paper : 70 gsm
Size : 1/8 demi
Copies : 1000

Cover Photo : Photo : Basmasura Mohini by Chittani Ramachandra Hegde and Nilagodu Shankara Hegde (Internet pic)
Design : Dr. B. N. Shanthapritya
DTP : Savitha Shanthapriya, Udupi
Printed at Prakash Offset, Mangalore

ಪ್ರಕಾಶಕರ ಮಾತು

ಅಗರಿ ಭಾಸ್ಕರ ರಾಯರು ಯಕ್ಷಗಾನದ ಹಿರಿಯ ಭಾಗವತರಾಗಿದ್ದ ಅಗರಿ ಶ್ರೀನಿವಾಸ ಭಾಗವತರ ಸುಪುತ್ರರು. ತಮ್ಮ ತಂದೆಯವರಂತೆ ಪ್ರಸಂಗರಚನೆಯನ್ನು ಗಂಭೀರವಾಗಿ ಪರಿಗಣಿಸಿ ಮುಂದುವರಿಸಿದವರು. ಸುಮಾರು ಮೂವತ್ತರಷ್ಟು ಪ್ರಸಂಗಗಳನ್ನು ಅವರು ಬರೆದಿದ್ದರೂ ಎಲ್ಲವೂ ಉಪಲಬ್ಧವಿಲ್ಲ. ಆಶುಕವಿಗಳಂತೆ ಕೆಲವೇ ದಿನಗಳಲ್ಲಿ ಪ್ರಸಂಗಗಳನ್ನು ಬರೆದು ಪೂರೈಸಿ ಅನಂತರ ಅದರ ಬಗೆಗೆ ಹೆಚ್ಚಿನ ಗಮನವನ್ನು ನೀಡದೆ ಅದು ರಂಗಕ್ಕೆ ಬಂದಾಗ ಸಂತೋಷಪಟ್ಟು ಅಲ್ಲಿಗೇ ವಿಶ್ರಮಿಸಿದವರು. ಅವರಿವರ ಪ್ರೋತ್ಸಾಹದಿಂದ ಕೆಲವು ಪ್ರಸಂಗಗಳು ಮುದ್ರಿತವಾದುವು. ಹಲವು ಪ್ರಸಂಗಗಳು ಮೇಳಗಳಲ್ಲಿ ರಂಗಕ್ಕೆ ಬಂದು ಜನಪ್ರಿಯವಾದುವು. 2015ರಲ್ಲಿ ಅವರ 'ಶ್ರೀಹರಿಲೀಲಾರ್ಣವ ಅಥವಾ ಮಹಾಲಸಾ ನಾರಾಯಣೀ' ಪ್ರಸಂಗವು ಪ್ರಕಟಗೊಂಡು ಅದನ್ನು ನನ್ನ ಕೈಗಿತ್ತಾಗ ಅವರ ಪ್ರಸಂಗಗಳನ್ನು ಸಂಪುಟರೂಪದಲ್ಲಿ ತರಬೇಕಾದ ಆವಶ್ಯಕತೆಯನ್ನು ಹೇಳಿದೆ. ಅದನ್ನು ಒಪ್ಪಿದ ಭಾಸ್ಕರ ರಾಯರು ಉಡುಪಿಯ ಯಕ್ಷಗಾನ ಕೇಂದ್ರದಿಂದ ಪ್ರಕಟಿಸಬಹುದೇ ಎಂದು ಕೇಳಿದರು. ಅಂದು ಕೇಂದ್ರದ ನಿರ್ದೇಶಕನ ನೆಲೆಯಲ್ಲಿ ನಾನು ಒಪ್ಪಿಕೊಂಡು ಪ್ರಸಂಗಗಳನ್ನು ಸಂಪಾದಿಸಿ ಸಂಪುಟರೂಪದಲ್ಲಿ ಸಿದ್ಧಪಡಿಸಲು ಮಿತ್ರರಾದ ಡಾ. ಪಾದೇಕಲ್ಲು ವಿಷ್ಣು ಭಟ್ಟರನ್ನು ಕೇಳಿಕೊಂಡೆ. ಪ್ರಸಂಗಗಳ ಸಂಕಲನ ಮತ್ತು ಸಂಪಾದನೆಯ ಕೆಲಸವನ್ನು ಅವರು ತೊಡಗಿದರು.

2017ರಲ್ಲಿ ಯಕ್ಷಗಾನ ಕೇಂದ್ರದ ನಿರ್ದೇಶಕತ್ವದಿಂದ ನಾನು ನಿರ್ಗಮಿಸಿದ ಮೇಲೆ ಭಾಸ್ಕರ ರಾಯರು ಈ ಬಗೆಗೆ ವಿಚಾರಿಸುತ್ತಲೇ ಇದ್ದರು. ಒಂದಿಷ್ಟು ಸಮಯ ಕಾಯುವಂತೆ ನಾನು ಸೂಚಿಸಿದೆ. ಒಂದು ವರ್ಷದ ವರೆಗೆ ಪ್ರಕಟನೆಯ ಕಾರ್ಯದಲ್ಲಿ ಯಾವ ಪ್ರಗತಿಯೂ ಆಗದಾಗ ಪ್ರಕಾಶನಕ್ಕೆ ಒಪ್ಪಿಕೊಂಡ ನೈತಿಕ ಹೊಣೆಗಾರಿಕೆಯಲ್ಲಿ ಶೇವಧಿ ಪ್ರಕಾಶನದಿಂದ ಕೃತಿಯನ್ನು ಪ್ರಕಟಿಸುವ ನಿಶ್ಚಯವನ್ನು ಮಾಡಿ ಅವರಿಗೆ ತಿಳಿಸಿದೆ. ಪ್ರಕಾಶನಕ್ಕೆ ಒಂದಷ್ಟು ಆರ್ಥಿಕ ಬಲವನ್ನು ಒದಗಿಸುವುದಾಗಿ ಅವರು ತಿಳಿಸಿದರು. ಒಮ್ಮೆ ಸ್ಥಗಿತವಾಗಿದ್ದ ಸಂಪುಟದ ಸಂಪಾದನೆಯ ಕೆಲಸವು ಮುಂದುವರಿಯಿತು. ಇದೀಗ 'ಯಕ್ಷಗಾನ ಪ್ರಸಂಗದಶಕ' ಎಂಬ ಹೆಸರಿನಲ್ಲಿ ಸಂಪುಟವು ಸಿದ್ಧಗೊಂಡು ಪ್ರಕಟಗೊಳ್ಳುತ್ತಿದೆ.

ಹೊಸಕಾಲದಲ್ಲಿ ಅನೇಕ ಯಕ್ಷಗಾನ ಪ್ರಸಂಗಕರ್ತರು ಆಸಕ್ತಿಯಿಂದ ಪ್ರಸಂಗರಚನೆ ಮಾಡಿದರೂ ಅವುಗಳು ಮೇಳಗಳ ಒಂದು ತಿರುಗಾಟದಲ್ಲೋ ಎರಡು ತಿರುಗಾಟಗಳಲ್ಲೋ ಪ್ರಯೋಗಕ್ಕೆ ಬಂದರೆ ಅಲ್ಲಿಗೆ ಸಂತೋಷಪಟ್ಟು ಆ ಪ್ರಸಂಗಗಳ ಮುದ್ರಣಕ್ಕೆ ಯಾವ ಆಸಕ್ತಿಯನ್ನೂ ವಹಿಸದೆ ಕ್ರಮೇಣ ಪ್ರಸಂಗಗಳು ಕಳೆದುಹೋದುದುಂಟು. ಎಲ್ಲ ಪ್ರಸಂಗಗಳ ಹೆಸರುಗಳನ್ನು ದಾಖಲು

ಮಾಡಿ ಸೂಚಿಯನ್ನು ಡಾ. ಪಾದೇಕಲ್ಲು ವಿಷ್ಣು ಭಟ್ಟರು ಸಿದ್ಧಪಡಿಸಿದ್ದು ಅದು ಉಡುಪಿಯ ಯಕ್ಷಗಾನ ಕೇಂದ್ರದಿಂದಲೇ ಪ್ರಕಟಗೊಂಡಿದೆ. ಆ ಕೃತಿಯಲ್ಲಿ ಸೇರದೆ ಹೋಗಿರುವ ಹಲವು ಪ್ರಸಂಗಗಳಿದ್ದರೂ ಸೇರಿರುವ ಎಷ್ಟೋ ಪ್ರಸಂಗಗಳು ಇಂದು ಉಪಲಬ್ಧವಿಲ್ಲವೆಂಬುದನ್ನು ಗಮನಿಸಬೇಕು. ಹೀಗೆ ಎಷ್ಟೋ ಪ್ರಸಂಗಕರ್ತರ ಕೃತಿಗಳು ಕೇವಲ ನಾಮಾವಶೇಷವಾಗಿವೆ. ಅರ್ಥಾತ್, ಪ್ರಸಂಗಗಳುಳಿದಿಲ್ಲ; ಹೆಸರುಗಳು ಮಾತ್ರ ಉಳಿದಿವೆ. ಹೀಗಾಗದಿರಬೇಕಾದರೆ ಪ್ರಸಂಗಕರ್ತರ ಎಲ್ಲ ಕೃತಿಗಳು ಒಟ್ಟಾಗಿ ಸಂಪುಟರೂಪದಲ್ಲಿ ಹೊರಬರಬೇಕು. ಈ ದೃಷ್ಟಿಯಿಂದ ಉಡುಪಿಯ ಯಕ್ಷಗಾನ ಕೇಂದ್ರವು ಹಳೆಯ ಕಾಲದ ಯಕ್ಷಗಾನ ಪ್ರಸಂಗಕರ್ತರಾದ ಹಟ್ಟಿಯಂಗಡಿ ರಾಮ ಭಟ್ಟ, ಹೊಸಕಾಲದ ಪ್ರಸಂಗಕರ್ತರಾದ ಡಿ. ಎಸ್. ಶ್ರೀಧರ, ಸೇರಾಜೆ ಸೀತಾರಾಮ ಭಟ್, ಡಾ. ರಾಘವ ನಂಬಿಯಾರ್ ಮೊದಲಾದ ಹಿರಿಯ ಪ್ರಸಂಗಕರ್ತರ ಕೃತಿಸಂಪುಟಗಳನ್ನು ಪ್ರಕಟಿಸಿದೆ.

ಪ್ರಕೃತ ಭಾಸ್ಕರ ರಾಯರ ಕೃತಿಗಳಲ್ಲಿ ಹತ್ತನ್ನು ಆಯ್ದು ಸಂಪಾದಿಸಲಾಗಿದೆ. ಇನ್ನೊಂದು ಸಂಪುಟಕ್ಕೆ ಆಗುವಷ್ಟು ಪ್ರಸಂಗಗಳು ಅವರಲ್ಲಿವೆ. ಮೊದಲ ದಶಕ ಇದೀಗ ಪ್ರಕಟಗೊಳ್ಳುತ್ತಿದೆ. ಇನ್ನೊಂದು ದಶಕವೂ ಪ್ರಕಟಗೊಳ್ಳಲೆಂದು ಮನಃಪೂರ್ವಕವಾಗಿ ಹಾರಯಿಸುತ್ತೇನೆ. ಈ ಪ್ರಸಂಗಸಂಪುಟದ ಸಂಕಲನ, ಸಂಪಾದನೆ, ಕರಡಚ್ಚು ತಿದ್ದುಪಡಿ, ಕಥಾಸಾರಸಂಗ್ರಹ, ಪ್ರಸ್ತಾವನೆಯ ಬರೆಹ, ಪುಸ್ತಕ ವಿನ್ಯಾಸ ಇತ್ಯಾದಿಗಳಲ್ಲಿ ತಮ್ಮ ಪರಿಶ್ರಮವನ್ನು ವಿನಿಯೋಗಿಸಿದವರು ನಮ್ಮ ಮಾನ್ಯ ಮಿತ್ರರಾದ ಡಾ. ಪಾದೇಕಲ್ಲು ವಿಷ್ಣು ಭಟ್ಟರು. ಯಕ್ಷಗಾನಪ್ರಸಂಗಗಳ ಸಂಪಾದನೆಯಲ್ಲಿ ಅವರಿಗೆ ಈಗಾಗಲೆ ಸಾಕಷ್ಟು ಅನುಭವವಿದೆ. 2016ರಲ್ಲಿ ಉಡುಪಿಯ ಯಕ್ಷಗಾನ ಕೇಂದ್ರದಿಂದ ಪ್ರಕಟಗೊಂಡ ಅವರ 'ಯಕ್ಷಗಾನಾಧ್ಯಯನ' ಎಂಬ ಅಭ್ಯಾಸಪೂರ್ಣ ಲೇಖನಸಂಕಲನಕ್ಕೆ 2017ರಲ್ಲಿ ಕರ್ನಾಟಕ ಯಕ್ಷಗಾನ ಬಯಲಾಟ ಅಕಾಡೆಮಿಯ ಬಹುಮಾನ ಬಂದಿರುವುದನ್ನು ನೆನಪಿಸಿಕೊಳ್ಳುತ್ತೇನೆ. ನಮ್ಮ ಪ್ರಕಾಶನದಿಂದ ಈ ಪುಸ್ತಕವು ಹೊರಬರಲು ಶ್ರಮವಹಿಸಿದ ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ.

ಕೃತಿಯ ಅಕ್ಷರಸಂಯೋಜನೆಯನ್ನು ಚೆನ್ನಾಗಿ ಮಾಡಿಕೊಟ್ಟ ಶ್ರೀಮತಿ ಸವಿತಾ ಶಾಂತಪ್ರಿಯ, ರಕ್ಷಾಕವಚವಿನ್ಯಾಸ ಮಾಡಿಕೊಟ್ಟ ಡಾ. ಬಾ. ನಾ. ಶಾಂತಪ್ರಿಯ, ಮುದ್ರಿಸಿದ ಮಂಗಳೂರಿನ ಪ್ರಕಾಶ್ ಆಫ್‌ಸೆಟ್ ಪ್ರಿಂಟರ್ಸ್ – ಇವರೆಲ್ಲರಿಗೆ ವಂದನೆಗಳು. ಕವಿ ಅಗರಿ ಭಾಸ್ಕರ ರಾಯರಿಗೆ ಅಭಿನಂದನೆಗಳನ್ನು ಸಲ್ಲಿಸಿ ವಿರಮಿಸುತ್ತೇನೆ.

ವಿಲಂಬ ಸಂ.। ಚೈತ್ರ ಶು. ೯ ಹೆರಂಜೆ ಕೃಷ್ಣ ಭಟ್ಟ
ಶ್ರೀರಾಮನವಮಿ, 25-03-2018 ಶೇವಧಿ ಪ್ರಕಾಶನ, ಉಡುಪಿ

ಮನದ ಮಾತು

ಇದುವರೆಗೆ ನಾನು ಬರೆದ ಮೂವತ್ತಕ್ಕೂ ಹೆಚ್ಚಿನ ಯಕ್ಷಗಾನಪ್ರಸಂಗಗಳ ಪೈಕಿ ಹತ್ತು ಯಕ್ಷಗಾನ ಪ್ರಸಂಗಗಳ ಸಂಪುಟವೊಂದನ್ನು ತಮ್ಮ ಮುಂದಿಡಲು ತುಂಬಾ ಸಂತೋಷಪಡುತ್ತೇನೆ. ಈ ಹತ್ತು ಯಕ್ಷಗಾನಪ್ರಸಂಗಗಳು ವಿಭಿನ್ನ ಕಥಾವಸ್ತುಗಳನ್ನು ಒಳಗೊಂಡಿದ್ದು, ಬೇರೆ ಬೇರೆ ಸಂದರ್ಭಗಳಲ್ಲಿ ನನ್ನಿಂದ ರಚಿಸಲ್ಪಟ್ಟವುಗಳಾಗಿರುತ್ತವೆ. ಈ ಪ್ರಸಂಗಗಳ ಕಥೆಗಳನ್ನು ನನ್ನ ಮಿತ್ರರು ಒದಗಿಸಿದ್ದು ಆ ಹಂದರಕ್ಕೆ ಯಕ್ಷಗಾನದ ಸ್ವರೂಪವನ್ನು ತರಲು ಬೇಕಾದ ಪರಿಷ್ಕರಣಗಳನ್ನು ನಾನು ಕಲ್ಪಿಸಿ ಮಾಡಿಕೊಂಡಿರುತ್ತೇನೆ. ಕಥೆಗಳನ್ನು ನೀಡಿದವರಿಗೆ ನನ್ನ ಕೃತಜ್ಞತೆಯಿದೆ. ಅವರ ಹೆಸರುಗಳನ್ನು ಪ್ರಸಂಗದೊಳಗೆ ಪದ್ಯಗಳಲ್ಲಿ ದಾಖಲಿಸಿರುತ್ತೇನೆ.

ಯಕ್ಷಗಾನ ಪ್ರಸಂಗರಚನಾಕೌಶಲ ನನಗೆ ನನ್ನ ತೀರ್ಥರೂಪದಿಂದ ಆಶೀರ್ವಾದಪೂರ್ವಕವಾಗಿ ಬಂದ ಕಲೆಯೆಂದು ನನ್ನ ಶ್ರದ್ಧಾಪೂರ್ವಕವಾದ ನಂಬುಗೆ. ನನ್ನ ತೀರ್ಥರೂಪರಾದ ಅಗರಿ ಶ್ರೀನಿವಾಸ ಭಾಗವತರು ತೆಂಕುತಿಟ್ಟಿನ ಯಕ್ಷಗಾನಕ್ಷೇತ್ರದಲ್ಲಿ ದಂತಕಥೆಯಂತೆ ಮೆರೆದವರು. ಸಂದರ್ಭಕ್ಕೆ ಬೇಕಾದಂತೆ ಆಶುರೂಪದಲ್ಲಿ ಪದ್ಯಗಳನ್ನು ರಚಿಸಿ ಹಾಡುವುದರಲ್ಲಿ ಅವರು ನಿಪುಣರಾಗಿದ್ದರು. ಅವರ ಕಾವ್ಯರಚನಾಶಕ್ತಿಯನ್ನು ನಮಗೆ ಅವರು ಬಳುವಳಿಯಾಗಿ ಇತ್ತಿರುವರೆಂದು ಅವರನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ. ನನ್ನ ಅಣ್ಣ ಅಗರಿ ರಘುರಾಮ ಭಾಗವತರು ತಂದೆಯವರ ಭಾಗವತಿಕೆಯನ್ನು ಮುಂದುವರಿಸಿದ್ದಲ್ಲದೆ ಪ್ರಸಂಗಗಳನ್ನೂ ರಚಿಸಿದ್ದಾರೆ. ಹೀಗೆ ಭಾಗವತಿಕೆ ಮತ್ತು ಪ್ರಸಂಗರಚನೆ ತಮ್ಮ ಮಕ್ಕಳಲ್ಲಿ ಮುಂದುವರಿದಿರುವ ಕುರಿತು ನಮ್ಮ ತಂದೆಯವರಿಗೆ ತುಂಬ ಸಮಾಧಾನವಿತ್ತು. ಅದಕ್ಕೆ ನಾನು ರಚಿಸಿದ ಪ್ರಸಂಗಕ್ಕೆ ಆಟದಲ್ಲಿಯೂ ತಾಳಮದ್ದಳೆಯಲ್ಲಿಯೂ ಅವರು ಭಾಗವತಿಕೆ ಮಾಡಿರುವುದೇ ಸಾಕ್ಷಿಯೆಂದು ನಾನು ತಿಳಿದುಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಈ ಸಂಪುಟವನ್ನು ಅವರ ಚರಣಾರವಿಂದಗಳಿಗೆ ಭಕ್ತಿಯಿಂದ ಸಮರ್ಪಿಸುತ್ತಿದ್ದೇನೆ.

ಈ ಸಂಪುಟದಲ್ಲಿ ಸಂಕಲಿಸಲ್ಪಟ್ಟ ಯಕ್ಷಗಾನಪ್ರಸಂಗಗಳ ಪೈಕಿ 'ಶ್ರೀವಿಶ್ವಕರ್ಮಮಹಾತ್ಮೆ'ಯಲ್ಲಿ ಸೃಷ್ಟಿಯ ರಹಸ್ಯವನ್ನು ಹೇಳುವ, ಭಗವಂತನನ್ನು ಹೇಗೆ ನಾವು ಕಾಣಬಹುದು ಎಂಬೆಲ್ಲ ವಿಷಯಗಳು ಋಗ್ವೇದದ ಆಧಾರದಿಂದ ತೆಗೆದುಕೊಂಡಂತಹವುಗಳಾಗಿವೆ. ಈ ಪ್ರಸಂಗವು 1972ರಲ್ಲಿ ಅಖಿಲ ಭಾರತ ವಿಶ್ವಕರ್ಮ ಪರಿಷತ್ತಿನಲ್ಲಿ (ಮಂಗಳೂರು ಉರ್ವ ಮಾರ್ಕೆಟು) ಯಶಸ್ವಿಯಾಗಿ ಪ್ರದರ್ಶನಗೊಂಡಿತು. ಆಗಿನ ಮಂಗಳೂರು ಸ್ನಾತಕೋತ್ತರ ಕೇಂದ್ರದ ಕನ್ನಡ ಪ್ರಾಧ್ಯಾಪಕರಾಗಿದ್ದ ಪ್ರೊ. ಎಸ್. ವಿ. ಪರಮೇಶ್ವರ ಭಟ್ಟರು ಈ ಪ್ರಸಂಗಕ್ಕೆ

ಮುನ್ನುಡಿಯನ್ನು ಬರೆದು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಶೇಣಿ, ಸಾಮಗ, ಪೆರ್ಲ ಮೊದಲಾದ ದಿಗ್ಗಜರ ಸಾರಥ್ಯದಲ್ಲಿ ಅಗರಿ ಭಾಗವತರ ಭಾಗವತಿಕೆಯಲ್ಲಿ ಈ ಪ್ರಸಂಗ ಮೆರೆದದ್ದು ಒಂದು ಇತಿಹಾಸ. 1974ರಲ್ಲಿ ನಾನು ಬರೆದ 'ಮಂತ್ರಾಲಯ ಮಹಾತ್ಮೆ'ಯೂ ಯಕ್ಷಗಾನಪ್ರದರ್ಶನಗಳಲ್ಲಿ ಒಂದು ಅದ್ಭುತ ಇತಿಹಾಸವನ್ನು ಬರೆಯಿತು. ಬೆಂಗಳೂರು, ಮೈಸೂರು, ಉಡುಪಿ, ಮಂಗಳೂರು ಮೊದಲಾದ ಕಡೆ ಅದರ ಯಶಸ್ವೀಪ್ರದರ್ಶನಗಳು ನಡೆದು ಶೇಣಿ ಗೋಪಾಲಕೃಷ್ಣ ಭಟ್ಟರ ರಾಘವೇಂದ್ರ ಸ್ವಾಮಿಗಳ ಪಾತ್ರ ಮನೆಮಾತಾಗಿ ಮೆರೆದದ್ದು ನನ್ನ ಪೂರ್ವಪುಣ್ಯವೇ ಸರಿ. 'ವೀರರಾಣಿ ಅಪ್ರಮೇಯಿ' ಯಕ್ಷಗಾನಪ್ರಸಂಗ ಸುಧನ್ವಕಾಳಗದ ಅನಂತರ ನಡೆದುದೆಂದು ಕಲ್ಪಿಸಲಾದ ಒಂದು ಸುಂದರ ಕಥಾಭಾಗ. ಇದು ಸಂಪೂರ್ಣವಾಗಿ ಕಾಲ್ಪನಿಕವಾದರೂ, ಪೌರಾಣಿಕ ಹಿನ್ನೆಲೆಯಲ್ಲಿಯೇ ಈ ಪ್ರಸಂಗದ ರಚನೆಯಾಗಿದೆ. ಇದು ತೆಂಕು ಹಾಗೂ ಬಡಗು ತಿಟ್ಟುಗಳಲ್ಲಿ ಸಾವಿರಕ್ಕೂ ಅಧಿಕ ಯಶಸ್ವೀ ಪ್ರಯೋಗಗಳನ್ನು ಕಂಡಿದೆ. ಅದೇ ಸಮಯದಲ್ಲಿ ರಚಿಸಿದ 'ತಪಸ್ವೀ ಮಹೇಂದ್ರ' ಸಂಪೂರ್ಣ ಪೌರಾಣಿಕಪ್ರಸಂಗ. ನೃಸಿಂಹ ಉಪಪುರಾಣದ ಆಧಾರದಿಂದ ರಚಿಸಲ್ಪಟ್ಟ ಈ ಕಥಾನಕ ಇಂದಿಗೂ ಅನೇಕ ಕಡೆ ಪ್ರದರ್ಶನಗಳನ್ನು ಕಾಣುತ್ತಿದೆ. 'ಅಗಸ್ತ್ಯಚರಿತೆ'ಯೂ ಸಂಪೂರ್ಣ ಪೌರಾಣಿಕ ಹಿನ್ನೆಲೆಯದೇ ಆಗಿದ್ದು ಯಾವುದೇ ಕಾಲ್ಪನಿಕರಚನೆ ಇದರಲ್ಲಿ ಇರುವುದಿಲ್ಲ. 'ಶ್ರೀವಾಣೀವಿಲಾಸ' ಒಂದು ವಿಶಿಷ್ಟವಾದ ಕಥಾನಕವನ್ನು ಹೊಂದಿದ್ದು ಪ್ರಸಿದ್ಧ ಯಕ್ಷಗಾನ ವಿಮರ್ಶಕರಿಂದ ಪ್ರಶಂಸಿಸಲ್ಪಟ್ಟಿದೆ. ಹಾಗೆಯೇ ತ್ರಿಕಣ್ಣೇಶ್ವರೀಮಹಾತ್ಮೆ ದೇವೀಮಹಾತ್ಮೆಯನ್ನು ಸಾರುವ ಕಥೆ. ಇದು ದೇವೀಭಾಗವತ ಹಾಗೂ ಶಿವಪುರಾಣದ ಆಧಾರದಿಂದ ರಚಿಸಲ್ಪಟ್ಟಿದೆ. 'ಶ್ರೀಹರಿಲೀಲಾರ್ಣವ'ವು ಸಾಮಾನ್ಯವಾಗಿ ಇತರ ಯಕ್ಷಗಾನ ಪ್ರಸಂಗಗಳಲ್ಲಿ ಕಾಣದ ಸಾಹಿತ್ಯಭಾಗವನ್ನು ಒಳಗೊಂಡಿದ್ದು ಕಲಿಯುಗದ ಭೀಕರತೆ, ಅದರ ನಿವಾರಣಮಾರ್ಗ ಹೇಗೆ, ಹರಿಹರರು ಒಂದೇ ಎಂಬುದು ಹೇಗೆ ಪುರಾಣಗಳಲ್ಲಿ ಹೇಳಲ್ಪಟ್ಟಿದೆ ಎಂಬ ಕಥಾವಿವರಗಳನ್ನು ಒಳಗೊಂಡಿದೆ. 'ಧರ್ಮವಿಜಯ' ಒಂದು ಕಾಲ್ಪನಿಕ ಸಾಮಾಜಿಕ ಯಕ್ಷಗಾನಪ್ರಸಂಗ. 'ರುದ್ರಾಂತರ್ಗತ ಲಕ್ಷ್ಮೀನರಸಿಂಹ' ಪ್ರಸಂಗವು ಹರಿಹರರ ಐಕ್ಯವನ್ನು ನಿರೂಪಿಸುವ ಕಥೆಯನ್ನು ಒಳಗೊಂಡಿದೆ.

ಹೀಗೆ ಎಲ್ಲ ಹತ್ತು ಯಕ್ಷಗಾನಪ್ರಸಂಗಗಳಿಗೆ ವೈವಿಧ್ಯ–ವೈಶಿಷ್ಟ್ಯಗಳಿರುವ, ಯಕ್ಷಗಾನಕ್ಕೆ ಒಂದಿಷ್ಟು ವಿನೂತನವಾದ ಕಥಾಭಾಗಗಳನ್ನು ಆಯ್ದುಕೊಂಡು ಕೃತಿರಚನೆ ಮಾಡಿರುತ್ತೇನೆ. ಕೃತಿಗಳು ಕಾವ್ಯದೃಷ್ಟಿಯಿಂದ ಹೇಗೆ ಸಫಲತೆಯನ್ನು ಪಡೆದಿವೆಯೆಂಬುದನ್ನು ಬಲ್ಲವರಾದ ವಿದ್ವಾಂಸರು ಹೇಳಬೇಕೆಂಬುದು ನನ್ನ ಸವಿನಯವಾದ ಕೋರಿಕೆ.

ಮುಖ್ಯವಾಗಿ ಈ ಯಕ್ಷಗಾನಪ್ರಸಂಗಗಳ ಒಂದು ಸಂಪುಟ ನಿಮ್ಮ ಮುಂದೆ ಇದೆಯೆಂದಾದರೆ ಅದಕ್ಕೆ ನಿಜವಾಗಿಯೂ ಕಾರಣವಾದವರು ಪ್ರೊ. ಹೆರಂಜೆ ಕೃಷ್ಣ ಭಟ್ಟ ಮತ್ತು ಡಾ. ಪಾದೇಕಲ್ಲು ವಿಷ್ಣು ಭಟ್ಟರು. ಇವರಿಬ್ಬರೂ ನನಗೆ ಧೈರ್ಯತುಂಬಿ

ಈ ಸಂಪುಟವು ಹೊರಬರಲು ಸಹಕಾರವನ್ನೂ ಮಾರ್ಗದರ್ಶನವನ್ನೂ ಮಾಡಿರುತ್ತಾರೆ. ಪ್ರೊ. ಹೆರಂಜೆಯವರು ನನ್ನ 'ಮಹಾಲಸಾನಾರಾಯಣೀ' ಪ್ರಸಂಗವನ್ನು ನೋಡಿ ಮೆಚ್ಚುಗೆಯನ್ನು ವ್ಯಕ್ತಪಡಿಸಿ ನನ್ನ ಪ್ರಸಂಗಗಳೆಲ್ಲ ಸಂಪುಟರೂಪದಲ್ಲಿ ಹೊರಬರಬೇಕೆಂದು ಸೂಚಿಸಿದ್ದಲ್ಲದೆ ಅದನ್ನು ಸಂಪಾದಿಸಿ ಸಂಪುಟರೂಪದಲ್ಲಿ ಸಿದ್ಧಪಡಿಸಲು ಯಕ್ಷಗಾನ ಗ್ರಂಥಾಧ್ಯಯನದ ಕ್ಷೇತ್ರದಲ್ಲಿ ಈಗಾಗಲೇ ಸಾಕಷ್ಟು ಪರಿಶ್ರಮವಹಿಸಿ ಪ್ರಸಿದ್ಧರಾದ ವಿದ್ವಾಂಸರಾದ ಡಾ. ಪಾದೇಕಲ್ಲು ವಿಷ್ಣು ಭಟ್ಟರನ್ನು ಒಪ್ಪಿಸಿದರು. ಪ್ರಸಂಗಗಳನ್ನು ಸಂಪುಟವಾಗಿ ರೂಪಿಸಲು ಅವಶ್ಯವಿರುವ ಹಲವು ವಿಷಯಗಳನ್ನು ಡಾ. ಪಾದೇಕಲ್ಲು ವಿಷ್ಣು ಭಟ್ಟರು ನನಗೆ ಸೂಚಿಸಿದರು. ಕೆಲವು ಪ್ರಸಂಗಗಳಿಗೆ ಅಲ್ಲಲ್ಲಿ ಒಂದೆರಡು ಹೊಸ ಪದ್ಯಗಳನ್ನೂ ಅವರ ಸೂಚನೆಯಂತೆ ಸೇರಿಸಲಾಯಿತು. ಪ್ರಸ್ತಾವನೆ–ಕಥಾಸಾರಗಳನ್ನು ಬರೆದು ಕರಡಚ್ಚು ತಿದ್ದಿ ಸಂಪುಟಕ್ಕೆ ಸುಂದರರೂಪವನ್ನು ಒದಗಿಸಿದವರು ಅವರು. ಪ್ರೊ. ಹೆರಂಜೆಯವರು ತಮ್ಮ 'ಶೇವಧಿ ಪ್ರಕಾಶನ'ದ ಮೂಲಕ ಸಂಪುಟವನ್ನು ಪ್ರಕಟಿಸುವ ಕೆಲಸವನ್ನು ಮಾಡಿದರು. ಹೀಗೆ, ಅವರಿಬ್ಬರು ನನ್ನಲ್ಲಿ ತೋರಿದ ಪ್ರೀತಿ ಪ್ರೇಮಗಳಿಗೆ ಜೀವನಪರ್ಯಂತ ಆಭಾರಿಯಾಗಿರುತ್ತೇನೆ. ಈ ಸಂಪುಟವನ್ನು ಯಕ್ಷಗಾನಕ್ಷೇತ್ರದ ಅಧ್ಯಯನಶೀಲ ವ್ಯಕ್ತಿಗಳು ಪ್ರೀತಿವಿಶ್ವಾಸಗಳಿಂದ ಬರಮಾಡಿಕೊಂಡಲ್ಲಿ ನನಗೆ ತುಂಬ ಸಂತೋಷ. ಆಗ ನನ್ನ ಇತರ ಪ್ರಸಂಗಗಳನ್ನೂ ಸಂಪುಟವಾಗಿ ಪ್ರಕಟಿಸಲು ಉತ್ಸಾಹ ಮೂಡಿಬರಬಹುದು. ಯಕ್ಷಗಾನಕವಿಗಳ ಕೃತಿಗಳು ಹೀಗೆ ಸಾಹಿತ್ಯಸಂಪುಟಗಳಾಗಿ ಹೊರಬರಲೆಂದು ಹೃತ್ಪೂರ್ವಕವಾಗಿ ಹಾರಯಿಸುತ್ತೇನೆ.

ಚಾಂದ್ರಮಾನ ಯುಗಾದಿ
18, ಮಾರ್ಚ್, 2018

ಅಗರಿ ಭಾಸ್ಕರ ರಾವ್
ಯಕ್ಷಗಾನ ಪ್ರಸಂಗಕರ್ತ

ವಿಷಯಾನುಕ್ರಮ

* * *

ಪ್ರಸ್ತಾವನೆ

ಯಕ್ಷಗಾನದಲ್ಲಿ ಸಾಮಾನ್ಯವಾಗಿ ಲಿಖಿತಸ್ವರೂಪದಲ್ಲಿದ್ದು ಪದ್ಯಾತ್ಮಕವಾಗಿರುವ ಕಥಾಭಾಗವನ್ನು ಪ್ರಸಂಗವೆನ್ನಲಾಗುತ್ತದೆ. ಯಕ್ಷಗಾನಪ್ರದರ್ಶನಕ್ಕೆ ಇದುವೇ ಮೂಲಾಧಾರ. ನಮ್ಮ ನಾಡಿನಲ್ಲಿ ನೂರಾರು ಮಂದಿ ಯಕ್ಷಗಾನದ ಪ್ರಸಂಗಕಾರರು ಆಗಿಹೋಗಿದ್ದಾರೆ. ಯಕ್ಷಗಾನಕವಿಗಳೆಂದರೆ ಅವರೇ. ಯಕ್ಷಗಾನಸಾಹಿತ್ಯಕ್ಕೆ ಸಂಬಂಧಿಸಿದಂತೆ ಈ ಪ್ರಸಂಗಕರ್ತರನ್ನು ನಮ್ಮ ಕನ್ನಡ ಸಾಹಿತ್ಯಚರಿತ್ರೆಯಲ್ಲಿ ಸರಿಯಾಗಿ ಗುರುತಿಸದುದರಿಂದ ಕನ್ನಡದ ಒಂದು ಮುಖ್ಯ ಸಾಹಿತ್ಯಪ್ರಕಾರವು ಒಂದಷ್ಟು ಸಮಯ ಅವಗಣಿತವಾಗಿದ್ದುದು ಹೌದು. ಆದರೆ ಇತ್ತೀಚೆಯ ದಿನಗಳಲ್ಲಿ ಈ ಬಗೆಗೆ ಹೊಸ ವಿಮರ್ಶೆಗಳು ನಡೆದು ಯಕ್ಷಗಾನಸಾಹಿತ್ಯವನ್ನು ಸಾಹಿತ್ಯಚರಿತ್ರೆಯೊಳಗಡೆ ಸೇರಿಸಿಕೊಳ್ಳಲಾಗಿದೆ ಮತ್ತು ಬಹಳ ದಿನಗಳಿಂದ ಯಕ್ಷಗಾನಕ್ಷೇತ್ರದ ವಿದ್ವಾಂಸರು ಈ ಬಗೆಗೆ ಮಾಡುತ್ತಿದ್ದ ಪ್ರತಿಪಾದನೆಗೆ ಸರಿಯಾದ ಬೆಲೆ ಬಂದಿದೆ. ಸಾಹಿತ್ಯಚರಿತ್ರೆಯ ಸಾಮಾನ್ಯ ಪರಿಕಲ್ಪನೆಯೂ ಕಾಲಕಾಲಕ್ಕೆ ಬದಲಾಗುತ್ತ ಬಂದು ಹೊಸ ರೂಪಗಳನ್ನು ಪಡೆದಿದೆಯೆಂಬುದು ಕೂಡ ಸಾಹಿತ್ಯಚರಿತ್ರೆಯ ರಚನೆಯ ಇತಿಹಾಸವನ್ನು ಗಮನಿಸಿದಾಗ ತಿಳಿಯುತ್ತದೆ. ಸಾಹಿತ್ಯಕೃತಿಗಳು ಸಾಹಿತ್ಯಚರಿತ್ರೆಯೊಳಗೆ ಪರಿಗಣಿತವಾಗಬೇಕಾದರೆ ಆ ಕೃತಿಗಳ ಮಾಹಿತಿ ದೊರಕಿರಬೇಕು; ಅವು ಉಪಲಬ್ಧವಾಗಿರಬೇಕು ಮತ್ತು ಸರಿಯಾದ ರೀತಿಯಲ್ಲಿ ಸಂಪಾದಿತವಾಗಿ ಹಾಗೂ ಮುದ್ರಿತವಾಗಿ ವಿದ್ವಾಂಸರ ಮತ್ತು ವಿಮರ್ಶಕರ ಗಮನಕ್ಕೆ ಬರುವಂತಾಗಬೇಕು. ಇಲ್ಲದಲ್ಲಿ ಅವುಗಳು ಸಾಹಿತ್ಯದ ಇತಿಹಾಸವನ್ನು ರಚಿಸುವಾಗ ಯಾವುದೇ ಉಲ್ಲೇಖವನ್ನು ಪಡೆಯದೆ ಹೋಗುವ ಸಾಧ್ಯತೆಗಳಿವೆ. ಆ ದೃಷ್ಟಿಯಿಂದ ಇತ್ತೀಚೆಯ ವರ್ಷಗಳಲ್ಲಿ ಯಕ್ಷಗಾನದ ಪ್ರಸಂಗಸಂಪುಟಗಳು ಪ್ರಕಟಗೊಳ್ಳುತ್ತಿರುವುದನ್ನು ನಾವು ಗಮನಿಸಬೇಕು. ದಾಖಲೆಗೆ ಒದಗುವ ದೃಷ್ಟಿಯಿಂದಲೂ ಅಧ್ಯಯನಕ್ಕೆ ಒದಗುವ ದೃಷ್ಟಿಯಿಂದಲೂ ಈ ರೀತಿಯ ಸಂಪುಟಗಳು ಬಹಳ ಮುಖ್ಯವಾಗುತ್ತವೆ.

ಕ್ರಿ.ಶ. 1975ರಲ್ಲಿ 'ಪಾರ್ತಿಸುಬ್ಬನ ಯಕ್ಷಗಾನಗಳು' ಎಂಬ ಯಕ್ಷಗಾನ ಪ್ರಸಂಗಸಂಪುಟವು ಕುಕ್ಕಿಲ ಕೃಷ್ಣ ಭಟ್ಟರ ಸಂಪಾದಕತ್ವದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಿಂದ ಪ್ರಕಟಗೊಂಡ ಮೇಲೆ ಈ ರೀತಿಯ ಪ್ರಸಂಗಸಂಪುಟಗಳ ಕಲ್ಪನೆ ಈ ಕ್ಷೇತ್ರದಲ್ಲಿ ಬಂತೆನ್ನಬಹುದು. ಕಳೆದ ಸುಮಾರು ೨೫ ವರ್ಷಗಳ ಅವಧಿಯಲ್ಲಿ ಹಳೆಯ ಮತ್ತು ಹೊಸ ಪ್ರಸಂಗಕಾರರ ಹಲವು ಪ್ರಸಂಗಸಂಪುಟಗಳು ಪ್ರಕಟಗೊಂಡು ಅಧ್ಯಯನಾಸಕ್ತರಿಗೆ

ಉಪಲಬ್ಧವಾಗಿರುವುದನ್ನು ಇಲ್ಲಿ ಹೇಳಬೇಕಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಜಾನಪದ ಗ್ರಂಥಸಂಪುಟಗಳನ್ನು ತರುವಲ್ಲಿ ಯಕ್ಷಗಾನಕ್ಕೆ ಪ್ರಾಧಾನ್ಯವನ್ನು ಕೊಟ್ಟು ಹಲವು ಸಂಪುಟಗಳನ್ನು ಪ್ರಕಟಿಸಿರುವುದನ್ನು ಕೂಡ ಇಲ್ಲಿ ನೆನೆಯಬಹುದಾಗಿದೆ. ಈ ಕ್ಷೇತ್ರದಲ್ಲಿ ಮಾಡಬೇಕಾದ ಕೆಲಸಗಳು ಇನ್ನಷ್ಟಿವೆ. ಗ್ರಂಥಸಂಪಾದನೆಯಲ್ಲಿ ಆಸಕ್ತರಾದ ಯಕ್ಷಗಾನಾಧ್ಯಯನಶೀಲರು ಸಾಕಷ್ಟು ಪರಿಶ್ರಮಪಡಲು ಇಲ್ಲಿ ಅವಕಾಶಗಳಿವೆ. ಹಳೆಯ ಹಲವು ಪ್ರಸಂಗಗಳು ತಾಳೆಯೋಲೆಯ ಹಸ್ತಪ್ರತಿಗಳಾಗಿಯೋ ಕಾಗದದ ಹಸ್ತಪ್ರತಿಗಳಾಗಿಯೋ ಉಳಿದಿವೆ. ಹಲವು ಹಸ್ತಪ್ರತಿಗಳು ಪ್ರಾಚೀನಪತ್ರಾಗಾರಗಳಲ್ಲಿಯೂ ಗ್ರಂಥಭಂಡಾರಗಳಲ್ಲಿಯೂ ಸಂಗ್ರಹಗೊಂಡಿದ್ದರೆ ಇನ್ನು ಹಲವು ಅಲ್ಲಿ ಇಲ್ಲಿ ಖಾಸಗಿ ವ್ಯಕ್ತಿಗಳ ಸಂಗ್ರಹಗಳಲ್ಲಿವೆ. ಈ ರೀತಿ ಖಾಸಗಿ ಸಂಗ್ರಹಗಳಿರುವ ಮನೆಗಳಲ್ಲಿ ಮುಂದೆ ಆ ವಿಷಯದಲ್ಲಿ ಆಸಕ್ತಿಯಿರುವವರು ಇಲ್ಲವಾದಲ್ಲಿ ಅವು ನಾಶವಾಗಿಯೇ ಹೋಗುವ ಸಂಭವವಿದೆ. ಆದುದರಿಂದ ಗ್ರಂಥಸಂಪಾದನಾಸಕ್ತರು ಈ ಬಗೆಗೆ ಶೀಘ್ರವಾಗಿ ಗಮನಹರಿಸಬೇಕಿದೆ.

ಕ್ರಿ.ಶ. 20ನೆಯ ಶತಮಾನದಲ್ಲಿ ಮುಖ್ಯವಾಗಿ ಕನ್ನಡ ಕರಾವಳಿ ಮತ್ತು ಮಲೆನಾಡು ಪರಿಸರದ ಯಕ್ಷಗಾನಪ್ರಸಂಗರಚನೆಯ ಕ್ಷೇತ್ರದಲ್ಲಿ ಆದ ಒಂದು ಪರಿವರ್ತನೆಯೆಂದರೆ ಯಕ್ಷಗಾನದ ವಸ್ತುವಿನ ಆಯ್ಕೆಯಲ್ಲಿ ಆದ ಬದಲಾವಣೆ. ಯಕ್ಷಗಾನಕ್ಷೇತ್ರದಲ್ಲಿ ಅದುವರೆಗೆ ಕಂಡುಬಾರದ ವಸ್ತುಗಳನ್ನಾಯ್ದುಕೊಂಡು ಪ್ರಸಂಗರಚನೆ ಮಾಡತೊಡಗಿದುದು ಇಲ್ಲಿ ಕಂಡುಬಂದ ಒಂದು ವಿಶಿಷ್ಟವಾದ ಪರಿವರ್ತನೆಯೇ ಸರಿ. ಐತಿಹಾಸಿಕವಾಗಿ ಗಮನಿಸುವುದಾದರೆ, ಈ ಬದಲಾವಣೆಗೆ ಕವಿಮುದ್ದಣನಲ್ಲಿಯೇ ಸೂಚನೆಗಳು ದೊರಕುತ್ತವೆ. ಕ್ರಿ.ಶ. 20ನೇ ಶತಮಾನದ ಉತ್ತರಾರ್ಧದಲ್ಲಿ ವಿಪುಲವಾಗಿ ರಚಿತವಾದ ಪ್ರಸಂಗಗಳಲ್ಲಿ ಈ ಬದಲಾವಣೆ ಸ್ಪಷ್ಟವಾಗಿ ಕಂಡುಬರುತ್ತದೆ. ಹಿಂದೆ ಸಾಮಾನ್ಯವಾಗಿ ಪ್ರಸಂಗಗಳು ರಾಮಾಯಣ-ಮಹಾಭಾರತವೆಂಬ ಆದಿಕಾವ್ಯ-ಇತಿಹಾಸಗ್ರಂಥಗಳಿಂದಲೂ ಭಾಗವತವೇ ಮೊದಲಾದ ಪುರಾಣಗಳಿಂದಲೂ ವಸ್ತುಗಳನ್ನು ಆಯ್ದುಕೊಂಡು ರಚಿತವಾಗುತ್ತಿದ್ದುವು. ಈ ಬದಲಾದ ಧೋರಣೆಯಲ್ಲಿ ಇಂತಹ ಪ್ರಸಿದ್ಧವಸ್ತುಗಳನ್ನು ಆಧರಿಸಿ ಬರೆಯುವ ಬದಲು ಕಾಲ್ಪನಿಕ ಮತ್ತು ಮಿಶ್ರವಸ್ತುಗಳನ್ನಾಧರಿಸಿ ಪ್ರಸಂಗರಚನೆ ಮಾಡುವ ಕ್ರಮ ಕಂಡುಬರುತ್ತದೆ. ಮೊದಮೊದಲಿಗೆ ಇದು ಹೊಸಪ್ರಯೋಗವೆಂಬಂತೆ ಕಂಡುಬಂದು ಆಮೇಲೆ ಹೊಸದಾದ ಪ್ರಕ್ರಮವೆಂಬಂತೆಯೋ ಕ್ರಮೇಣ ರೂಢಿಯೆಂಬಂತೆಯೋ ಮುಂದುವರಿಯಿತು.

ಮುಂದೆ ಪ್ರಸಂಗಕರ್ತರು ಸ್ಥಳಪುರಾಣಗಳನ್ನು ಪ್ರಸಂಗಕ್ಕೆ ವಸ್ತುವನ್ನಾಗಿ ಆಯ್ದುಕೊಂಡಾಗ ಅಲ್ಲಿ ಒಂದಿಷ್ಟು ಪುರಾಣಾಧಾರಗಳಿರುವ ಪೌರಾಣಿಕವಿಷಯಗಳು ಹಾಗೂ ಘಟನೆಗಳು, ಒಂದಿಷ್ಟು ಪೌರಾಣಿಕಸ್ವರೂಪದ ಕಥಾಭಾಗಗಳು, ಒಂದಿಷ್ಟು ಐತಿಹಾಸಿಕ ವಿಷಯಗಳು ಸೇರಿಕೊಂಡು ಅದಕ್ಕೆ ಕಾಲ್ಪನಿಕ ಕಥಾಭಾಗಗಳನ್ನು ಸೇರಿಸಿ ಪ್ರಸಂಗನಿರೂಪಣೆ ಮಾಡಬೇಕಾದ ಅನಿವಾರ್ಯತೆಯುಂಟಾಯಿತು.

ಸ್ಥಳಪುರಾಣಗಳೆಂದರೆ ಸಾಮಾನ್ಯವಾಗಿ ಐತಿಹ್ಯಗಳೇ ಸರಿ. ಅಲ್ಲಿ ಪೌರಾಣಿಕ ಕಥೆಗಳ ಅಂಶಗಳೂ ಇತಿಹಾಸದ ಅಂಶಗಳೂ ಬಿಡಿಸಲಾರದಂತೆ ಬೆರೆತಿರುವುದುಂಟು. ಸ್ಥಳಪುರಾಣಗಳ ಮೂಲವನ್ನು ಹುಡುಕುತ್ತ ಹೋದರೆ ಆ ಕಥಾಭಾಗಗಳು ಅಷ್ಟಾದಶಪುರಾಣಗಳಲ್ಲಿ ಲಭ್ಯವಾಗವು. ಕೆಲವು ಕಥೆಗಳಿಗೆ ಪುರಾಣಗಳ ಕೆಲವು ಕೊಂಡಿಗಳು ಮಾತ್ರ ದೊರಕಬಹುದು. ಆದರೂ ಅವುಗಳಿಗೆ 'ಸ್ಥಳಪುರಾಣ'ಗಳೆಂಬ ಮಾನ್ಯತೆ ದೊರಕಿದೆ. ಪುರಾಣಗಳಿಲ್ಲದಿದ್ದರೂ ಯಾವುದೊಂದು ಪ್ರಸಿದ್ಧ ಯಾತ್ರಾಕ್ಷೇತ್ರವನ್ನೋ ಧಾರ್ಮಿಕಕ್ಷೇತ್ರವನ್ನೋ ಶ್ರದ್ಧೆಯಿಂದ ನಂಬಿರುವ ಜನತೆ ಆ ಕಥೆಗಳು ಪುರಾಣಗಳಲ್ಲಿರುವ ಕಥೆಗಳೆಂಬುದಾಗಿಯೇ ವಿಶ್ವಾಸವಿಡುವುದುಂಟು. ಇವು ಪುರಾಣಮೂಲವಾದುವು ಹೌದೇ ಅಥವಾ ಅಲ್ಲವೇ ಎಂದು ಅವರು ವಿಮರ್ಶಿಸುವುದಿಲ್ಲ. ಇವನ್ನು ಜನಪದ ಪುರಾಣಗಳೆಂದೂ ಹೇಳಬಹುದು. ಇಂತಹ ಕಥೆಗಳನ್ನು ತೆಗೆದುಕೊಂಡು ಹೊಸರೀತಿಯ ಪ್ರಸಂಗರಚನೆಗೆ ಪ್ರಸಂಗಕರ್ತರು ಮುಂದಾದರು. ವಿವಿಧ ರೀತಿಯ ಪರಿವರ್ತನೆಗಳ ಹಂತದಲ್ಲಿದ್ದ ಯಕ್ಷಗಾನಕ್ಕೆ ವ್ಯಾವಹಾರಿಕವಾಗಿ ಕೂಡ ಇಂತಹ ಪ್ರಸಂಗಗಳು ಅವಶ್ಯವಾಗಿದ್ದಿರಬೇಕೆಂದು ಹೇಳುವುದರಲ್ಲಿ ತಪ್ಪಿಲ್ಲ. ಉದಾಹರಣೆಗೆ ಅಗರಿ ಶ್ರೀನಿವಾಸ ಭಾಗವತರ 'ಬಪ್ಪನಾಡು ಕ್ಷೇತ್ರಮಹಾತ್ಮೆ' ಎಂಬ ಪ್ರಸಂಗವು ಹಲವು ವರ್ಷಗಳ ಕಾಲ ರಂಗದಲ್ಲಿ ವಿಜೃಂಭಿಸಿತ್ತು. ಅಗರಿಯವರೇ ಭಾಗವತರಾಗಿ ಈ ಪ್ರಸಂಗವನ್ನು ರಂಗಕ್ಕೆ ತಂದರು. ಆರ್ಥಿಕವಾಗಿ ಮೇಳಕ್ಕೂ ಕಲಾವಿದರಿಗೂ ಇದು ವಿಶೇಷವಾದ ಪೋಷಣೆಯನ್ನಿತ್ತುದು ಕೂಡ ಗಮನಾರ್ಹ.

'ಬಪ್ಪನಾಡುಕ್ಷೇತ್ರಮಹಾತ್ಮೆ'ಯ ಈ ಅಗಾಧವಾದ ಜನಪ್ರಿಯತೆಯನ್ನು ಗಮನಿಸಿ ನಮ್ಮ ಪ್ರಸಂಗಕರ್ತರು ಅನಂತರ ಹಲವು ಕ್ಷೇತ್ರಗಳ ಸ್ಥಳಪುರಾಣ ಗಳನ್ನಾಧರಿಸಿ ಪ್ರಸಂಗರಚನೆಗೆ ಮುಂದಾದರು. ಹಲವಾರು ಕ್ಷೇತ್ರಗಳ ಆಡಳಿತಗಾರರ ವತಿಯಿಂದ ಪ್ರಸಂಗಕರ್ತರಿಗೆ ಪ್ರಸಂಗರಚನೆಗಾಗಿ ಬೇಡಿಕೆಗಳು ಬಂದುವು. ಹೀಗೆ ಕ್ಷೇತ್ರಮಹಾತ್ಮೆಯ ಪ್ರಸಂಗಗಳ ರಚನೆ ಬಹಳ ದೊಡ್ಡ ಪ್ರಮಾಣದಲ್ಲಿ ನಡೆಯಿತು. ಯಕ್ಷಗಾನರೂಪದಲ್ಲಿರಬಹುದಾದಷ್ಟು ಕ್ಷೇತ್ರಮಹಾತ್ಮೆ ಕೃತಿಗಳು ನಮ್ಮ ಸಾಹಿತ್ಯೇತಿಹಾಸದಲ್ಲಿ ಷಟ್ಪದಿ, ಸಾಂಗತ್ಯ ಮೊದಲಾದ ಅನ್ಯಸಾಹಿತ್ಯರೂಪಗಳಲ್ಲಿ ಇಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಮೊತ್ತಮೊದಲು ಕ್ಷೇತ್ರಮಹಾತ್ಮೆಯನ್ನು ಬರೆದವರು ಯಾರು? ಮತ್ತು ಆ ಪ್ರಸಂಗ ಯಾವುದು? ಎಂಬ ಬಗೆಗೆ ಸಂಶೋಧನೆ ನಡೆದು ಖಚಿತತೆ ಇನ್ನಷ್ಟೇ ತಿಳಿಯಬೇಕಾಗಿದೆ. ಅಗರಿ ಶ್ರೀನಿವಾಸ ಭಾಗವತರು ಕ್ಷೇತ್ರಮಹಾತ್ಮೆಯ ರಚನೆ ಮಾಡಿ ಹೆಚ್ಚು ಹೆಸರು ಪಡೆದವರಾದರೂ ಹಾಗೆ ರಚನೆ ಮಾಡಿದವರಲ್ಲಿ ಮೊದಲಿಗರೇನೂ ಅಲ್ಲ. 'ಕೊಲ್ಲೂರುಕ್ಷೇತ್ರಮಹಾತ್ಮೆ' ಮತ್ತು 'ಧರ್ಮಸ್ಥಳ ಕ್ಷೇತ್ರಮಹಾತ್ಮೆ'ಗಳು ಆ ಮೊದಲೇ ರಚಿತವಾಗಿದ್ದುವು ಮತ್ತು ರಂಗದ ಮೇಲೂ ಬಂದಿದ್ದುವು. 'ಕಟೀಲುಕ್ಷೇತ್ರಮಹಾತ್ಮೆ'ಯೂ ಸುಮಾರು ಅದೇ ಕಾಲಕ್ಕೆ ರಚಿತವಾದ ಪ್ರಸಂಗ. 'ಕೊಲ್ಲೂರುಕ್ಷೇತ್ರಮಹಾತ್ಮೆ'ಯು ಕವಿ ಕನ್ಯಾನ ವೆಂಕಟರಮಣ

ಭಟ್ಟರಿಂದ ರಚಿಸಲ್ಪಟ್ಟು 1954ರಲ್ಲಿ ಮುದ್ರಿತವಾದುದು ತಿಳಿಯುತ್ತದೆ. ಏನಿದ್ದರೂ ಈ ಕ್ಷೇತ್ರಮಹಾತ್ಮೆಯೆಂಬ ಪ್ರಸಂಗವಿಭಾಗವು ಯಕ್ಷಗಾನಕ್ಷೇತ್ರದಲ್ಲಿ ಪ್ರತ್ಯೇಕವಾಗಿ ಅಧ್ಯಯನಯೋಗ್ಯವಾದ ಒಂದು ವಿಷಯವೆಂದು ಒತ್ತಿಹೇಳಬಹುದಾಗಿದೆ. ಈ ಬಗೆಗೆ ಪ್ರತ್ಯೇಕವಾಗಿ ಗಂಭೀರ ಅಧ್ಯಯನ–ಸಂಶೋಧನೆಗಳು ನಡೆಯಬೇಕಿವೆ.

ಕ್ರಿ.ಶ. 20ನೆಯ ಶತಮಾನದಲ್ಲಿ ಯಕ್ಷಗಾನ ಪ್ರಸಂಗಸಾಹಿತ್ಯದ ಬೆಳೆ ಸಾಕಷ್ಟು ಹುಲುಸಾಗಿರುವುದನ್ನು ಎತ್ತಿ ಹೇಳಬೇಕಿದೆ. ಕನ್ನಡಸಾಹಿತ್ಯಕ್ಷೇತ್ರದಲ್ಲಿ ಇದೊಂದು ವಿಶಿಷ್ಟವಾಗಿ ಗಮನಿಸಬೇಕಾದ ಸಂಗತಿಯಾಗಿದೆ. ಈ ಕಾಲದಲ್ಲಿ ಯಕ್ಷಗಾನದ ರಂಗತಂತ್ರಗಳನ್ನು ಮತ್ತು ಹಾಡಿನ ರಚನೆಯ ವಿಧಾನಗಳನ್ನು ಸರಿಯಾಗಿ ಬಲ್ಲ ಹಲವು ಭಾಗವತರು ಪ್ರಸಂಗಸಾಹಿತ್ಯಕ್ಷೇತ್ರವನ್ನು ಸಾಕಷ್ಟು ಹುಲುಸುಗೊಳಿಸಿರುವುದನ್ನು ಉಲ್ಲೇಖಿಸಬೇಕು. ಭಾಗವತರಲ್ಲದ ಯಕ್ಷಗಾನಕವಿಗಳೂ ಪ್ರಸಂಗಸಾಹಿತ್ಯವನ್ನು ಸಾಕಷ್ಟು ರಚಿಸಿದುದುಂಟು. ಹಿಂದಿನ ಕಾಲದ ಹಲವು ಪ್ರಸಂಗಕಾರರು ಭಾಗವತರಾಗಿದ್ದರೇ ಎಂಬುದು ತಿಳಿಯದು. ಪಾರ್ತಿಸುಬ್ಬನ ಬಗೆಗೆ ಮಾತ್ರ ಅವನು ಭಾಗವತನಾಗಿದ್ದನೆಂಬ ಹೇಳಿಕೆಯಿದೆ. ಹಿಂದಿನ ಶತಮಾನಗಳ ಪ್ರಸಂಗಕಾರರಾದ ಹಟ್ಟಿಯಂಗಡಿ ರಾಮ ಭಟ್ಟ, ದೇವಿದಾಸ ಮೊದಲಾದವರು ಭಾಗವತರಾಗಿದ್ದರೇ ಎಂಬುದು ಖಚಿತವಾಗಿ ತಿಳಿಯದು. ಕ್ರಿ.ಶ. 20ನೇ ಶತಮಾನದ ಆದಿಕಾಲದಲ್ಲಿದ್ದು ವಿಪುಲವಾಗಿ ಪ್ರಸಂಗಸಾಹಿತ್ಯವನ್ನು ರಚಿಸಿದ ಹಲಸಿನಹಳ್ಳಿ ನರಸಿಂಹ ಶಾಸ್ತ್ರಿಗಳು ಕೂಡ ಭಾಗವತರಾಗಿ ಹೆಚ್ಚು ಪ್ರಸಿದ್ಧರಾಗಿರುವುದು ತಿಳಿಯದು. ಕ್ರಿ.ಶ. 20ನೆ ಶತಮಾನದಲ್ಲಿ ಯಕ್ಷಗಾನ ತೆಂಕುತಿಟ್ಟಿನ ಮೂವರು ಪ್ರಸಿದ್ಧ ಭಾಗವತರು ಸಾಕಷ್ಟು ಸಂಖ್ಯೆಯಲ್ಲಿ ರಂಗಪ್ರಯೋಗಕ್ಕನುಕೂಲಕರವಾದ ರೀತಿಯಲ್ಲಿ ಹಲವು ಪ್ರಸಂಗಗಳನ್ನು ಬರೆದು ಪ್ರಸಂಗಸಾಹಿತ್ಯಕ್ಷೇತ್ರವನ್ನು ಶ್ರೀಮಂತಗೊಳಿಸಿರುವ ವಿಷಯವು ಗಮನಾರ್ಹವಾಗಿದೆ. ಅವರಲ್ಲಿ ಹಿರಿಯ ಬಲಿಪ ನಾರಾಯಣ ಭಾಗವತರು (1889–1966), ಅಗರಿ ಶ್ರೀನಿವಾಸ ಭಾಗವತರು (1906–1997) ಮತ್ತು ಕಿರಿಯ ಬಲಿಪ ನಾರಾಯಣ ಭಾಗವತರು (ಜ. 1938) ಮುಖ್ಯರು. ಈ ಮೂವರು ಪ್ರಸಂಗಕರ್ತರ ಪ್ರಸಂಗಗಳು ಸಂಪುಟಗಳಾಗಿ ಪ್ರಕಟಗೊಂಡಿವೆ. ಬಡಗುತಿಟ್ಟಿನಲ್ಲಿ ಹೀಗೆ ವಿಪುಲವಾಗಿ ಪ್ರಸಂಗರಚನೆ ಮಾಡಿ ಈ ಕ್ಷೇತ್ರವನ್ನು ಸಮೃದ್ಧಗೊಳಿಸಿದವರು ಹೊಸ್ತೋಟ ಮಂಜುನಾಥ ಭಾಗವತರು (ಜ. 1938). ಭಾಗವತರಾಗಿ ಪ್ರಸಿದ್ಧರಲ್ಲದ, ಆದರೆ ಅರ್ಥಧಾರಿಗಳಾಗಿ ಹೆಸರು ಪಡೆದ ತೆಂಕುತಿಟ್ಟಿನ ಪ್ರದೇಶದ ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರೂ (1913–1986) ಬಡಗುತಿಟ್ಟು ಪ್ರದೇಶದ ಬೆಳಸಲಿಗೆ ಗಣಪತಿ ಹೆಗಡೆಯವರೂ (1913–1998) ಈ ಕ್ಷೇತ್ರವನ್ನು ಸಾಕಷ್ಟು ಶ್ರೀಮಂತಗೊಳಿಸಿದವರು. ಅಂಬೇಮೂಲೆ ಗೋವಿಂದ ಭಟ್ಟ (1934–2008), ಅಮೃತ ಸೋಮೇಶ್ವರ (ಜ. 1935), ರಾಘವ ನಂಬಿಯಾರ್ (ಜ. 1946), ಡಿ. ಎಚ್. ಶ್ರೀಧರ (ಜ. 1950) ಮೊದಲಾದ ಇತರ ಹಲವು ಗಣ್ಯ ಪ್ರಸಂಗಕರ್ತರೂ ಇದ್ದಾರೆ. ಇವರಲ್ಲಿ ಕೆಲವರ ಕೃತಿಗಳು ಮಾತ್ರ ಸಂಪುಟರೂಪದಲ್ಲಿ

ಪ್ರಕಟಗೊಂಡಿವೆ. ಇಂತಹ ಸಂಪುಟಗಳು ಯಕ್ಷಗಾನರಂಗದಲ್ಲಿ ಕೆಲಸ ಮಾಡುವ ವೃತ್ತಿನಿರತ ಭಾಗವತರ ದೃಷ್ಟಿಯಲ್ಲಿ ಅಷ್ಟಾಗಿ ಉಪಯೋಗಕ್ಕೆ ಬಾರದಾದರೂ ವಿಮರ್ಶಕರಿಗೆ, ಸಂಶೋಧಕರಿಗೆ, ಸಾಹಿತ್ಯಚರಿತ್ರಕಾರರಿಗೆ, ಯಕ್ಷಗಾನಸೂಚಿಗಳ ರಚಕರಿಗೆ, ಗ್ರಂಥಸಂಗ್ರಹಕಾರರಿಗೆ ಮತ್ತು ಈ ಪ್ರಸಂಗಕರ್ತರ ಅಭಿಮಾನಿಗಳಿಗೆ ತುಂಬ ಸಂತೋಷವನ್ನೂ ಅನುಕೂಲವನ್ನೂ ಉಂಟುಮಾಡುವಂತಹದಾಗಿದೆ. ದೊಡ್ಡ ಸಂಪುಟಗಳನ್ನಿರಿಸಿಕೊಂಡು ರಂಗದ ಮೇಲೆ ಭಾಗವತರು ಪದ್ಯಗಳನ್ನು ಹಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ಅವರಿಗೆ ಒಂದೊಂದೇ ಪ್ರಸಂಗವಿರುವ ಸಣ್ಣ ಸಣ್ಣ ಪುಸ್ತಕಗಳೇ ಬೇಕು. ಪುಸ್ತಕರಹಿತವಾಗಿ ಭಾಗವತರು ಹಾಡುವ ಕಾಲ ಕಳೆದುಹೋಗಿದೆಯೆಂದೇ ಹೇಳಬೇಕಾಗಿದೆ. ಏನಿದ್ದರೂ ಅಧ್ಯಯನಾಸಕ್ತ ಭಾಗವತರಿಗೂ ಸಂಪುಟಗಳು ಅವಶ್ಯವೇ.

ಪ್ರಕೃತ 'ಯಕ್ಷಗಾನ ಪ್ರಸಂಗದಶಕ'ವೆಂಬ ಪ್ರಸಂಗಸಂಪುಟದಲ್ಲಿ ಶೀರ್ಷಿಕೆಯೇ ತಿಳಿಸುವಂತೆ ಹತ್ತು ಪ್ರಸಂಗಗಳಿವೆ. ಈ ಪ್ರಸಂಗಗಳಲ್ಲಿ ಪೌರಾಣಿಕ, ಪೌರಾಣಿಕ ಮತ್ತು ಕಾಲ್ಪನಿಕ ಮಿಶ್ರಿತ, ಸ್ಥಳಪುರಾಣವನ್ನಾಧರಿಸಿದ, ಮಹಾವ್ಯಕ್ತಿಮಹಿಮೆಯನ್ನಾಧರಿಸಿದ ಪ್ರಸಂಗಗಳಿವೆ. ಅಗರಿ ಶ್ರೀನಿವಾಸ ಭಾಗವತರ ದಾರಿಯಲ್ಲಿಯೇ ನಡೆದು ಈ ಪ್ರಸಂಗಗಳು ರಚಿತವಾಗಿವೆಯೆಂಬುದು ಉಲ್ಲೇಖಿಸಬೇಕಾದ ವಿಷಯ. ಪ್ರಸಂಗಕರ್ತರಾದ ಅಗರಿ ಭಾಸ್ಕರರಾಯರಿಗೆ ತಮ್ಮ ತಂದೆಯವರು ಅಭಿಮಾನಕ್ಕೆ ಮತ್ತು ಗೌರವಕ್ಕೆ ಆಸ್ಪದರು ಮಾತ್ರವಲ್ಲ, ಪ್ರಸಂಗರಚನೆಗೆ ತಂದೆಯವರ ರಚನೆಗಳೇ ಮಾದರಿ.

* * *

ಅಗರಿ ಭಾಸ್ಕರ ರಾಯರು (ಜನನ : 1948) ತೆಂಕುತಿಟ್ಟಿನ ಪ್ರಸಿದ್ಧ ಯಕ್ಷಗಾನ ಭಾಗವತರಾದ ಅಗರಿ ಶ್ರೀನಿವಾಸ ರಾಯರ ಕಿರಿಯ ಮಗ. ಅಗರಿ ರಘುರಾಮ ಭಾಗವತರು (ಜನನ 1936) ಅಗರಿ ಭಾಗವತರ ಹಿರಿಯ ಮಗ. ರಘುರಾಮ ಭಾಗವತರು ತಂದೆಯವರ ಭಾಗವತಿಕೆಯ ಮಾರ್ಗವನ್ನು ಹಿಡಿದುಕೊಂಡು ಯಕ್ಷಗಾನದ ಕ್ಷೇತ್ರದಲ್ಲಿ ದುಡಿದರು. ತಮ್ಮ ಭಾಸ್ಕರ ರಾಯರು ಜೀವನಕ್ಕಾಗಿ ಸಿವಿಲ್ ಕಂಟ್ರಾಕ್ಟರ್ ಕಾರ್ಯವನ್ನು ಮತ್ತು ವ್ಯಾಪಾರೋದ್ಯಮವನ್ನು ನಿರ್ವಹಿಸಿದರೂ ತಮ್ಮ ತಂದೆ ದುಡಿದ ಯಕ್ಷಗಾನಕ್ಷೇತ್ರವನ್ನು ಬಿಡಲಿಲ್ಲ. ಅವರು ಯಕ್ಷಗಾನಪ್ರಸಂಗರಚನೆಯಲ್ಲಿ ತಮ್ಮ ತಂದೆಯವರನ್ನು ಅನುಸರಿಸಿ ಆ ಕ್ಷೇತ್ರದಲ್ಲಿ ಸಾಕಷ್ಟು ಸಾಧನೆಯನ್ನು ಮಾಡಿದರು. ಪ್ರಕೃತ 'ಯಕ್ಷಗಾನ ಪ್ರಸಂಗದಶಕ'ವೆಂಬ ಈ ಸಂಪುಟದಲ್ಲಿ ಅವರ ಆಯ್ದ ಹತ್ತು ಪ್ರಸಂಗಗಳು ಸಂಕಲಿತವಾಗಿ ಸಂಪಾದಿತವಾಗಿವೆ. ಇವುಗಳಲ್ಲಿ ಕೆಲವು ಈ ಹಿಂದೆ ಪ್ರಕಟಗೊಂಡಿವೆ; ಕೆಲವು ಅಪ್ರಕಟಿತ. ಈ ಸಂಪುಟದ ಪ್ರಸಂಗಗಳ ವಿವರ ಹೀಗಿದೆ :

1. ಶ್ರೀವಿಶ್ವಕರ್ಮಮಹಾತ್ಮೆ (ಪ್ರ. : 1973)
2. ಅಗಸ್ತ್ಯಚರಿತೆ (ಅಪ್ರಕಟಿತ)

3. ತಪಸ್ವೀ ಮಹೇಂದ್ರ (ಪ್ರ. : 1985)

4. ಧರ್ಮವಿಜಯ (ಪ್ರ. : 1982)

5. ರುದ್ರಾಂತರ್ಗತ ಲಕ್ಷ್ಮೀನರಸಿಂಹ (ಅಮುದ್ರಿತ)

6. ವೀರರಾಣಿ ಅಪ್ರಮೇಯಿ (ಪ್ರ. : 1982)

7. ಶ್ರೀಹರಿಲೀಲಾರ್ಣವ (ಪ್ರ. : 2015)

8. ಶ್ರೀದೇವೀ ತ್ರಿಕಣ್ಣೇಶ್ವರೀಮಹಾತ್ಮೆ (ಪ್ರ. : 2012)

9. ಶ್ರೀರಾಘವೇಂದ್ರಮಹಾತ್ಮೆ (ಅಮುದ್ರಿತ)

10. ಶ್ರೀವಾಣೀವಿಲಾಸ (ಪ್ರ. : 1984)

ಈ ಸಂಪುಟದಲ್ಲಿ ಸೇರದಿರುವ ಭಾಸ್ಕರ ರಾಯರ ಹಲವು ಪ್ರಸಂಗಗಳು ಇನ್ನೂ ಅಮುದ್ರಿತವಾಗಿ ಹಸ್ತಪ್ರತಿಯಲ್ಲಿವೆ. ಒಟ್ಟು ಸುಮಾರು ಮೂವತ್ತು ಪ್ರಸಂಗಗಳನ್ನು ರಚಿಸಿರುವುದಾಗಿ ಅವರು ಹೇಳುತ್ತಿದ್ದರೂ ಆ ಎಲ್ಲ ಪ್ರಸಂಗಗಳ ಹೆಸರುಗಳು ಅವರ ಸ್ಮರಣೆಯಲ್ಲಿಲ್ಲ. ಕೆಲವು ಹಸ್ತಪ್ರತಿಗಳು ಕೂಡ ಅವರಲ್ಲಿಲ್ಲ. ಅವರ ಸ್ಮರಣೆಯಲ್ಲಿರುವಂತೆ ಅವರು ರಚಿಸಿದ ಇತರ ಪ್ರಸಂಗಗಳ ವಿವರ ಹೀಗಿದೆ: 1. ಬರ್ಬರೀಕಪ್ರತಾಪ, 2. ನ್ಯಾಯಕೀರ್ತಿವಿಜಯ, 3. ಗುಂಡಬಾಳಕ್ಷೇತ್ರಮಹಾತ್ಮೆ, 5. ಕದ್ರಿಕ್ಷೇತ್ರಮಹಾತ್ಮೆ, 6. ಏಕಾದಶೀದೇವೀಮಹಾತ್ಮೆ, 7. ಅಂಗಾರವರ್ಮಕಾಳಗ, 8. ಸುಂದೋಪಸುಂದಕಾಳಗ, 9. ಪೆರ್ಡೂರುಕ್ಷೇತ್ರಮಹಾತ್ಮೆ, 10. ಕಲ್ಕಾಡಿ ಬಗ್ಗುಪಂಜುರ್ಲಿಪ್ರತಾಪ (ತುಳು), 11. ಬಂಗಾರ್ ಕೇದಗೆ (ತುಳು).

ಅಗರಿ ಭಾಸ್ಕರ ರಾಯರು ತಮ್ಮ ಪ್ರಸಂಗಗಳಿಗೆ ಪೌರಾಣಿಕ, ಕಾಲ್ಪನಿಕ, ಸ್ಥಳಪುರಾಣಾಂತರ್ಗತ ಕಥೆಗಳನ್ನೇ ಹೆಚ್ಚಾಗಿ ಆಧರಿಸಿದ್ದಾರೆ. ಸ್ಥಳಪುರಾಣಗಳ ಬಗೆಗೆ ಅವರಿಗೆ ಹೆಚ್ಚಿನ ಒಲವಿದೆ. ಅವರ 'ಗುಂಡಬಾಳಕ್ಷೇತ್ರಮಹಾತ್ಮೆ' ಅತ್ಯಧಿಕ ಪ್ರದರ್ಶನಗಳನ್ನು ಕಂಡ ಪ್ರಸಂಗವೆಂದು ತಿಳಿದುಬರುತ್ತದೆ. ಇಂದೂ ಉತ್ತರಕನ್ನಡ ಜಿಲ್ಲೆಯಲ್ಲಿ ಯಕ್ಷಗಾನಪ್ರದರ್ಶನವು ಪ್ರತಿದಿನವೂ ಸೇವಾರೂಪದಲ್ಲಿ ನಡೆಯುವ ಗುಂಡಬಾಳದಲ್ಲಿ ಅದರ ಪ್ರಯೋಗ ನಡೆಯುತ್ತಲೇ ಇದೆಯೆಂದು ಹೇಳಲಾಗಿದೆ. ಪ್ರಾಯಶಃ ಅವರ ತಂದೆಯವರ 'ಬಪ್ಪನಾಡುಕ್ಷೇತ್ರಮಹಾತ್ಮೆ'ಯ ಪ್ರಯೋಗಗಳು ಗಳಿಸಿದ ಜನಪ್ರಿಯತೆಯೇ ಇವರನ್ನು ಕ್ಷೇತ್ರಮಹಾತ್ಮೆಯ ಕಡೆಗೆ ಹೆಚ್ಚು ಸೆಳೆದಿರಬಹುದು. ಭಾಸ್ಕರ ರಾಯರ ಮನೆ ಮಾತು ಕನ್ನಡ. ಆದರೂ ತುಳುವಿನ ಎಲ್ಲ ಪ್ರಭೇದಗಳನ್ನು ಅವರು ಚೆನ್ನಾಗಿ ಆಡಬಲ್ಲರು. ಆದುದರಿಂದ ತುಳುವಿನ ಪ್ರಸಂಗರಚನೆಯನ್ನೂ ಅವರು ಸಂಕೋಚವಿಲ್ಲದೆ ಮಾಡಿದ್ದಾರೆ. ಆದರೆ ತುಳುವಿನ ರಚನೆಯಲ್ಲಿಯೇ ತುಂಬ ಒಲವುಳ್ಳವರು ಅವರಲ್ಲ. ತುಳುವಿನಲ್ಲಿ ಅವರ ಎರಡೇ ಪ್ರಸಂಗಗಳು ಕಂಡುಬರುತ್ತವೆ. ಭಾಸ್ಕರರಾಯರ ತಂದೆ ಶ್ರೀನಿವಾಸ ಭಾಗವತರು ತುಳುನಾಡಿನ ವಸ್ತುಗಳನ್ನಿರಿಸಿಕೊಂಡು ಪ್ರಸಂಗರಚನೆ ಮಾಡಿದ್ದರು. ಆದರೆ ಆ

ಪ್ರಸಂಗಗಳು ಕನ್ನಡದಲ್ಲಿವೆ. ಅವರ ಸಿರಿಮಹಾತ್ಮೆ, ಅಭಯರಾಣಿ ಅಬ್ಬಕ್ಕ ಪ್ರಸಂಗಗಳು ತುಳುನಾಡಿನ ಕಥೆಗಳನ್ನೇ ಹೊಂದಿವೆ. ಆದರೂ ಅವು ಕನ್ನಡ ಪ್ರಸಂಗಗಳು.

ಯಾವುದೇ ಮೂಲದ ಕಥೆಯಾದರೂ ಅದನ್ನು ಯಕ್ಷಗಾನೀಯ ಪರಿಸರಕ್ಕೆ ಹೊಂದಿಸಿ ಪ್ರಸಂಗರಚನೆ ಮಾಡುವ ಕಲೆ ಭಾಸ್ಕರ ರಾಯರಿಗೆ ಸಹಜವಾಗಿ ಒಲಿದಿದೆ. ಅವರ 'ತಪಸ್ವೀ ಮಹೇಂದ್ರ' ನೃಸಿಂಹ ಉಪಪುರಾಣದ ಆಧಾರದಿಂದ ರಚಿತವಾದುದು, 'ತ್ರಿಕಣ್ಣೇಶ್ವರೀ ಮಹಾತ್ಮೆ'ಗೆ ದೇವೀಭಾಗವತ ಮತ್ತು ಶಿವಪುರಾಣದಲ್ಲಿ ಕಥಾಮೂಲಗಳಿವೆ. 'ಅಗಸ್ತ್ಯಚರಿತೆ' ವಿವಿಧ ಪುರಾಣಗಳಲ್ಲಿ ಹರಡಿಹೋದ ಕಥೆಗಳ ಸಂಕಲನದ ಆಧಾರದಲ್ಲಿ ರಚಿತವಾಗಿವೆ. 'ಶ್ರೀಹರಿಲೀಲಾರ್ಣವ'ಕ್ಕೂ ಪೌರಾಣಿಕ ಹಿನ್ನೆಲೆಯಿದೆ. 'ವಿಶ್ವಕರ್ಮಮಹಾತ್ಮೆ'ಗೆ ಋಗ್ವೇದದಲ್ಲಿ ಆಧಾರವಿದೆಯೆಂದು ಮಾನ್ಯ ಅಗರಿಯವರೇ ಹೇಳಿದುದುಂಟು. 'ಧರ್ಮವಿಜಯ'ವು ಪೂರ್ತಿಯಾಗಿ ಕಾಲ್ಪನಿಕವೇ ಆದ ಪ್ರಸಂಗ. ಹೀಗೆ ವಿಭಿನ್ನಮೂಲಗಳನ್ನು ಆಧರಿಸಿ ರಂಗಪ್ರಯೋಗಕ್ಕೆ ಉಚಿತವಾಗುವಂತೆ ಆ ಕಥೆಗಳಿಗೆ ಬಾಗು-ಬಳುಕುಗಳನ್ನಿತ್ತು ರಚಿಸಿದುದರಿಂದ ಈ ಪ್ರಸಂಗಗಳು ಪೌರಾಣಿಕಪ್ರಸಂಗಗಳ ಮಾದರಿಯನ್ನೇ ಹೊಂದಿಕೊಂಡಿವೆಯೆಂದರೆ ತಪ್ಪಾಗದು.

ಅಗರಿ ಭಾಸ್ಕರ ರಾಯರ ಹೆಚ್ಚಿನ ಪ್ರಸಂಗಗಳಿಗೆ ಎರಡೆರಡು ಹೆಸರುಗಳಿವೆ. 'ಶ್ರೀರಾಘವೇಂದ್ರಮಹಾತ್ಮೆ'ಗೆ 'ಶ್ರೀಮಂತ್ರಾಲಯಮಹಾತ್ಮೆ' ಎಂಬ ಹೆಸರೂ ಇದೆ. 'ವಿಶ್ವಕರ್ಮಮಹಾತ್ಮೆ' ಪ್ರಸಂಗಕ್ಕೆ 'ಭಸ್ಮಾಸುರಮೋಹಿನಿ' ಎಂದೂ 'ಕಾಳಹಸ್ತಿಮಹಾತ್ಮೆ' ಎಂದೂ ಹೆಸರುಗಳಿವೆ. 'ಶ್ರೀಹರಿಲೀಲಾರ್ಣವ'ಕ್ಕೆ 'ಮಹಾಲಸಾನಾರಾಯಣೀವೈಭವ' ಎಂದೂ ಹೆಸರಿದೆ. 'ಧರ್ಮವಿಜಯ' ಮತ್ತು 'ವೀರರಾಣಿ ಅಪ್ರಮೇಯೀ' ಪ್ರಸಂಗಗಳಿಗೆ ಕ್ರಮವಾಗಿ 'ಮನಮೆಚ್ಚಿದ ಮಡದಿ' ಹಾಗೂ 'ದಶಮಗ್ರಹವಿಜಯ' ಎಂಬ ಹೆಸರುಗಳನ್ನು ಹಿಂದಿನ ಮುದ್ರಣಗಳಲ್ಲೇ ಕೊಟ್ಟಿದ್ದಾರೆ. 'ಶ್ರೀದೇವೀ ತ್ರಿಕಣ್ಣೇಶ್ವರೀಮಹಾತ್ಮೆ'ಗೆ 'ಶ್ರೀಹಯಗ್ರೀವದೇವೋದ್ಭವ' ಎಂಬ ಹೆಸರನ್ನೂ ಕೊಡಲಾಗಿದೆ. 'ತಪಸ್ವೀ ಮಹೇಂದ್ರ' ಪ್ರಸಂಗಕ್ಕೆ 'ಅಷ್ಟಾಕ್ಷರೀಮಹಿಮೆ' ಎಂಬ ಹೆಸರಿದೆ. ಬೇರೆ ಬೇರೆಡೆಗಳ ಪ್ರಯೋಗಸಂದರ್ಭಗಳಲ್ಲಿ ಅವರು ಈ ರೀತಿ ಹೆಸರಿನ ಬದಲಾವಣೆಗಳನ್ನು ಮಾಡಿಕೊಂಡಿರಬಹುದಾದರೂ ಇದು ಕೆಲವು ಬಾರಿ ಹೆಸರುಗಳ ದಾಖಲಾತಿಗೆ ಗೊಂದಲವನ್ನುಂಟುಮಾಡುತ್ತದೆ.

ಹೊಸ ಕಾಲದಲ್ಲಿ ಹಲವು ಪ್ರಸಂಗಕಾರರು ಯಾರೋ ರಚಿಸಿದ ಕೆಲವು ಕಥೆಗಳನ್ನು ಪ್ರಸಂಗರೂಪಕ್ಕೆ ಅಳವಡಿಸಿಕೊಟ್ಟು ಆ ಪ್ರಸಂಗಗಳು ಕಥೆಗಳನ್ನು ರಚಿಸಿದವರ ಹೆಸರಿನಲ್ಲಿಯೇ ಪ್ರಯೋಗಕ್ಕೆ ಬಂದುದುಂಟು. ಆ ಕಥಾಕರ್ತರು ತಮ್ಮ ಹೆಸರನ್ನೇ ಬಳಸಿ ತಮ್ಮಿಂದ ರಚಿತವಾದ ಪ್ರಸಂಗವೆಂದು ಆ ಪ್ರಸಂಗವನ್ನು ಮೆರೆಯಿಸಿ ತಾವು ಯಕ್ಷಗಾನಕವಿಗಳೆಂಬ ಹಿರಿಮೆಯನ್ನು ತೋರ್ಪಡಿಸಿಕೊಂಡುದೂ ಉಂಟು. ಪತ್ರಿಕೆಗಳಲ್ಲಿ 'ಇಂತಹವರಿಂದ ವಿರಚಿತ ಪ್ರಸಂಗ' ಎಂದು ಆ ಕಥಾಕರ್ತರ ಹೆಸರನ್ನೇ ಹಾಕುತ್ತಿರುವುದೂ ಉಂಟು. ಕಳೆದ ಕೆಲವು ವರ್ಷಗಳಿಂದ ಈ ಅಭ್ಯಾಸ

ಕಂಡುಬರುತ್ತಿದೆ. ಸತ್ಯಕ್ಕೆ ಅಪಚಾರವನ್ನುಂಟುಮಾಡುವ ಈ ಅಭ್ಯಾಸವು ಯಾರಿಂದ ತೊಡಗಿತೆಂಬುದು ಇನ್ನೂ ಸ್ಪಷ್ಟವಾಗಿಲ್ಲ. ಯಕ್ಷಗಾನಕ್ಷೇತ್ರದಲ್ಲಿ ಚಿಂತಿಸಿದ ಹಲವು ಮಹನೀಯರು ಈ ಕ್ರಮವನ್ನು ಆಕ್ಷೇಪಿಸಿದ್ದಾರಲ್ಲದೆ ಪ್ರಸಂಗಕರ್ತನೆಂಬ ಹೆಸರು ಯಕ್ಷಗಾನಕವಿಗೇ ಸಲ್ಲತಕ್ಕದ್ದೆಂದೂ ಕಥೆಯನ್ನು ರಾಗತಾಳಬದ್ಧವಾದ ಹಾಡುಗಳ ರಚನೆಯ ಮೂಲಕ ಪ್ರಸಂಗದ ರೂಪಕ್ಕೆ ತಂದವನೇ ನಿಜವಾದ ಯಕ್ಷಗಾನಕವಿ ಅಥವಾ ಪ್ರಸಂಗಕರ್ತ ಎಂದೂ ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ. 'ಇಂತಹವರಿಂದ ವಿರಚಿತ ಪ್ರಸಂಗ' ಎಂದು ಹೇಳುವಾಗ ಪದ್ಯರೂಪದಲ್ಲಿ ಪ್ರಸಂಗಗಳನ್ನು ರೂಪಿಸಿದ ಕವಿಗಳ ಹೆಸರನ್ನೇ ಹಾಕುವುದು ನ್ಯಾಯವೆಂದೂ ಪ್ರತಿಪಾದಿಸಿದ್ದಾರೆ. ಈ ಬಗೆಗೆ 'ಯಾರಿಂದ ವಿರಚಿತ ಪ್ರಸಂಗ' ಎಂಬೊಂದು ದೀರ್ಘಲೇಖನವನ್ನು ಪ್ರಕೃತ ಸಂಪಾದಕನೂ ಬರೆದು ಪ್ರಸಿದ್ಧಪಡಿಸಿದುದುಂಟು (ಕುಬಣೂರು ಬಾಲಕೃಷ್ಣ ರಾಯರ ಸಂಸ್ಮರಣ ಗ್ರಂಥ 'ಕುಬಣೂರು ಸ್ಮೃತಿ'ಯಲ್ಲಿ ಈ ಲೇಖನವು ಮೊದಲಿಗೆ 2012ರಲ್ಲಿ ಪ್ರಕಟಗೊಂಡು ಅನಂತರ ಅನುಬಂಧಸಹಿತವಾಗಿ ವಿಸ್ತೃತವಾಗಿ ಪ್ರಕೃತಲೇಖಕನ ಯಕ್ಷಗಾನಲೇಖನಗಳ ಸಂಕಲನ 'ಯಕ್ಷಗಾನಾಧ್ಯಯನ'ದಲ್ಲಿ 2016ರಲ್ಲಿ ಪ್ರಕಟಗೊಂಡಿರುತ್ತದೆ.) ಹಲವು ಪ್ರಸಂಗಕರ್ತರು ಹೀಗೆ ಯಾರ ಕಥೆಗೋ ಪ್ರಸಂಗವನ್ನು ಬರೆದುಕೊಟ್ಟು ಪ್ರಸಂಗಕರ್ತರೆಂಬ ಹೆಸರಿನಿಂದ ತಾವು ವಂಚಿತರಾದುದುಂಟು.

ಅಗರಿ ಭಾಸ್ಕರ ರಾಯರು ಕೂಡ ಇತರರು ಸಂಗ್ರಹಿಸಿದ ಅಥವಾ ರಚಿಸಿದ ಕಥೆಗಳನ್ನು ಪ್ರಸಂಗಗಳನ್ನಾಗಿ ಮಾಡಿದ್ದುಂಟು. ಆದರೆ ಸ್ಪಷ್ಟವಾಗಿ ಕಥಾರಚನೆ ಯಾರದೆಂಬುದನ್ನೂ ಪ್ರಸಂಗರಚನೆ ಯಾರದೆಂಬುದನ್ನೂ ದಾಖಲಿಸಿದ್ದಾರೆ. ಇದು ನಿಜವಾಗಿ ಸರಿಯಾದ ಕ್ರಮ. ಹೀಗೆ ಉಲ್ಲೇಖಿಸುವುದರಿಂದ ಸತ್ಯಕ್ಕೆ ಅಪಚಾರವಿಲ್ಲ. 'ಧರ್ಮವಿಜಯ ಅಥವಾ ಮನಮೆಚ್ಚದ ಮಡದಿ', 'ದಶಮಗ್ರಹ ವಿಜಯ ಅಥವಾ ವೀರರಾಣಿ ಅಪ್ರಮೇಯೀ', 'ಶ್ರೀವಾಣೀವಿಲಾಸ' ಈ ಮೂರು ಪ್ರಸಂಗಗಳ ಕಥಾರಚನೆ ಶ್ರೀ ಬೆಣ್ಣೆಮನೆ ಗೋಪಾಲಕೃಷ್ಣ ಭಟ್ ಎಂಬವರದು. ಈ ಮೂರೂ ಪ್ರಸಂಗಗಳು ಮುದ್ರಿತವಾಗಿವೆ. ಮುದ್ರಣದಲ್ಲಿ ಕಥಾರಚನೆ ಮತ್ತು ಪ್ರಸಂಗರಚನೆ ಮಾಡಿದ ಮಹನೀಯರ ಹೆಸರುಗಳನ್ನು ಪ್ರತ್ಯೇಕವಾಗಿ ಕಾಣಿಸಲಾಗಿದೆ. ಇದು ಸರಿಯಾದ ಮಾದರಿಯೆಂದೇ ಹೇಳಬೇಕಾಗಿದೆ. ಪ್ರಸಂಗಕರ್ತರು ಕಥಾರಚನೆ ಮಾಡಿದವರ ಅಥವಾ ಕಥಾಸಂಗ್ರಹ ಮಾಡಿಕೊಟ್ಟವರ ಹೆಸರನ್ನು ಕೃತಜ್ಞತಾಪೂರ್ವಕವಾಗಿ ಸ್ಮರಿಸುವುದು ಒಂದು ಅನುಸರಣೀಯವಾದ ಕ್ರಮ. ಕಥಾರಚನೆಯನ್ನು ಮಾತ್ರ ಮಾಡಿ ಪ್ರಸಂಗಕರ್ತನೇ ತಾನೆಂದು ಹೇಳಿಕೊಳ್ಳುವುದು ಮತ್ತು ಆ ರೀತಿ ಪ್ರಸಿದ್ಧಪಡಿಸಿಕೊಳ್ಳುವುದು ಸಾಹಿತ್ಯಚರಿತ್ರೆಗೆ ಮಾಡುವ ಮೋಸವೇ ಸರಿ. ಈ ರೀತಿಯ ಅಪಚಾರಗಳು ಪ್ರಸಂಗಕರ್ತರಿಂದ ಆಗಬಾರದೆಂಬುದು ನಮ್ಮ ಕಳಕಳಿ. ಈ ವಿಷಯದ ಸೂಕ್ಷ್ಮತೆಯು ಅಗರಿ ಭಾಸ್ಕರರಾಯರಿಗೆ ಚೆನ್ನಾಗಿ ತಿಳಿದಿರುವುದರಿಂದಲೇ ಅವರು ಕಥೆಗಾರರ ಹೆಸರನ್ನು ಸ್ಪಷ್ಟವಾಗಿ ದಾಖಲಿಸಿದ್ದಾರೆ.

ಪ್ರಸಂಗಗಳಲ್ಲಿ ಪದ್ಯರೂಪದಲ್ಲಿ ಪ್ರಸಂಗದೊಳಗೇ ಅದನ್ನು ದಾಖಲಿಸಿದುದು ಕಂಡುಬರುತ್ತದೆ. ಆ ಉಲ್ಲೇಖಗಳು ಹೀಗಿವೆ :

'ಧರ್ಮವಿಜಯ' ಪ್ರಸಂಗದಲ್ಲಿ –

ಬೆಣ್ಣೆಮನೆ ಗೋಪಾಲಕೃಷ್ಣರು
ಪುಣ್ಯಕಥೆ ಕೊಡೆ ಅಗರಿ ಭಾಸ್ಕರ
ಧನ್ಯಭಾವದಿ ಬರೆದನೀ ಕಥೆ ಹರಿಯ ದಯದಿಂದ

'ವೀರರಾಣಿ ಅಪ್ರಮೇಯಿ' ಪ್ರಸಂಗದಲ್ಲಿ –

ಬೆಣ್ಣೆಮನೆ ಗೋಪಾಲಕೃಷ್ಣರೆನುವ
ಸನ್ಮಿತ್ರರೊದಗಿಸಲು ವರ ಕಥಾನಕವ ॥
ತಿಳಿದಂತೆ ಬರೆದೆನಿದ ಯಕ್ಷಗಾನದಲಿ
ಇಳೆಯೊಳಗೆ ಮೆರೆಯಲಿದು ಹರಿಯ ದಯದಲ್ಲಿ ॥

'ಶ್ರೀವಾಣೀವಿಲಾಸ'ದಲ್ಲಿ –

ಲೇಸಾಗಿ ಬೆಣ್ಣೆಮನೆ ಗೋಪಾಲಕೃಷ್ಣರಾ
ದೋಷರಹಿತದ ಕಥೆಯ ಯಕ್ಷಗಾನದಿ ಬರೆವೆ
ತೋಷದಿಂದಗರಿ ಭಾಸ್ಕರನೆಂಬ ತರಳನಿದ ಮುದದಿಂದ ಪರಿಗಣಿಪುದು ॥

ಅದೇ ಪ್ರಸಂಗದ ಕೊನೆಗೆ –

ಪೃಥ್ವಿಯೊಳು ಬೆಣ್ಣೆಮನೆ ಗೋಪಾಲಕೃಷ್ಣ ತಾ
ನಿತ್ತ ಕತೆಯನು ಅಗರಿ ಭಾಸ್ಕರನು ತಿಳಿದಂತೆ
ಉತ್ತಮದ ಯಕ್ಷಗಾನದಿ ಪೇಳ್ದೆ ಹರಿದಯದಿ ಸರ್ವರಿಗು ಶುಭವಾಗಲಿ ॥

'ತಪಸ್ವೀ ಮಹೇಂದ್ರ' ಪ್ರಸಂಗದ ಕೊನೆಗೆ –

ಮೇದಿನೀಸುರ ಪ್ರಾಜ್ಞ ತೆಕ್ಕುಂಜ ಮನೆಯ ದಾ ।
ಮೋದರಾಖ್ಯಂ ಕೊಟ್ಟ ಕತೆಯನಾಧರಿಸಿ ಚೆಲು ।
ವಾದ ವರ ಯಕ್ಷಗಾನದಿ ಬರೆದ ಅಗರಿ ಭಾಸ್ಕರನೆಂಬ ದ್ವಿಜನು ನಾನು ॥
ಮಾಧವನ ಕತೆಯನುರೆ ರಂಗತಂತ್ರಕ್ಕೆ ಬೇ ।
ಕಾದ ತೆರದೊಳಗೆ ಪರಿಷ್ಕರಿಸಿರುವೆ ಪಾವನವ ।
ದಾದ ಕಥನವ ಕೇಳ್ವ ಭಕ್ತ ಜನಕೆಲ್ಲ ಶ್ರೀಹರಿಯು ಮಂಗಲವೀವನು ॥

ಯಾವ ಮೂಲದಿಂದ ಕಥೆಗಳನ್ನು ತೆಗೆದುಕೊಂಡು ಪ್ರಸಂಗರಚನೆ ಮಾಡಲಾಗಿದೆಯೆಂಬುದನ್ನು ಪ್ರಸಂಗದೊಳಗೆ ಉಲ್ಲೇಖಿಸುವುದು ನಮ್ಮ

ಪ್ರಸಂಗರಚನೆಯ ಪರಂಪರೆಯಲ್ಲಿರುವ ವಿಷಯವೇ ಆಗಿದೆ. ಹಲವು ಬಾರಿ ಮುದ್ರಿತ ಯಕ್ಷಗಾನಪ್ರಸಂಗಗಳಲ್ಲಿಯೂ ಅದು ಯಾವ ಪುರಾಣದಲ್ಲಿ 'ಅಂತರ್ಗತ'ವಾದುದೆಂದು ಉಲ್ಲೇಖಿಸುವ ಪದ್ಧತಿಯೂ ಇದೆ. ಇದು ಉತ್ತಮವಾದ ಒಂದು ವಿಧಾನವೇ ಹೌದು. ಹೊಸಕಾಲದಲ್ಲಿ ಹೆಚ್ಚಿನ ಪ್ರಸಂಗಕರ್ತರು ಒಂದೇ ಮೂಲದಿಂದ ವಸ್ತುವನ್ನು ತೆಗೆದುಕೊಳ್ಳದೆ ವಿವಿಧ ಮೂಲಗಳಿಂದ ಆಯ್ದುಕೊಳ್ಳಲು ತೊಡಗಿದ ಕಾರಣ ಯಾವ ಪುರಾಣದ 'ಅಂತರ್ಗತ' ಎಂಬುದನ್ನು ಉಲ್ಲೇಖಿಸುವ ಪದ್ಧತಿಯನ್ನು ದೂರ ಮಾಡಿದರೆನ್ನಬೇಕಾಗಿದೆ. ಈ ಹಿನ್ನೆಲೆಯಿಂದ ನೋಡಿದಾಗ ಭಾಸ್ಕರರಾಯರು ಕಥೆಯನ್ನು ಒದಗಿಸಿದವರ ಬಗೆಗೆ ಉಲ್ಲೇಖಿಸಿರುವುದರಲ್ಲಿ ಯಕ್ಷಗಾನದ ಪರಂಪರೆಯನ್ನು ಸ್ಪಷ್ಟವಾಗಿ ಅನುಸರಿಸಿದ ಸೂಚನೆಯಿದೆ.

ಅಗರಿ ಭಾಸ್ಕರರಾಯರ ಈ ಕ್ರಮವನ್ನು ಪ್ರಸಂಗಕರ್ತರು ಮತ್ತು ಕಥಾಸಂಗ್ರಹಕಾರರು ಅನುಸರಿಸದೆ ಯಕ್ಷಗಾನ ಸಾಹಿತ್ಯಚರಿತ್ರೆಯನ್ನು ರಚಿಸುವಲ್ಲಿ ಗೊಂದಲವನ್ನೂ ಬೇರೆ ಬೇರೆ ರೀತಿಯ ಸಮಸ್ಯೆಗಳನ್ನೂ ಉಂಟುಮಾಡಿದ್ದಾರೆಂಬುದು ಸ್ಪಷ್ಟ. ಯಕ್ಷಗಾನಕ್ಕೆ ಸಂಬಂಧಿಸಿದ ಸೂಚಿಯನ್ನು ಸಂಕಲಿಸುವಲ್ಲಿಯೂ ಕವಿಚರಿತ್ರೆಯನ್ನು ಬರೆಯುವಲ್ಲಿಯೂ ಈ ವಿಷಯವು ಸಮಸ್ಯೆಯೇ ಆಗಿ ಪರಿಣಮಿಸಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. (ಪ್ರಕೃತ ಸಂಪಾದಕನು ಸಿದ್ಧಪಡಿಸಿ 2006ರಲ್ಲಿ ಪ್ರಕಟಗೊಂಡ 'ಯಕ್ಷಗಾನಗ್ರಂಥಸೂಚಿ'ಯಲ್ಲಿಯೂ ಡಾ. ಕಬ್ಬಿನಾಲೆ ವಸಂತ ಭಾರದ್ವಾಜರು ಸಿದ್ಧಪಡಿಸಿ 2013ರಲ್ಲಿ ಪ್ರಕಟಗೊಂಡ 'ಕರ್ನಾಟಕ ಯಕ್ಷಗಾನ ಕವಿಚರಿತ್ರೆ'ಯಲ್ಲಿಯೂ ಈ ಗೊಂದಲಗಳು ಉಳಿದಿರುವುದನ್ನು ಗಮನಿಸಬೇಕು.)

ಭಾಸ್ಕರ ರಾಯರು ಕೃತಿಗಳನ್ನು ರಚಿಸುವಾಗ ರಂಗದ ಆವಶ್ಯಕತೆ ಹೇಗೆಂಬುದನ್ನು ಮನಸ್ಸಿನಲ್ಲಿರಿಸಿಕೊಂಡು ಅದಕ್ಕನುಗುಣವಾಗಿ ತಮ್ಮ ಕವಿತಾಶಕ್ತಿಯನ್ನು ಪ್ರಕಟಿಸಿದರು. ಹಳೆಯ ಕವಿಗಳು ಪ್ರಸಂಗರಚನೆ ಮಾಡುವಾಗ ಪ್ರಸಂಗದ ಚೌಕಟ್ಟನ್ನು ಇರಿಸಿಕೊಂಡು ಪ್ರಸಂಗವೆಂಬುದು ಕೇವಲ ರಂಗಾನುಕೂಲಕರವಾದ ಪದ್ಯಗಳಾಗಿರದೆ, ಅದು ಒಂದು ಕಾವ್ಯಬಂಧವೆಂಬ ವಿಷಯವನ್ನೂ ಮನಸ್ಸಿನಲ್ಲಿರಿಸಿಕೊಂಡು ಬರೆಯುತ್ತಿದ್ದರು. ಆದುದರಿಂದಲೇ ಹಳೆಯ ಪ್ರಸಂಗಗಳೊಳಗೆ ಕೇವಲ ರಂಗಕ್ಕೆ ಉಪಯುಕ್ತವಾಗುವ ಪದ್ಯಗಳೊಡನೆ ಅಷ್ಟಾಗಿ ಉಪಯೋಗವಾಗದ ಪದ್ಯಗಳೂ ಇವೆ. ಪ್ರಸಂಗದ ಮೊದಲಿನ ಹಲವು ಸ್ತುತಿಪದ್ಯಗಳು, ದ್ವಿಪದಿಗಳು, ಕಥಾಪ್ರವೇಶದ ಪದ್ಯಗಳು, ವರ್ಣನೆಯ ಪದ್ಯಗಳು, ಅಂತ್ಯದಲ್ಲಿರುವ ಕವಿವಿವರ ಸೂಚಿಸುವ ಪದ್ಯಗಳು – ಇವೆಲ್ಲ ರಂಗದಲ್ಲಿ ದೃಶ್ಯಪ್ರಯೋಗಕ್ಕೆ ಆವಶ್ಯಕವಾದುವಲ್ಲ. ಆದುದರಿಂದ ಹಿಂದಿನ ಪ್ರಸಂಗಗಳಲ್ಲಿ ೪೦೦ರಿಂದ ೫೦೦ ಪದ್ಯಗಳಿರುವುದೂ ಉಂಟು. ರಂಗಕ್ಕೆ ಆವಶ್ಯಕವಾದ ಪದ್ಯಗಳನ್ನು ಮಾತ್ರ ಬರೆದು ಪ್ರಸಂಗ ರಚಿಸುವ ಮಾದರಿಯನ್ನು ಹಾಕಿಕೊಟ್ಟವರು ಹಿರಿಯ ಬಲಿಪ ನಾರಾಯಣ ಭಾಗವತರು. ಒಂದು ದಿನದ ಆಟಕ್ಕೆ ಸುಮಾರು ೨೦೦ರಿಂದ ೨೫೦ ಪದ್ಯಗಳು ಧಾರಾಳವಾಗಿ ಸಾಕಾಗುತ್ತವೆ. ಹಿರಿಯ ಬಲಿಪರ ಪ್ರಸಂಗಗಳು ಈ ವ್ಯಾಪ್ತಿಯಲ್ಲಿಯೇ ಇವೆ.

ಅನಂತರದ ಹೆಚ್ಚಿನ ಪ್ರಸಂಗಕರ್ತರು ಈ ಮಾದರಿಯನ್ನನುಸರಿಸಿದರು. ಅಗರಿ ಶ್ರೀನಿವಾಸ ಭಾಗವತರೂ ಈ ಮಾದರಿಯನ್ನು ಅನುಸರಿಸಿದವರೇ. ಅವರ ಪುತ್ರರಾದ ಭಾಸ್ಕರರಾಯರು ಸಹಜವಾಗಿಯೇ ಈ ಮಾದರಿಯಲ್ಲಿ ಬರೆದರು. ಅವರ ಪ್ರಸಂಗಗಳು ಪ್ರಕಟಗೊಳ್ಳುವಾಗ ಕೆಲವಲ್ಲಿ ಯಕ್ಷಗಾನಪ್ರಸಂಗದ ಚೌಕಟ್ಟಿಗೆ ಸಂಬಂಧಿಸಿದ ಪದ್ಯಗಳು ಇಲ್ಲದಿದ್ದುದೂ ಉಂಟು. ಪ್ರಕೃತ ಸಂಪುಟರೂಪದಲ್ಲಿ ಅವರ ಪ್ರಸಂಗಗಳನ್ನು ಸಂಪಾದಿಸುವಾಗ ಈ ಚೌಕಟ್ಟಿಗೆ ಸಂಬಂಧಿಸಿದ ಪದ್ಯಗಳನ್ನು ಬರೆದು ಸೇರಿಸುವಂತೆ ಸಂಪಾದಕೀಯ ನೆಲೆಯಲ್ಲಿ ಅವರನ್ನು ಕೇಳಿಕೊಳ್ಳಲಾಗಿದ್ದು ಅವರು ಈ ಕೆಲಸವನ್ನು ಮಾಡಿಕೊಟ್ಟಿರುತ್ತಾರೆ. ರಂಗತಂತ್ರಕ್ಕೆ ಬೇಕಾದ ರೀತಿಯಲ್ಲಿ ಕಥೆಯನ್ನು ಪರಿಷ್ಕರಿಸಿಕೊಂಡು ಪ್ರಸಂಗರಚನೆ ಮಾಡಿದುದನ್ನು ಅವರೇ 'ತಪಸ್ವೀಮಹೇಂದ್ರ'ದಲ್ಲಿ ಹೇಳಿಕೊಂಡುದನ್ನು ಮೇಲೆ ಉದ್ಧರಿಸಲಾಗಿದೆ.

ಅಗರಿ ಭಾಸ್ಕರ ರಾಯರು ಒಂದು ರೀತಿಯ ಆಶುಕವಿಗಳು. ಉತ್ಸಾಹವು ಮೂಡಿಬಂದಲ್ಲಿ ಅವರು ಶೀಘ್ರವಾಗಿ ಪದ್ಯಗಳನ್ನು ಹೊಸೆಯಬಲ್ಲವರು. ಛಂದೋಬದ್ಧವಾಗಿ ಬರೆಯುವುದು ಅವರಿಗೆ ತ್ರಾಸದಾಯಕವಾದ ವಿಷಯವಲ್ಲ. ನಮ್ಮ ನವೋದಯ ಕಾಲದ ಸಾಹಿತ್ಯರಚನೆಯಲ್ಲಿ ಹೊಸತನದ ಅನುಸರಣೆಯ ಮಾರ್ಗದಲ್ಲಿ ಮೊದಲಿಗೆ ಕನ್ನಡಸಾಹಿತ್ಯದಲ್ಲಿ ಆದಿಕಾಲದಿಂದಲೂ ರೂಢಿಯಲ್ಲಿದ್ದ ಆದಿಪ್ರಾಸವನ್ನು ಕೈಬಿಡಲಾಯಿತು. ಪದ್ಯರಚನೆಯ ಓಘಕ್ಕೆ ಅದೊಂದು ಕುಂದು ಅಥವಾ ಅಡ್ಡಿಯೆಂಬ ಭಾವನೆ ಅಂದಿನ ಹೊಸಕಾಲದ ಕವಿಗಳಿಗಿತ್ತು. ಪ್ರಾಸವನ್ನು ಬಿಟ್ಟರೂ ನವೋದಯ ಕಾಲದ ಕವಿಗಳು ಪದ್ಯದ ಸ್ವರೂಪವನ್ನು ಬಿಡಲಿಲ್ಲ. ವಿವಿಧ ಗಣವಿನ್ಯಾಸಗಳು ಮತ್ತು ಸಾಲುಗಳ ಸಂಖ್ಯೆಯಲ್ಲಿ ಸಾಕಷ್ಟು ವ್ಯತ್ಯಾಸಗಳಿರುವ ಅನೇಕ ಗೇಯಬಂಧಗಳನ್ನು ಅವರು ಸೃಷ್ಟಿಸಿಕೊಂಡರು. ಹೀಗೆ ಹೊಸತನ್ನು ಕಲ್ಪಿಸಿಕೊಳ್ಳಲು ಅವರಿಗೆ ಹಳೆಯ ಮಾತ್ರಾಬಂಧಗಳು ಮತ್ತು ತ್ರಿಮೂರ್ತಿಗಣಬಂಧಗಳು ಮಾದರಿಯಾದುವು. ಹರಿದಾಸಸಾಹಿತ್ಯದ ಕೀರ್ತನೆಗಳೂ ಅವರಿಗೆ ಮಾದರಿಯಾದುವು. ಹಳೆಯ ಸಾಹಿತ್ಯದ ಸರಿಯಾದ ಅಧ್ಯಯನವು ಆ ಕಾಲದವರಿಗಿತ್ತು. ಹೇಗಿದ್ದರೂ ಒಂದು ರೀತಿಯ ಗೇಯತೆಯ ಮಾದರಿ ಆ ಕಾಲದ ಪದ್ಯರಚನೆಯಲ್ಲಿರುವುದನ್ನು ಸ್ಪಷ್ಟವಾಗಿ ಗುರುತಿಸಬಹುದು. ಅನಂತರದ ಕಾಲದಲ್ಲಿ ಬಂದ ನವ್ಯಸಾಹಿತ್ಯದ ಕವಿಗಳು ಗಣಗಳ ನಿಯಮವನ್ನೂ ಸಾಲುಗಳ ನಿಯಮವನ್ನೂ ಮುರಿದರು ಮತ್ತು ಪದ್ಯಗಳಲ್ಲಿ ಬರಬಹುದಾದ ಗೇಯಗುಣವನ್ನು ಪೂರ್ತಿಯಾಗಿ ದೂರವಾಗಿಸಿದರು. ಗೇಯತೆಯು ಪದ್ಯದ ಸಂದೇಶವನ್ನು ಮನನ ಮಾಡುವಲ್ಲಿ ತೊಡಕನ್ನುಂಟುಮಾಡುವುದೆಂದು ಅವರ ಅಭಿಪ್ರಾಯವಾಗಿತ್ತು. ಇದರಿಂದಾಗಿ ಪದ್ಯಗಳಿಗೆ ಗಣಗಳ ನಿಯಮವೂ ಸಾಲಿನ ನಿಯಮವೂ ಗೇಯತೆಯ ನಿಯಮವೂ ಪದ್ಯವನ್ನು ಹಾಡುವ ಅವಕಾಶವೂ ಆ ಮೂಲಕ ಶ್ರವಣಾನಂದವನ್ನುಂಟುಮಾಡುವ ಶಕ್ತಿಯೂ – ಎಲ್ಲವೂ ಹೊರಟುಹೋಗುವಂತಾಯಿತು. ವಿಶೇಷತೆಯೇನೆಂದರೆ ನವೋದಯಕಾಲದಲ್ಲಾಗಲಿ ನವ್ಯಕಾಲದಲ್ಲಾಗಲಿ ನವ್ಯೋತ್ತರಕಾಲದಲ್ಲಾಗಲಿ ಮೂಡಿ

ಬಂದ ಯಕ್ಷಗಾನಪ್ರಸಂಗಗಳಲ್ಲಿ ವಸ್ತುವಿನ ದೃಷ್ಟಿಯಿಂದ ಮತ್ತು ಧೋರಣೆಯ ದೃಷ್ಟಿಯಿಂದ ಎಷ್ಟೇ ಹೊಸತನಗಳು ಬಂದರೂ ಪದ್ಯಬಂಧಗಳ ದೃಷ್ಟಿಯಿಂದ ಹೆಚ್ಚಿನ ಬದಲಾವಣೆಗಳಾಗಲಿಲ್ಲ. ಪದ್ಯಗಳು ತಮ್ಮ ರೂಪವನ್ನು ಪರಿವರ್ತಿಸಿಕೊಳ್ಳಲಿಲ್ಲ, ಕೆಡಿಸಿಕೊಳ್ಳಲಿಲ್ಲ. ಇಂದಿಗೂ ಯಕ್ಷಗಾನಪ್ರಸಂಗಕರ್ತರು ಆದಿಪ್ರಾಸವನ್ನಿರಿಸಿಕೊಂಡು ರಾಗತಾಳಬದ್ಧವಾಗಿಯೇ ಪದ್ಯರಚನೆ ಮಾಡುತ್ತಾರೆ.

ಆದರೆ ಎಲ್ಲ ಪ್ರಸಂಗಕರ್ತರೂ ಛಂದೋನಿಯಮಗಳನ್ನೆಲ್ಲ ಚೆನ್ನಾಗಿ ಅರಿತವರೆಂದು ಹೇಳಲಾಗದು. ಹೆಚ್ಚಿನವರು ಯಕ್ಷಗಾನದ 'ಪದ'ಗಳ 'ಧಾಟಿ'ಗಳನ್ನು ಅವಲಂಬಿಸಿಕೊಂಡು ತಮ್ಮ ರಚನೆಗಳನ್ನು ಮಾಡುತ್ತಾರೆ. ಹಳೆಯ ಪ್ರಸಂಗಗಳ ಹಸ್ತಪ್ರತಿಗಳಲ್ಲಿ ಮತ್ತು ಕೆಲವು ಮುದ್ರಿತಪ್ರತಿಗಳಲ್ಲಿ ಕೂಡ ಪದ್ಯಕ್ಕೆ ಮೊದಲು ಯಾವುದೋ ಹಿಂದಿನ ಪ್ರಸಿದ್ಧಪ್ರಸಂಗದ ಪದ್ಯದ ಆರಂಭದ ಭಾಗವನ್ನು ಉದ್ಧರಿಸಿ 'ಎಂಬಂತೆ' ಎಂದು ಬರೆದುದುಂಟು. ಎಂದರೆ ತಾವು ಯಾವ ಮಾದರಿಯ ಪದ್ಯಗಳನ್ನು ಬರೆಯುತ್ತಿದ್ದೇವೆಂಬ ಬಗೆಗೆ ಅವರಿಗೆ ಸ್ಪಷ್ಟಕಲ್ಪನೆಯಿತ್ತು. ಅದನ್ನು ಅವರು ದಾಖಲಿಸುತ್ತಿದ್ದರು. ಖಚಿತತೆಗಾಗಿ ಈ ದಾಖಲಾತಿ ಇರುತ್ತಿತ್ತು. ಇದು ಆ ಪದವನ್ನು ಹಾಡುವ ಭಾಗವತರಿಗೂ ಮಾರ್ಗದರ್ಶನ ಮಾಡುತ್ತಿತ್ತು. ಆಯ್ದ ಮಾದರಿಯಲ್ಲಿ ಪದ್ಯಗಳನ್ನು ಬರೆಯುವುದು ಆ ಪ್ರಸಂಗಕರ್ತರಿಗೆ ಕಷ್ಟವಾಗಿರಲಿಲ್ಲ. ಹಾಗೆಯೇ ಆಧುನಿಕ ಕಾಲದ ಪ್ರಸಂಗಕರ್ತರು ಕೂಡ ಸಾಮಾನ್ಯವಾಗಿ ಮಾದರಿಗಳನ್ನಿರಿಸಿಕೊಂಡೇ ಪದ್ಯರಚನೆ ಮಾಡುತ್ತಾರೆ. ಆದರೆ ಆ ಮಾದರಿಗಳನ್ನುದ್ಧರಿಸಿ 'ಎಂಬಂತೆ' ಎಂದು ಉಲ್ಲೇಖಿಸುವ ಪದ್ಧತಿ ಈಗ ಹೊರಟುಹೋಗಿದೆ. ಅಗರಿ ಭಾಸ್ಕರ ರಾಯರು ಕೂಡ ಪ್ರಸಂಗಸಾಹಿತ್ಯದಲ್ಲಿ ಪ್ರಸಿದ್ಧವಾದ ಹೆಚ್ಚಿನ ಎಲ್ಲ ಮಟ್ಟುಗಳನ್ನು ಬಲ್ಲವರು ಮತ್ತು ಅವುಗಳ ಧಾಟಿಯನ್ನು ತಮ್ಮ ಮನಸ್ಸಿನಲ್ಲಿ ಗಟ್ಟಿಮಾಡಿಕೊಂಡವರು. ಆ ಪದ್ಯಗಳ ರಾಗತಾಳಗಳ ಕಲ್ಪನೆ ಅವರಿಗೆ ಸ್ಪಷ್ಟವಾಗಿದೆ. ಆದುದರಿಂದ ಈ ಮಾದರಿಯಲ್ಲಿ ಪದ್ಯಗಳನ್ನು ಬರೆಯುತ್ತ ಹೋಗಲು ಬೇಕಾದ ಪೂರ್ವಾಭ್ಯಾಸ ಅವರಿಗಾಗಿದೆಯೆನ್ನಬಹುದು. ಹೊಸ ವಸ್ತುಗಳನ್ನು ಕೂಡ ಆಯ್ದುಕೊಂಡು ಪ್ರಸಂಗಕ್ಕೆ ಅಳವಡಿಸುವ ಶಕ್ತಿ ಮತ್ತು ರಂಗತಂತ್ರಗಳ ಅರಿವು ಅವರಿಗಿರುವುದು ಈ ಪ್ರಸಂಗಗಳನ್ನು ಪರಿಶೀಲಿಸಿದಾಗ ಸ್ಪಷ್ಟವಾಗುತ್ತದೆ.

ಈ ಸಂಪುಟದಲ್ಲಿರುವ ಹತ್ತು ಪ್ರಸಂಗಗಳಲ್ಲಿ ಹೆಚ್ಚಿನವುಗಳ ರಚನೆಯ ಹಿನ್ನೆಲೆ, ಅವುಗಳ ರಂಗಪ್ರಯೋಗ, ಜನಪ್ರಿಯತೆ – ಇತ್ಯಾದಿ ವಿಷಯಗಳನ್ನು ಕೃತಿಕಾರ ಅಗರಿಭಾಸ್ಕರ ರಾಯರು ತಮ್ಮ 'ಮನದ ಮಾತು'ಗಳಲ್ಲಿ ಹೇಳಿರುವುದರಿಂದ ಆ ಬಗ್ಗೆ ಪ್ರಸ್ತಾವನೆಯಲ್ಲಿ ಪುನಃ ಹೇಳುವ ಆವಶ್ಯಕತೆಯಿಲ್ಲ. ಈ ಸಂಪುಟದ ಹತ್ತು ಪ್ರಸಂಗಗಳಲ್ಲಿ ಎಂಟು ಪ್ರಸಂಗಗಳು ರಂಗದಲ್ಲಿ ಪ್ರಯೋಗಗೊಂಡಿವೆ. ಕೆಲವು ಪ್ರಸಂಗಗಳನ್ನು ಎರಡೆರಡು ಮೇಳಗಳವರು ತಮ್ಮ ವಾರ್ಷಿಕ ತಿರುಗಾಟಗಳಲ್ಲಿ ಪ್ರದರ್ಶಿಸಿದ್ದುಂಟು. ತಪಸ್ವಿಮಹೇಂದ್ರ, ಶ್ರೀವಿಶ್ವಕರ್ಮಮಹಾತ್ಮೆ, ಶ್ರೀದೇವೀ ತ್ರಿಕಣ್ಣೇಶ್ವರೀಮಹಾತ್ಮೆ ಮತ್ತು ಶ್ರೀರಾಘವೇಂದ್ರಮಹಾತ್ಮೆ ಪ್ರಸಂಗಗಳು ಆಟದಲ್ಲಲ್ಲದೆ ತಾಳಮದ್ದಳೆಯಲ್ಲಿ ಕೂಡ

ಪ್ರಯೋಗಗೊಂಡಿವೆ. ಶ್ರೀವಿಶ್ವಕರ್ಮಮಹಾತ್ಮೆಯು ರಂಗಪ್ರಯೋಗದಲ್ಲಿ ಅಗರಿ ಶ್ರೀನಿವಾಸ ಭಾಗವತರೇ ಭಾಗವತಿಕೆ ಮಾಡಿದ ವಿಷಯವನ್ನು ಭಾಸ್ಕರ ರಾಯರು ನೆನಪಿಸಿಕೊಂಡಿದ್ದಾರೆ. ಹಾಗೆಯೇ ಈ ಪ್ರಸಂಗದ ತಾಳಮದ್ದಳೆಯಲ್ಲಿಯೂ ಅವರೇ ಭಾಗವತರಾಗಿದ್ದರಂತೆ. ಪ್ರಾಯಶಃ ಯಕ್ಷಗಾನಕ್ಷೇತ್ರದಲ್ಲಿ ಮಗನ ಪ್ರಸಂಗವನ್ನು ತಂದೆಯ ಭಾಗವತಿಕೆಯಲ್ಲಿ ಪ್ರದರ್ಶಿಸಿದ ಬೇರೆ ಉದಾಹರಣೆಗಳಿಲ್ಲ. ಇದು ಮಗನ ಪ್ರಸಂಗರಚನೆಯನ್ನು ತಂದೆ ಮೆಚ್ಚಿರುವುದಕ್ಕೆ ಖಚಿತ ಉದಾಹರಣೆಯೆಂದು ಹೇಳಬಹುದು. ಭಾಸ್ಕರ ರಾಯರ ಪ್ರಸಂಗದಲ್ಲಿ ಆಟ ಮಾತ್ರವಲ್ಲದೆ ತಾಳಮದ್ದಳೆಗೂ ಅಳವಡಿಸಿಕೊಳ್ಳಲು ಬೇಕಾಗುವ 'ಪುಷ್ಟಿ' ಮತ್ತು 'ವರ್ಚಸ್ಸು' ಇದೆಯೆಂದು ಹಿರಿಯ ತಾಳಮದ್ದಳೆ ಅರ್ಥಧಾರಿಗಳಾಗಿದ್ದ ಮಲ್ಪೆ ಶಂಕರನಾರಾಯಣ ಸಾಮಗರು 'ತಪಸ್ವೀಮಹೇಂದ್ರ'ದ ಮುನ್ನುಡಿಯಲ್ಲಿ ಹೇಳಿದ್ದಾರೆ. 'ವೀರರಾಣಿ ಅಪ್ರಮೇಯು' ಎಂಬುದು ಕಾಲ್ಪನಿಕಪ್ರಸಂಗವೇ ಆದರೂ ಪೌರಾಣಿಕಪ್ರಸಂಗದ ಸ್ವರೂಪದಲ್ಲಿಯೇ ಇರುವುದರಿಂದ ತೆಂಕು–ಬಡಗು ಎರಡೂ ತಿಟ್ಟುಗಳಲ್ಲಿ ಪ್ರಯೋಗಗೊಂಡು ಜನಪ್ರಿಯವಾದುದನ್ನು ಉಲ್ಲೇಖಿಸಬೇಕು. ಈ ಪ್ರಸಂಗವು ಸುರತ್ಕಲ್ ಮೇಳದ ಒಂದು ವರ್ಷದ ತಿರುಗಾಟದಲ್ಲಿ ನೂರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದೆಯೆಂದು ತಿಳಿಯುತ್ತದೆ. ಉತ್ತರ ಕನ್ನಡದ ಗುಂಡಬಾಳದಲ್ಲಿ ಕಪ್ಪೆಕೆರೆ ಸುಬ್ರಾಯ ಭಾಗವತರ ಭಾಗವತಿಕೆಯಲ್ಲಿ ಸುಮಾರು ೧೦೦೦ಕ್ಕಿಂತಲೂ ಹೆಚ್ಚು ಬಾರಿ ಬಯಲಾಟವಾಗಿ ಆಡಲ್ಪಟ್ಟಿದೆಯೆಂದು ತಿಳಿದುಬರುತ್ತದೆ. ಈ ಸಂಪುಟದ ಪ್ರಸಂಗಗಳಲ್ಲಿ 'ಅಗಸ್ತ್ಯಚರಿತೆ' ಮತ್ತು 'ರುದ್ರಾಂತರ್ಗತ ಶ್ರೀಲಕ್ಷ್ಮೀನರಸಿಂಹ' ಇವೆರಡು ಪ್ರಸಂಗಗಳು ಮಾತ್ರ ಇದುವರೆಗೆ ರಂಗದಲ್ಲಿ ಪ್ರಯೋಗಗೊಂಡಿಲ್ಲ.

ಹೊಸಕಾಲದಲ್ಲಿ ಕಾಲಮಿತಿ ಯಕ್ಷಗಾನದ ಬಗೆಗೆ ಗಂಭೀರವಾಗಿ ಮಾತಾಡುತ್ತೇವೆ. ಒಂದು ಕಾಲದಲ್ಲಿ ಹಲವು ರಾತ್ರಿಗಳ ವರೆಗೆ ನಡೆಯುತ್ತಿದ್ದ ಯಕ್ಷಗಾನದ ಬಯಲಾಟಗಳು ನಿಧಾನವಾಗಿ ಒಂದು ರಾತ್ರಿಯ ಪ್ರದರ್ಶನಕ್ಕೆ ಸೀಮಿತವಾದುವು. ಆ ದೃಷ್ಟಿಯಿಂದ ಪ್ರಸಂಗರಚಕರು ಒಂದು ರಾತ್ರಿಯ ಆಟಕ್ಕೆ ಬೇಕಾದಷ್ಟೇ ಪದ್ಯಗಳನ್ನಿರಿಸಿಕೊಂಡು ರಚನೆಮಾಡತೊಡಗಿದರು. ಅನಂತರದಲ್ಲಿ ಒಂದು ಗಂಟೆಯ ಅವಕಾಶದ ರೇಡಿಯೋ ತಾಳಮದ್ದಳೆಗಳೂ ಸೀಮಿತ ಕಾಲದ ಶಾಲಾವಿದ್ಯಾರ್ಥಿಗಳ ಆಟಗಳೂ ಪ್ರಯೋಗಕ್ಕೆ ಬಂದಾಗ ಇನ್ನೂ ಕಿರಿಯ ಪ್ರಮಾಣದ ಪ್ರಸಂಗಗಳ ಆವಶ್ಯಕತೆ ಕಂಡುಬಂತು. ಮುಂದಿನ ದಿನಗಳಲ್ಲಿ ರಾತ್ರಿಯಿಡೀ ಬಯಲಾಟ ನೋಡುವ ಆಸಕ್ತಿ ಕಡಮೆಯಾದಾಗ ದೀರ್ಘಪ್ರಸಂಗಗಳನ್ನು ಸಂಕ್ಷಿಪ್ತಗೊಳಿಸಿ ಸಮಯಮಿತಿಗೆ ಒಳಪಡಿಸುವುದರೊಂದಿಗೆ ಅಂತಹ ಕಾಲಮಿತಿಯನ್ನೇ ಉಳ್ಳ ಪ್ರಸಂಗಗಳ ರಚನೆಯೂ ಹೆಚ್ಚಾಗತೊಡಗಿತು. ವಸ್ತುವ್ಯಾಪ್ತಿ ಕಿರಿದಾಗಿರುವಂತಹ ಪ್ರಸಂಗಗಳೂ ರಚಿತವಾಗಿ ಹೊರಬಂದುವು. ಅಗರಿ ಭಾಸ್ಕರ ರಾಯರೂ ಇಂತಹ ಪ್ರಸಂಗಗಳನ್ನು ರಚಿಸಿದ್ದು ಈ ಸಂಪುಟದಲ್ಲಿರುವ 'ರುದ್ರಾಂತರ್ಗತ ಶ್ರೀ ಲಕ್ಷ್ಮೀನರಸಿಂಹ' ಎಂಬುದು ಅಂತಹ ರಚನೆಯಾಗಿದೆ. ಶಿವನ ಪಂಚವಿಂಶತಿ

ಲೀಲೆಗಳಲ್ಲಿ ಶರಭಲೀಲೆಯೆಂಬುದೂ ಒಂದೆಂದು ಶೈವಸಂಪ್ರದಾಯದೊಳಗೆ ಕಥೆಯಿದೆ. ರಾಘವಾಂಕನು ಬರೆದ 'ಶರಭಚಾರಿತ್ರ'ವು ಅದರ ಹೆಸರೇ ಸೂಚಿಸುವಂತೆ ಶಿವನ ಶರಭಲೀಲೆಯ ಕಥಾವಸ್ತುವನ್ನುಳ್ಳುದೆಂದೇ ತಿಳಿಯಬಹುದಾಗಿದೆ; ಈ ಕೃತಿ ದೊರಕಿಲ್ಲ. ಶಿವನ ಈ ಲೀಲೆಯ ಬಗೆಗೆ ಯಕ್ಷಗಾನಕ್ಷೇತ್ರದಲ್ಲಿ ಬೇರೆ ಪ್ರಸಂಗಗಳು ಬಂದಂತಿಲ್ಲ. ಶಿವನು ಜಟೆಯನ್ನು ನೆಲಕ್ಕೆ ಬಡಿಗಾದ ವೀರಭದ್ರನ ಉತ್ಪನ್ನವಾಯಿತೆಂಬ ಕಥೆಯಂತೆಯೇ ಜಟಾತಾಡನದಿಂದಲೇ ಶರಭನ ಉತ್ಪತ್ತಿಯಾದ ಕಥೆಯೂ ಇದೆ. ಉಗ್ರನಾದ ನರಸಿಂಹನನ್ನು ಶಮನಗೊಳಿಸಲು ಶರಭನು ಬಂದನೆಂಬ ಕಥೆ ದಾಸಸಾಹಿತ್ಯದಲ್ಲಿಯೂ ಕಾಣುತ್ತದೆ. ಈ ಕಥೆಯನ್ನು ಶಿವನ ಮೇಲ್ಮೆಯನ್ನು ತಿಳಿಸಲು ಶೈವಸಂಪ್ರದಾಯದವರು ಬಳಸಿಕೊಂಡರು. ಉಗ್ರನರಸಿಂಹನನ್ನು ಶಮನಗೊಳಿಸಲು ಶಿವನೇ ಶರಭಾವತಾರ ತಾಳಿ ಬಂದನೆಂದು ವಿಷ್ಣುವಿನ ಮಹಿಮೆಯನ್ನು ಹೇಳಲು ವೈಷ್ಣವರು ಬಳಸಿಕೊಂಡರು. ಹೀಗಿದ್ದಾಗ ಈ ಎರಡೂ ಪಂಥಗಳಿಗಿಂತ ಭಿನ್ನವಾಗಿ ಹರಿ–ಹರಭೇದ ಸಲ್ಲದೆಂಬ ತತ್ತ್ವವನ್ನು ಈ ಪ್ರಸಂಗದಲ್ಲಿ ಭಾಸ್ಕರರಾಯರು ನಿರೂಪಿಸಿರುವುದು ಗಮನಾರ್ಹವಾಗಿದೆ.

ಯಕ್ಷಗಾನಕ್ಷೇತ್ರದಲ್ಲಿ ಮಾದರಿ ಪ್ರಸಂಗ ಅಥವಾ ಪ್ರಾತಿನಿಧಿಕ ಪ್ರಸಂಗ ಯಾವುದೆಂದು ಕೇಳಿದರೆ ಒಂದೇ ಪ್ರಸಂಗವನ್ನು ಹೆಸರಿಸಲು ಸಾಧ್ಯವಿಲ್ಲ. ಪ್ರಾತಿನಿಧಿಕ ಪ್ರಸಂಗಸಮೂಹವನ್ನು ಮಾತ್ರ ಹೆಸರಿಸಬಹುದು. ಪ್ರಸಂಗಗಳನ್ನು ಪರಿಶೀಲಿಸಿದರೆ ಅವೆಲ್ಲವೂ ಒಂದೇ ಮಾದರಿಯ ರಚನೆಗಳೂ ಅಲ್ಲ. ವಿವಿಧ ಮಾದರಿಗಳು ಒಂದಕ್ಕೊಂದು ಹೆಣೆದ ರೂಪದಲ್ಲಿ ಪ್ರಸಂಗಗಳಿವೆ. ಕಾಲ ಕಾಲಕ್ಕೆ ಹೊಸ ಪ್ರಸಂಗಗಳು ಕವಿಗಳಿಂದ ರಚಿತವಾಗುತ್ತಾ ಹೋದಂತೆ ಒಟ್ಟು ಪ್ರಸಂಗಸಾಹಿತ್ಯದ ಸ್ವರೂಪವೂ ವ್ಯತ್ಯಾಸವಾಗುತ್ತಾ ಹೋಗಿದೆ. ಅತ್ಯಂತ ಪ್ರಾಚೀನ ಪ್ರಸಂಗವೆಂದು ಪ್ರೊ. ಎಂ. ಎ. ಹೆಗಡೆಯವರು ಪ್ರತಿಪಾದಿಸುವ 'ಆದಿಪರ್ವ' ಪ್ರಸಂಗದ ಸ್ವರೂಪ ಒಂದು ರೀತಿಯಲ್ಲಿದ್ದರೆ ದೇವಿದಾಸನ 'ದೇವೀಮಹಾತ್ಮೆ' ಪ್ರಸಂಗದ ಸ್ವರೂಪವೇ ಬೇರೆಯಿದೆ. ಇವೆರಡೂ ಪಾರ್ತಿಸುಬ್ಬನ ಪ್ರಸಂಗಗಳಂತಿಲ್ಲ. ಹಟ್ಟಿಯಂಗಡಿ ರಾಮ ಭಟ್ಟರ ಪ್ರಸಂಗಗಳು ನಿರೂಪಣಕ್ರಮದಲ್ಲಿ ಇವುಗಳಿಗಿಂತ ಒಂದಿಷ್ಟು ಭಿನ್ನವಾಗಿವೆ. 'ಕೃಷ್ಣಸಂಧಾನ'ವು ತನ್ನ ಸ್ವರೂಪದಲ್ಲಿ ವಿಶಿಷ್ಟವಾಗಿ ನಿಲ್ಲುವಂತಹ ಅರ್ಹತೆಯನ್ನು ಪಡೆದಿದೆ. ಮುದ್ದಣನ ಪ್ರಸಂಗಗಳು ಆ ಕಾಲದ ದೃಷ್ಟಿಯಿಂದ ಹೊಸ ದಾರಿಯನ್ನೇ ಸೃಷ್ಟಿಮಾಡಿದಂತಿವೆ. ಹಲಸಿನಹಳ್ಳಿ ನರಸಿಂಹ ಶಾಸ್ತ್ರಿಗಳ ಪ್ರಸಂಗಗಳು ಜನಪ್ರಿಯತೆಯ ದೃಷ್ಟಿಯಿಂದ ಮತ್ತು ರಂಗತಂತ್ರದ ದೃಷ್ಟಿಯಿಂದ ವಿಶಿಷ್ಟವಾಗಿವೆ. ಇವೆಲ್ಲವೂ ಒಟ್ಟಾಗಿ ಪ್ರಾತಿನಿಧಿಕ ಪ್ರಸಂಗಗಳ ಒಂದು ಸಮೂಹವಾಗುತ್ತದೆ. ಇಂತಹ ಹಿನ್ನೆಲೆಯಿರುವ ಪ್ರಸಂಗಸಮೂಹಕ್ಕೆ ಕ್ರಿ.ಶ. 20ನೇ ಶತಮಾನದ ಉತ್ತರಾರ್ಧದಲ್ಲಿ ಹಲವರು ಯಕ್ಷಗಾನಕವಿಗಳು ತಮ್ಮ ರಚನೆಗಳನ್ನು ಸೇರಿಸಿ ಈ ಸಮೂಹವನ್ನು ಸಮೃದ್ಧಗೊಳಿಸಿದರು. ಈ ಹೊಸ ಪ್ರಸಂಗಕಾರರ ಪ್ರಸಂಗಗಳಲ್ಲಿ ಕಂಡುಬರುವ ಮುಖ್ಯ ಲಕ್ಷಣವೆಂದರೆ ಅವುಗಳು ಪ್ರಧಾನವಾಗಿ ರಂಗಪ್ರಯೋಗವನ್ನೇ ದೃಷ್ಟಿಯಲ್ಲಿಟ್ಟುಕೊಂಡು

ಬರೆಯಲಾಗಿರುವುದು. ಈ ಕಾರಣದಿಂದಾಗಿ ಹೊಸಕಾಲದ ಪ್ರಸಂಗಗಳು ಸಾಹಿತ್ಯದೃಷ್ಟಿಯಿಂದ ಹಳೆಯ ಪ್ರಸಂಗಗಳಷ್ಟು ಮೇಲುಮಟ್ಟಕ್ಕೆ ಏರುವುದಿಲ್ಲವೆಂಬ ಅಭಿಪ್ರಾಯ ಬರುವುದು ಸಹಜವೇ ಸರಿ. ಮುದ್ದಣ–ಹಲಸಿನಹಳ್ಳಿಯವರ ವರೆಗಿನ, ಹೆಚ್ಚಿನೆಲ್ಲ ಕವಿಗಳ ಪ್ರಸಂಗಗಳನ್ನು ರಂಗಕ್ಕೆ ಪ್ರಯೋಗಿಸುವಾಗ ಅವುಗಳನ್ನು ರಂಗದ ನಡೆಯ ದೃಷ್ಟಿಯಿಂದ ಆವಶ್ಯಕತೆಗನುಗುಣವಾಗಿ 'ಸಂಪಾದಿಸಿಕೊಂಡು' ಪ್ರಯೋಗಿಸಬೇಕಾದ ಅನಿವಾರ್ಯತೆಯಿದೆ. ಎಂದರೆ ಪ್ರಸಂಗವೆಂಬ ಕಾವ್ಯದೊಳಗೆ 'ರಂಗಪ್ರಸಂಗ'ವು ಅಡಗಿರುವ ಒಂದು ವಿಶಿಷ್ಟವಾದ ಕಾವ್ಯದ ಸ್ವರೂಪ ಹಳೆಯ ಪ್ರಸಂಗಗಳಲ್ಲಿವೆ. ಹೊಸಕಾಲದ ಪ್ರಸಂಗಗಳು ರಂಗಪ್ರಯೋಗದ ಉದ್ದೇಶದಿಂದಲೇ ಬರೆಯಲಾದುವಾದುದರಿಂದ ಈ ರೀತಿ 'ಸಂಪಾದಿಸಿಕೊಳ್ಳುವ' ಅಥವಾ ಬೇಕಾದಂತೆ ಸಂಕ್ಷಿಪ್ತಗೊಳಿಸಿಕೊಳ್ಳುವ ಆವಶ್ಯಕತೆ ಅಷ್ಟಾಗಿ ಕಂಡುಬರುವುದಿಲ್ಲ. ಈ ಬದಲಾವಣೆಯನ್ನು ತಂದವರು ಹಿರಿಯ ಬಲಿಪರೆಂದು ಈ ಹಿಂದೆ ಹೇಳಲಾಗಿದೆ. ಅವರ ಈ ಪ್ರಕ್ರಮವು ಹೆಚ್ಚಿನ ಎಲ್ಲ ಪ್ರಸಂಗಕರ್ತರಿಂದ ಸ್ವೀಕೃತವಾಯಿತೆಂಬುದು ಯಕ್ಷಗಾನಪ್ರಸಂಗಗಳ ಇತಿಹಾಸದಲ್ಲಿ ಗಮನಿಸಬೇಕಾದ ಅಂಶ. ಈ ಕಾರಣದಿಂದಲೇ ಅಗರಿ ಭಾಸ್ಕರ ರಾಯರ ಪ್ರಸಂಗಗಳೂ ಸಾಮಾನ್ಯವಾಗಿ 'ರಂಗಪ್ರಸಂಗ'ಗಳೇ ಆಗಿವೆ.

ಯಕ್ಷಗಾನಕ್ಷೇತ್ರದಲ್ಲಿ ಪೌರಾಣಿಕವಲ್ಲದಿದ್ದರೂ ಪೂರ್ತಿಯಾಗಿ ಪೌರಾಣಿಕ ಸ್ವರೂಪವೇ ಉಳ್ಳ ಪ್ರಸಂಗಗಳು ರಚಿತವಾಗಿವೆ. ಇಂತಹವು ಯಕ್ಷಗಾನದಲ್ಲಿಯೇ ಮೊದಲಾಗಿ ರಚಿತವಾದ ಕಥೆಗಳಲ್ಲ. ಬೇರೆ ಮೂಲಗಳೂ ಇವೆ. ಉದಾಹರಣೆಗೆ, 'ಕೃಷ್ಣಾರ್ಜುನಕಾಳಗ'ವೆಂಬ ಜನಪ್ರಿಯ ಪ್ರಸಂಗವಿದೆ. ಬಡಗುತಿಟ್ಟಿನಲ್ಲಿ ಮತ್ತು ತೆಂಕುತಿಟ್ಟಿನಲ್ಲಿ ಜನಪ್ರಿಯವಾಗಿರುವ ಎರಡು ಪ್ರತ್ಯೇಕ ಪ್ರಸಂಗಗಳಿವೆ. ಈ ಪ್ರಸಂಗಕ್ಕೆ ಪುರಾಣಮೂಲವಿಲ್ಲವೆಂದರೆ ಯಕ್ಷಗಾನಕ್ಷೇತ್ರದ ಹಲವರಿಗೆ ಆಶ್ಚರ್ಯವೂ ಆಗಬಹುದು. ಹೀಗೆಯೇ 'ರಾಮಾಂಜನೇಯಯುದ್ಧ'ದ ಕಥೆಗೂ ಪುರಾಣಾಧಾರವಿಲ್ಲ. ಈ ಕಥೆಯನ್ನು ಆಧರಿಸಿ ಮೂರು ಪ್ರಸಂಗಗಳು ರಚಿತವಾದಂತೆ ಮಾಹಿತಿಯಿದೆ. ಕೃಷ್ಣಾರ್ಜುನಕಾಳಗಕ್ಕೆ ಕೋನಯ್ಯನೆಂಬ ಕವಿಯ 'ಗಯಚರಿತ್ರೆ' ಎಂಬ ಕೃತಿ ಆಧಾರವೆಂದು ತಿಳಿದುಬರುತ್ತದೆ. ರಾಮಾಂಜನೇಯಯುದ್ಧಕ್ಕೆ ಯಾವುದು ಆಧಾರವೆಂದು ತಿಳಿಯದು. ಈ ಹೆಸರಿನ ಒಂದು ಸಿನಿಮಾ ಬಂದಿರುವ ಮಾಹಿತಿಯಿದೆ. ದಿ. ಗುರುರಾಜುಲು ನಾಯ್ಡು ಮೊದಲಾದ ಹರಿದಾಸರು ಈ ಕಥೆಯನ್ನು ಹರಿಕಥೆಯಾಗಿ ವಿಸ್ತರಿಸುತ್ತಿದ್ದರೆಂದು ತಿಳಿಯುತ್ತದೆ. ತೆಲುಗುನಾಡಿನಲ್ಲಿಯೂ ಈ ಕಥೆ ಪ್ರಚಲಿತವಿದ್ದಂತೆ ಮಾಹಿತಿಯಿದೆ. ಹೀಗೆ ಪುರಾಣೇತರವಾದರೂ ಪುರಾಣಕ್ಕೆ ಸೇರ್ಪಡೆಯೆಂಬ ರೂಪದಲ್ಲಿ ಕಥೆಗಳು ನಮ್ಮಲ್ಲಿ ರಚಿತವಾಗುತ್ತಲೇ ಇದ್ದುವು. ಈ ಹಿನ್ನೆಲೆಯಿಂದ 'ವೀರರಾಣಿ ಅಪ್ರಮೇಯೀ' ಪ್ರಸಂಗವನ್ನು ಗಮನಿಸಬಹುದಾಗಿದೆ. ಜೈಮಿನಿಭಾರತದಲ್ಲಿ ಬರುವ ಸುಧನ್ವನ ಪತ್ನಿ ಪ್ರಭಾವತಿ ಮಗುವನ್ನು ಪಡೆದಳೇ? ಎಂಬ ಬಗೆಗೆ ಅಲ್ಲಿ ಯಾವ ಮಾಹಿತಿಯೂ ಇಲ್ಲ. ಪ್ರಮೀಳೆಯನ್ನು ವಿವಾಹವಾದ ಅರ್ಜುನನ ಸಂಪರ್ಕದಿಂದ ಆಕೆಗೆ ಸಂತತಿಯಾಯಿತೇ? ಎಂಬ ಬಗೆಗೂ ಯಾವ

ಮಾಹಿತಿಯೂ ಇಲ್ಲ. ಈ ಎರಡು ಘಟನೆಗಳಲ್ಲಿಯೂ ಅವರಿಗೆ ಕ್ರಮವಾಗಿ ಗಂಡು ಮತ್ತು ಹೆಣ್ಣು ಸಂತತಿ ಆಯಿತೆಂಬ ಕಲ್ಪನೆ ಮಾಡಿಕೊಂಡು ಅವರ ವಿವಾಹವನ್ನು ಏರ್ಪಡಿಸಿ ಕಥೆಯನ್ನು ಮುಂದುವರಿಸಿ ಪ್ರಸಂಗರಚನೆ ಮಾಡಿರುವುದು ಗಮನಾರ್ಹವಿಷಯವಾಗಿದೆ. ಬೆಣ್ಣೆಮನೆ ಗೋಪಾಲಕೃಷ್ಣ ಭಟ್ಟರಿಗೆ ಈ ಕಥೆಯನ್ನು ಒದಗಿಸಿಕೊಡಲು ಯಾವುದೇ ಇತರ ಮೂಲಗಳಿದ್ದುವೇ ಎಂಬ ಬಗೆಗೆ ಮಾಹಿತಿಯಿಲ್ಲವಾದರೂ ಪೌರಾಣಿಕ ಕಾಲ್ಪನಿಕ ಪ್ರಸಂಗಗಳ ಸಮೂಹಕ್ಕೆ ಇದೊಂದು ಯೋಗ್ಯವಾದ ಸೇರ್ಪಡೆಯೇ ಹೌದೆಂದು ಧಾರಾಳವಾಗಿ ಹೇಳಬಹುದು. ನಮ್ಮ ಪುರಾಣಗಳಲ್ಲಿರುವ ಅಥವಾ ರಾಮಾಯಣ–ಮಹಾಭಾರತಗಳಲ್ಲಿರುವ ಎಷ್ಟೋ ಘಟನೆ ಮತ್ತು ವ್ಯಕ್ತಿಗಳ ಸಂದರ್ಭದಲ್ಲಿರುವ 'ಎಡೆ'ಗಳನ್ನು ಈ ರೀತಿಯ ಕಾಲ್ಪನಿಕ ಕಥೆಗಳಿಂದ ತುಂಬಿಸಿಕೊಳ್ಳುವ ಸಾಧ್ಯತೆಯಿದೆ. (ಮಹಾಕವಿ ಕುವೆಂಪು ಅವರು ತಮ್ಮ 'ಶ್ರೀರಾಮಾಯಣದರ್ಶನ'ದಲ್ಲಿ ವಾಲ್ಮೀಕಿರಾಮಾಯಣದಲ್ಲಿಲ್ಲದ ಮಂಥರೆಯ ಕಥೆಯನ್ನು ಹೀಗೆಯೇ ಸ್ವಕಲ್ಪನೆಯಿಂದ ವಿಸ್ತರಿಸಿಕೊಂಡಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.)

ಅಗರಿ ಭಾಸ್ಕರರಾಯರ 'ಶ್ರೀಹರಿಲೀಲಾರ್ಣವ'ವು ವಿವಿಧ ಅಧ್ಯಾಯಗಳಲ್ಲಿ ರಚಿತವಾದ ಪ್ರಸಂಗ. ಹಿಂದಿನ ಕವಿಗಳ ಪ್ರಸಂಗಗಳಲ್ಲಿ ಹೆಚ್ಚಿನವು ಸಾಮಾನ್ಯವಾಗಿ ಸಂಧಿಗಳಾಗಿ ವಿಂಗಡಣೆಗೊಂಡಿರುವುದಿಲ್ಲ. ಹಸ್ತಪ್ರತಿಗಳಲ್ಲಿ ಪ್ರಸಂಗದ ಹೆಸರನ್ನು ಬರೆದು 'ಸಂಧಿ ೧ಕ್ಕಂ ಪದನು ---ಕ್ಕಂ ಮಂಗಳಮಹಾಶ್ರೀ' ಎಂದು ಬರೆದಿರುವುದುಂಟು. ಕೆಲವೇ ಪ್ರಸಂಗಗಳು ಮೊದಲನೆಯ ಮತ್ತು ಎರಡನೆಯ ಸಂಧಿಗಳಾಗಿ ವಿಭಕ್ತವಾಗಿವೆ. ಹೊಸಕಾಲದಲ್ಲಿ ಕೆಲವು ಪ್ರಸಂಗಕರ್ತರು ನಾಲ್ಕಾರು ಕಥೆಗಳನ್ನು ಒಟ್ಟು ಸೇರಿಸಿ ಒಂದೇ ಪ್ರಸಂಗವನ್ನಾಗಿಸಿ ಅವುಗಳಲ್ಲಿ ಒಂದೊಂದು ಭಾಗವನ್ನೂ ಪ್ರತ್ಯೇಕ ರಂಗಪ್ರಯೋಗವಾಗಿ ಮಾಡುವ ಅನುಕೂಲವನ್ನು ಕಲ್ಪಿಸಿರುವುದು ಕಂಡುಬರುತ್ತದೆ. ಭಾಸ್ಕರ ರಾಯರ 'ಶ್ರೀಹರಿಲೀಲಾರ್ಣವ'ವು ಪರಸ್ಪರ ಸಂಬಂಧವುಳ್ಳ ಆರು ಕಥೆಗಳ ಸಂಕಲನ. ಕಾಲಮಿತಿಯ ಪ್ರಯೋಗಕ್ಕಾಗಿ ಇವನ್ನು ಬೇರೆಬೇರೆಯಾಗಿಯೂ ಆಯ್ದುಕೊಳ್ಳಬಹುದಾಗಿದೆ. ಹೊಸ ಪ್ರಸಂಗಕಾರರಲ್ಲಿ ಡಿ. ಎಸ್. ಶ್ರೀಧರ ಅವರು ತಮ್ಮ 'ಮಹಾಪ್ರಸ್ಥಾನ' ಎಂಬ ಪ್ರಸಂಗದಲ್ಲಿ ಐದು ಸಂಧಿಗಳನ್ನು ಮಾಡಿ ಅವೆಲ್ಲವನ್ನೂ ಬೇರೆ ಬೇರೆಯಾಗಿಯೂ ಒಟ್ಟಾಗಿಯೂ ಪ್ರಯೋಗಿಸಲು ಅನುಕೂಲ ಮಾಡಿರುತ್ತಾರೆ. ಅವರ 'ಶುಕ್ರಸಂಜೀವಿನೀ' ಪ್ರಸಂಗ ಕೂಡ ಹೀಗೆ ಆರು ಸಂಧಿಗಳಲ್ಲಿ ರಚಿತವಾಗಿರುವುದನ್ನು ಗಮನಿಸಬಹುದು. ಇಂತಹ ಪ್ರಯೋಗಪಟುತ್ವವನ್ನು ಭಾಸ್ಕರರಾಯರೂ ತೋರಿಸಿದ್ದಾರೆಂಬುದು ಇಲ್ಲಿ ಉಲ್ಲೇಖಿಸಲೇಬೇಕಾದುದು.

'ಯಕ್ಷಗಾನಕ್ಕೆ ಪೌರಾಣಿಕ ಪ್ರಸಂಗಗಳೇ ಒಪ್ಪುವಂತಹವು; ಕಾಲ್ಪನಿಕ, ಐತಿಹಾಸಿಕ ಮತ್ತು ಜಾನಪದ ವಸ್ತುಗಳು ಯೋಗ್ಯವಲ್ಲ' ಎಂಬುದು ಯಕ್ಷಗಾನಕ್ಷೇತ್ರದಲ್ಲಿ ಅಧ್ಯಯನಮಾಡಿದ ಕೆಲವು ವಿದ್ವಾಂಸರ ಅಭಿಪ್ರಾಯ. ಆದರೆ,

ಯಕ್ಷಗಾನಕ್ಷೇತ್ರವು ಈ ಅಭಿಪ್ರಾಯಗಳಿಗನುಗುಣವಾಗಿ ಬೆಳೆದಿಲ್ಲ. ಯೋಗ್ಯವೋ ಯೋಗ್ಯವಲ್ಲವೋ ನಾನಾರೀತಿಯಲ್ಲಿ ಅದರ ಬೆಳವಣಿಗೆ ಉಂಟಾಗಿರುವುದು ವಾಸ್ತವ. ಯಕ್ಷಗಾನದ ಪ್ರಾತಿನಿಧಿಕಪ್ರಸಂಗಗಳು ಯಾವುವೆಂದರೆ, ವಿಮರ್ಶಕರ ಅಭಿಪ್ರಾಯದಂತೆ ಪೌರಾಣಿಕಪ್ರಸಂಗಗಳನ್ನೇ ಹೇಳಬೇಕಾಗುತ್ತದಾದರೂ ಇತರ ಪ್ರಸಂಗಗಳನ್ನು ಅವಗಣಿಸುವುದು ಐತಿಹಾಸಿಕ ದೃಷ್ಟಿಯಿಂದ ತಪ್ಪಾಗುತ್ತದೆ. ಪ್ರಾಯಶಃ ತುಳುನಾಡಿನ ಜನಪದವಸ್ತುಗಳನ್ನಾಧರಿಸಿದ ತುಳುಪ್ರಸಂಗಗಳು ಮೊದಲಿಗೆ ರಚಿತವಾಗಿ ರಂಗಕ್ಕೆ ಬಂದಾಗಲೂ 'ಈ ಪ್ರಸಂಗಗಳು ಯಕ್ಷಗಾನವೇ ಅಲ್ಲ' ಎಂಬ ಅಭಿಪ್ರಾಯ ಕೆಲವರಿಂದ ವ್ಯಕ್ತವಾಗಿತ್ತು. ಆಗ 'ತುಳುತಿಟ್ಟು ಎಂಬ ಒಂದು ಪ್ರತ್ಯೇಕ ವಿಭಾಗವನ್ನೇ ಪರಿಗಣಿಸುವುದು ಒಳಿತು' ಎಂಬ ಪ್ರತ್ಯಭಿಪ್ರಾಯವೂ ರೂಪುಗೊಂಡಿತು. ಇಂದಿಗೂ ತುಳುತಿಟ್ಟೆಂಬ ಬೇರೆಯೇ ವಿಭಾಗ ಇದೆಯೇ ಎಂಬ ಬಗೆಗೆ ನಿರ್ಣಯವೇನೂ ಬಂದಂತಿಲ್ಲ. ಆದರೆ, ತುಳುಪ್ರಸಂಗಗಳನ್ನು ಜನತೆ ಸ್ವೀಕರಿಸಿರುವುದು ಸುಳ್ಳಲ್ಲ. (ತುಳುವಿನ ಮೊತ್ತಮೊದಲ ಪ್ರಸಂಗವಾದ 'ತುಳು ಪಂಚವಟಿ – ವಾಲಿಸುಗ್ರೀವೆರೆ ಕಾಳಗೊ' ಎಂಬುದು ಪೆರ್ವಡಿ ಸಂಕಯ್ಯ ಭಾಗವತರಿಂದ ರಚಿತವಾದಾಗ ಈ ರೀತಿಯ ಆಕ್ಷೇಪ ಬಂದಿರಲಾರದು. ಅದು ರಾಮಾಯಣಪ್ರಸಂಗವೇ ಆದುದರಿಂದ ಅದನ್ನು ಅಂದಿನವರು ಸ್ವೀಕರಿಸಿರಬೇಕು. ಆದರೂ ಆ ಕಾಲದಲ್ಲಿ ತುಳುವಿನಲ್ಲಿ ಅದರ ರಂಗಪ್ರಯೋಗವಾಯಿತೇ ಎಂಬ ವಿಷಯದಲ್ಲಿ ಮಾಹಿತಿಯಿಲ್ಲ. ಜಾನಪದ ಮತ್ತು ಕಾಲ್ಪನಿಕ ಪ್ರಸಂಗಗಳು ಬಂದಾಗ ಈ ಬಗೆಗೆ ವಿಮರ್ಶೆ ಪ್ರಾರಂಭವಾಯಿತೆಂದು ಹೇಳಬಹುದು.) ಕಾಲ್ಪನಿಕ, ಐತಿಹಾಸಿಕ ಮತ್ತು ಮಿಶ್ರವಸ್ತುಗಳುಳ್ಳ ಪ್ರಸಂಗಗಳನ್ನು ಪ್ರಾತಿನಿಧಿಕ ಪ್ರಸಂಗಗಳೆಂದು ಮುಂದುಮಾಡದಿದ್ದರೂ ಅವು ಯಕ್ಷಗಾನಪ್ರಸಂಗಗಳೇ ಅಲ್ಲವೆಂದು ನಿರಾಕರಿಸಲು ಸಾಧ್ಯವಾಗುವುದಿಲ್ಲ. ಈ ಹಿನ್ನೆಲೆಯಿಂದ ಭಾಸ್ಕರರಾಯರು ಬರೆದ ಈ ಪ್ರಸಂಗಗಳು ಹಳೆಯ ಯಕ್ಷಗಾನಕವಿಗಳ ಪ್ರಸಂಗಗಳಂತೆ ಪ್ರಾತಿನಿಧಿಕ ಪ್ರಸಂಗಗಳೆಂದು ಸ್ಥಾನವನ್ನು ಪಡೆಯದಿದ್ದರೂ ಯಕ್ಷಗಾನಸಾಹಿತ್ಯದ ವ್ಯಾಪ್ತಿಯೊಳಗೆ ಪರಿಗಣಿಸಲೇಬೇಕಾದ ಗಮನಾರ್ಹ ಪ್ರಸಂಗಗಳಾಗಿವೆಯೆಂಬುದರಲ್ಲಿ ಸಂಶಯವಿಲ್ಲ.

ಅಗರಿ ಭಾಸ್ಕರ ರಾಯರ ಮೊದಲ ಪ್ರಸಂಗ ರಚಿತವಾದುದು ಸುಮಾರು 1972ರಲ್ಲಿ; ಮುದ್ರಿತವಾದುದು 1973ರಲ್ಲಿ. ರಂಗಕ್ಕೆ ಬಂದುದು 1972ರಲ್ಲಿಯೇ. 1985ರ ವರೆಗೆ ಅವರು ಹಲವು ಪ್ರಸಂಗಗಳನ್ನು ಬರೆದು ಅನಂತರ ಹನ್ನೆರಡು ವರ್ಷಗಳ ಕಾಲ ಯಾವ ಪ್ರಸಂಗವನ್ನೂ ರಚಿಸಲಿಲ್ಲವಂತೆ. ಅನಂತರ ಪುನಃ ಪ್ರಸಂಗರಚನೆಯನ್ನು ಮುಂದುವರಿಸಿದರು; ಹಲವು ಪ್ರಸಂಗಗಳನ್ನು ರಚಿಸಿದರು. ಈಗಲೂ ಅವರ ಪ್ರಸಂಗರಚನೆಯ ಉತ್ಸಾಹ ಎಚ್ಚರದಲ್ಲಿಯೇ ಇದೆ. ಅದರೊಂದಿಗೆ ಯಕ್ಷಗಾನದ ಪತ್ರಿಕೆಗಳಲ್ಲಿ ಯಕ್ಷಗಾನಕ್ಷೇತ್ರಕ್ಕೆ ಸಂಬಂಧಿಸಿದ ಹಲವು ನೆನಪುಗಳನ್ನೂ ಘಟನೆಗಳನ್ನೂ ಲೇಖನರೂಪದಲ್ಲಿ ಬರೆಯಲು ತೊಡಗಿದ್ದಾರೆ. ಅವರಲ್ಲಿ ಹಳೆಯ ಅನುಭವಗಳ ಮತ್ತು ನೆನಪುಗಳ ಸಾಕಷ್ಟು ದೊಡ್ಡ ಭಂಡಾರವಿದೆ. ಪ್ರಸಂಗಗಳು

ಸಂಪುಟರೂಪದಲ್ಲಿ ಬಂದಂತೆಯೇ ಯಕ್ಷಗಾನಕ್ಷೇತ್ರದ ಅನುಭವಗಳೂ ದಾಖಲಾಗಿ ಅಧ್ಯಯನಕ್ಕೊದಗುವುದು ಅವಶ್ಯವಿದೆ. ಯಕ್ಷಗಾನದ ನಾನಾಮುಖಗಳ ಅಧ್ಯಯನ ದಲ್ಲಿ ಈ ಅನುಭವಕಥನಗಳು ಮೂಲಸಾಮಗ್ರಿಗಳಾಗಿ ಒದಗುತ್ತವೆ. ಯಕ್ಷಗಾನದ ಪರಿವರ್ತನೆಯ ಕಾಲಘಟ್ಟದ ದಾಖಲಾತಿ ಐತಿಹಾಸಿಕದೃಷ್ಟಿಯಿಂದ ಬಹಳ ಮುಖ್ಯ ವಾದುದು. ಭಾಸ್ಕರರಾಯರಂತಹ ಹಿರಿಯರು ಈ ಕೆಲಸವನ್ನು ಮಾಡುವುದು ಅವಶ್ಯವಿದೆ.

ಇಲ್ಲಿ ಸಂಕಲಿತವಾಗಿರುವ ಪ್ರಸಂಗಗಳು ಹಿಂದೆ ಮುದ್ರಿತವಾದಾಗ ಪ್ರಸಂಗದ ಹೆಸರಿನ ಹಿಂದೆ ಪ್ರತಿಯೊಂದರಲ್ಲಿಯೂ 'ಯಕ್ಷಗಾನ' ಎಂಬ ಪ್ರಕಾರನಾಮವನ್ನು ಇರಿಸಿಕೊಳ್ಳಲಾಗಿದೆ. ಈ ಇಡಿಯ ಸಂಪುಟವೇ ಯಕ್ಷಗಾನದ್ದಾದುದರಿಂದ ಸಂಪುಟದೊಳಗೆ ಪ್ರಸಂಗಗಳನ್ನು ಹೆಸರುಗಳನ್ನು ಕೊಡುವಲ್ಲಿ 'ಯಕ್ಷಗಾನ'ವೆಂಬ ಉಲ್ಲೇಖವನ್ನು ಕೈಬಿಡಲಾಗಿದೆ. ಉದಾ: 'ಯಕ್ಷಗಾನ ಶ್ರೀವಾಣೀವಿಲಾಸ' ಇದು ಕೇವಲ 'ಶ್ರೀವಾಣೀವಿಲಾಸ' ಎಂದು ಮಾತ್ರ ಹೆಸರಿಸಲ್ಪಟ್ಟಿದೆ. (ಯಕ್ಷಗಾನದ ಪ್ರಸಂಗಸೂಚಿಯನ್ನು ರಚಿಸುವಾಗ ಪ್ರಸಂಗದ ಹೆಸರನ್ನು ಮಾತ್ರ ಉಲ್ಲೇಖಿಸ ಬೇಕಾಗುತ್ತದೆ. ಎಲ್ಲ ಪ್ರಸಂಗಗಳಿಗೂ ಹಿಂದೆ 'ಯಕ್ಷಗಾನ' ಎಂಬುದನ್ನು ಜೋಡಿಸಿದಲ್ಲಿ ಪ್ರಸಂಗಗಳ ಅಕಾರಾದಿಯು ಪ್ರಯೋಜನವನ್ನು ಕಳೆದುಕೊಳ್ಳುವ ಸಂದರ್ಭವಿದೆ.)

ಈ ಪ್ರಸಂಗಗಳನ್ನು ಸಂಪುಟವಾಗಿ ಸಂಪಾದಿಸುವಾಗ ಪ್ರಸಂಗಪದ್ಯಗಳನ್ನು ಛಂದಸ್ಸಿಗನುಗುಣವಾಗಿ ವಿಂಗಡಿಸಿ ಬರೆಯಲಾಗಿದೆ. ಮೊದಲು ಮುದ್ರಣಗೊಂಡ ಎಲ್ಲ ಪ್ರಸಂಗಗಳಲ್ಲಿಯೂ ಸಾಂಪ್ರದಾಯಿಕ ಕ್ರಮವೇ ಅನುಸರಿಸಲ್ಪಟ್ಟಿದೆ. ಪದ್ಯಗಳು ಸಾಲುಸಾಲುಗಳಾಗಿ ಯಾವುದೇ ವಿಂಗಡನೆಯಿಲ್ಲದೆ ಚರಣಗಳು ಗೀಟುಗಳಿಂದ ಮಾತ್ರ ಗುರುತಿಸಲ್ಪಟ್ಟಿವೆ. ಪ್ರಕೃತ ಈ ವಿಂಗಡನೆಯೊಂದಿಗೆ ಪದ್ಯಗಳ ಮುಂದುವರಿದ ಒಟ್ಟು ಸಂಖ್ಯೆಗಳನ್ನೂ ಗುರುತಿಸಿಕೊಡಲಾಗಿದೆ. ಪ್ರತಿ ಪ್ರಸಂಗದ ಭೂಮಿಕೆಗಳ ವಿವರ ಮತ್ತು ಕಥಾಸಾರವನ್ನು ಪ್ರಸಂಗಕ್ಕೆ ಮೊದಲು ಕೊಡಲಾಗಿದೆ. ಹಿಂದಿನ ಮುದ್ರಣಗಳ ಮುನ್ನುಡಿಗಳನ್ನು ಮತ್ತು ಮೆಚ್ಚುಮಾತುಗಳಲ್ಲಿ ಕೆಲವನ್ನು ಇರಿಸಿಕೊಂಡು ಅನುಬಂಧ ದಲ್ಲಿ ನೀಡಲಾಗಿದೆ. ಒಟ್ಟು ಭಾಸ್ಕರರಾಯರ ಪ್ರಸಂಗಗಳನ್ನು ಆದಷ್ಟು ಪ್ರಸಂಗಕ್ರಮದ ಅಚ್ಚುಕಟ್ಟು ಎದ್ದುಕಾಣುವಂತೆ ಸಂಕಲಿಸಲಾಗಿದೆ.

– ಪಾದೇಕಲ್ಲು ವಿಷ್ಣು ಭಟ್ಟ

ಯಕ್ಷಗಾನ ಪ್ರಸಂಗದಶಕ

ಅಗಸ್ತ್ಯಚರಿತೆ

❖❖❖

ಭೂಮಿಕೆಗಳು

ಸೂರ್ಯ
ವರುಣ
ಊರ್ವಶಿ
ವಸಿಷ್ಠ
ಅಗಸ್ತ್ಯ
ವಿಂಧ್ಯೇಶ
ನಾರದ
ಚಂದ್ರಸೇನ ಮಹಾರಾಜ
ಲೋಪಾಮುದ್ರೆ
ವಾತಾಪಿ
ಇಲ್ವಲ
ದೇವೇಂದ್ರ
ವಿಷ್ಣು
ಮುನಿಗಳು, ಚಾರಕರು, ಬ್ರಾಹ್ಮಣರು ಇತ್ಯಾದಿ

ⵣⵣⵣⵣⵣ

ಕಥಾಸಾರ

ಸಾಗರತೀರ್ಥಕ್ಕೆ ಸೂರ್ಯ ಬಂದಾಗ ಸೂರ್ಯ–ವರುಣ ಸಂವಾದ; ತಾನು ಮೇಲು ತಾನು ಮೇಲೆಂದು ಅವರೊಳಗೆ ವಾಗ್ವಾದ; ಊರ್ವಶಿಯ ಆಗಮನ; ಸೂರ್ಯನಿಗೆ ಆಕೆಯಲ್ಲಿ ಮೋಹವುಂಟಾಗುವುದು; ಒಂದು ದಿನ ಅವನೊಡನಿರಲು ಊರ್ವಶಿಯ ಒಪ್ಪಿಗೆ; ಅದೇ ಹೊತ್ತಿಗೆ ವರುಣನಿಗೆ ಆಕೆಯಲ್ಲಿ ಮೋಹವುಂಟಾಗುವುದು; ಆಕೆ ಒಪ್ಪದಾಗ ವರುಣನ ವೀರ್ಯ ಸ್ಖಲಿತವಾಗಲು ಅದನ್ನು ಕುಂಭದಲ್ಲಿ ಹಾಕಿಡುವುದು; ಮಿತ್ರನ ಆಗಮನ; ಅವನಿಗೂ ವೀರ್ಯಸ್ಖಲಿತವಾಗಿ ಅದೇ ಕುಂಭದಲ್ಲಿ ಅದನ್ನಿರಿಸುವುದು; ಈ ವೀರ್ಯದಿಂದ ಕುಂಭದಲ್ಲಿ ವಸಿಷ್ಠ–ಅಗಸ್ತ್ಯರ ಜನನ; ಇಕ್ಷ್ವಾಕುಗಳಿಗೆ ವಸಿಷ್ಠ ಗುರುವಾದಾಗ ಅಗಸ್ತ್ಯನು ದಕ್ಷಿಣಕ್ಕೆ ಹೋಗುವುದು; ವಿಂಧ್ಯನು ಮಿತ್ರನ ದಾರಿಗಡ್ಡಬರುವುದು; ನಾರದನಿಂದ ಅಗಸ್ತ್ಯನಿಗೆ ಈ ವಿಷಯ ತಿಳಿದು ವಿಂಧ್ಯನ ಕಾಯವನ್ನು ಕುಗ್ಗಿಸುವುದು; ಗೋದಾವರೀತೀರದಲ್ಲಿದ್ದ ಅಗಸ್ತ್ಯ ವಿದರ್ಭಕ್ಕೆ ಬಂದು ಚಂದ್ರಸೇನನ ಮಗಳು ಲೋಪಾಮುದ್ರೆಯನ್ನು ವಿವಾಹವಾಗುವುದು; ವಾತಾಪಿ ಇಲ್ವಲರ ಬಾಧೆ ತಾಳದ ಬ್ರಾಹ್ಮಣರಿಂದ ಅಗಸ್ತ್ಯರಿಗೆ ವಿನಂತಿ; ರಾಕ್ಷಸರಲ್ಲಿಗೆ ಬಂದ ಅಗಸ್ತ್ಯರು ಆಡಿನ ಮಾಂಸವಾಗಿ ಹೊಟ್ಟೆಯ ಒಳಹೋದ ವಾತಾಪಿಯನ್ನು ಜೀರ್ಣಿಸಿ ಇಲ್ವನನನ್ನು ಸುಟ್ಟುಬಿಡುವುದು, ಅಗಸ್ತ್ಯನಿಗೆ ಇಧ್ಮವಾಹನನೆಂಬ ಮಗನ ಜನನ; ಕಾಲಕೇಯರ ಉಪಟಳದ ಬಗೆಗೆ ಇಂದ್ರನಿಂದ ವಿಷ್ಣುವಿಗೆ ದೂರು; ವಿಷ್ಣುವಿನ ಸೂಚನೆಯಂತೆ ಅಗಸ್ತ್ಯನಲ್ಲಿಗೆ ಇಂದ್ರನ ಆಗಮನ; ಪಾತಾಳದಲ್ಲಡಗಿದ ಕಾಲಕೇಯರನ್ನು ಸೆಳೆಯಲು ಸಾಗರದ ನೀರನ್ನು ಬೊಗಸೆಯೊಳಗೆ ತುಂಬಿಸಿ ಹೀರಿದ ಅಗಸ್ತ್ಯ; ದೈತ್ಯರ ನಾಶ; ದೇವತೆಗಳ ಸಂತೋಷ – ಮಂಗಲ.

⌘⌘⌘⌘⌘

ಅಗಸ್ತ್ಯಚರಿತೆ

ಶಾರ್ದೂಲವಿಕ್ರೀಡಿತ ವೃತ್ತ

ಪೃಥ್ವೀಶರ್ ನಿಜ ಧರ್ಮವಂ ಮರೆತಿರಲ್ಕಂದಾ ಕುರುಕ್ಷೇತ್ರದೊಳ್
ಭಕ್ತಾಗ್ರೇಸರರಾದ ಪಾಂಡುಸುತರಿಂ ಕ್ಷಾತ್ರೇಯರಂ ಛೇದಿಸೀ ।
ಧಾತ್ರೀಶತ್ವವ ಧರ್ಮದೇವಗೊಲಿದಿತ್ತಾ ರುಕ್ಮಿಣೀನಾಥನಂ
ದೈತ್ಯಾರಾತಿಯ ದಿವ್ಯಪಾದಯುಗವಂ ಧ್ಯಾಯಾಮಿ ಚಿತ್ತೇ ಸದಾ ॥ ೧ ॥ [೧]

ರಾಗ : ನಾಟಿ, ಝಂಪೆತಾಳ

ಜಯತು ಜಯ ಗಜಮುಖನೆ । ಜಯತು ಗೌರೀತನಯ ।
ಜಯತು ಮಂಗಳಕಾಯ । ಜಯತು ವಿಘ್ನೇಶ ॥
ಜಯ ಜಯತು ಜಯತು ॥ ॥ ೧ ॥

ಮೊದಲು ನಿನ್ನನು ನಾನು । ಮುದದಿಂದ ನೆನೆಯುವೆನು ।
ಪದುಳದಿಂ ಪೊರೆಯೆನ್ನ । ವಿಘ್ನನಾಶಕನೆ ॥
ಜಯ ಜಯತು ಜಯತು ॥ ॥ ೨ ॥

ಮತಿಯ ಕೊಡು ಶಾರದೆಯೆ । ಹಿತದಿಂದ ಬೇಡುವೆನು ।
ಕ್ಷಿತಿಯೊಳಗೆ ನೀಡು ಸ । ನ್ಮತಿಯ ಶ್ರೀದೇವಿ ॥
ಜಯ ಜಯತು ಜಯತು ॥ ॥ ೩ ॥

ಧರೆಯ ಕವಿಗಳ ನೆನೆದು । ಬರೆದೆನೀ ಕೃತಿಯ ನಾ ।
ವರಯಕ್ಷಗಾನದಲಿ । ಮೆರೆಸುವುದು ನೀವು ॥ ॥ ೪ ॥ [೫]

ವಾರ್ಧಕ

ಹೇರಂಬನನು ನೆನೆದು ಶಾರದೆಗೆ ತಲೆಬಾಗಿ ।
ಮಾರಾರಿ ಸುರ ಗುಹರ ಚಾರುಪದಗಳಿಗೆರಗಿ ।
ಭೂರಿತೋಷದಿ ಬರೆವೆನಗಸ್ತ್ಯಚರಿತೆಯದೆಂಬ ಕತೆ ಯಕ್ಷಗಾನದೊಳಗೆ ॥
ಧಾರಿಣಿಯ ಕವಿಗಳೆಲ್ಲರ ಚರಣಕರ್ಪಿಸಿದೆ ।
ಭೂರಿಸಂತಸದಿಂದ ಮೆರೆಸುವುದು ಧಾತ್ರಿಯಲಿ ।
ಮೇರುಕಲೆ ರಂಜಿಸಲಿ ಶುಭವ ಕೊಡುತಲಿ ಧರೆಗೆ ಸದ್ಧರ್ಮ ಸಾರುತಿಂದು ॥ ೧ ॥

ದ್ವಿಪದಿ

ಇನಿತೆಲ್ಲ ದೇವರನು ನೆನೆದು ಮನದೊಳಗೆ ।
ಸನ್ಮತಿಯ ನೀಡೆಂದು ಬೇಡಿ ದೃಢದೊಳಗೆ ॥ ॥ ೧ ॥

ಅಗಸ್ತ್ಯಮುನಿ ಚರಿತೆಯನು ಯಕ್ಷಗಾನದಲಿ ।
ಜಗ ಮೆಚ್ಚುವಾ ತೆರದಿ ಬರೆವೆನಿಂದಿನಲಿ ॥ ॥ ೨ ॥

ಅರಿತವನು ನಾನಲ್ಲ ತಪ್ಪುಗಳ ತಿದ್ದಿ ।
ಧರೆಯೊಳಗೆ ಮೆರೆಸುವುದು ಪ್ರಾಜ್ಞರಿದನೋದಿ ॥ ॥ ೩ ॥ [೯]

ರಾಗ : ಶ್ರೀ, ತ್ರಿವುಡೆತಾಳ

ಇತ್ತಲಾ ಬ್ರಹ್ಮಾಂಡ ಕೇಂದ್ರದ ।
ಸುತ್ತ ಮೆರೆಯುವ ಮೇರುಗಿರಿಗಾ
ಮಿತ್ರದೇವನು ಸುತ್ತು ಬರುತಿರೆ । ನಿತ್ಯದಂತೆ ॥ ॥ ೧ ॥

ರಾತ್ರಿ ಹಗಲುಗಳಾಗೆ ಕರ್ತನು ।
ಧಾತ್ರಿಯೊಳಗಿನ ಶಕ್ತಿಯುದಯಕೆ ।
ಸೂತ್ರಧಾರಿಯು ಕಶ್ಯಪನ ಸುತ । ನಾತ ಧನ್ಯ ॥ ॥ ೨ ॥

ಒಂದು ದಿನದೊಳು ತನ್ನ ಬೇಸರ ।
ಚಂದದಿಂದಲೆ ನೀಗಲೆನ್ನುತ ।
ಬಂದನಾ ಕ್ಷಣ ಮಿತ್ರ ವರುಣನ । ನಂದು ನೆನೆಸಿ ॥ ॥ ೩ ॥

ಕ್ಷೀರಸಾಗರ ತಡಿಗೆ ಬರೆ ಗಂ ।
ಭೀರ ನಾದದಿ ಮೊರೆವ ಶರಧಿಯ ।
ತೀರದೊಳು ಮೆರೆಯುತಿರೆ ವರುಣನು । ಭೂರಿ ಮುದದಿ ॥ ೪ ॥ [೧೩]

ರಾಗ : ಕೇದಾರಗೌಳ, ಅಷ್ಟತಾಳ

ಪ್ರಾಣಸ್ನೇಹಿತನನ್ನು । ಕಾಣುತ ವರುಣ ನಿ ।
ಧಾನಿಸದಂದಿನೊಳು ॥
ಭಾನುವ ಪಿಡಿದಪ್ಪಿ । ಪೇಳಿದ ಮಿತ್ರನೆ ।
ಯೇನಿದು ಸೋಜಿಗವು ॥ ॥ ೧ ॥

ಭಾನುವೆ ನೀ ತೇಜೋ । ಹೀನಗೊಂಡಿಹೆಯೇಕೆ ।
ಆನನ ಕಂದಿಪ್ಪುದು ॥

ಮ್ಲಾನಗೊಂಡಿಹುದೇಕೆ । ಯೇನಿದು ಕಾರಣ ।
ನಾನದ ತಿಳಿಯುವೆನು ॥ ॥ ೨ ॥ [೧೫]

ರಾಗ : ಸುರುಟಿ, ಏಕತಾಳ

ಲಾಲಿಪುದೆನ್ನ ಸಖ । ವಾರಿಧಿ । ಪಾಲಕ ಪ್ರಖ್ಯಾತ ॥
ಆಲಸ ಕಳೆಯಲು । ಬಂದೆನು ನಿಜವಿದು ।
ಲೀಲೆಯೊಳಿಲ್ಲಿಯೆ । ವಿಹರಿಸಲೆನ್ನುತ ॥ ॥ ೧ ॥

ಎಂದ ಮಾತ ಕೇಳಿ । ವರುಣನು । ಅಂದತಿ ಮುದತಾಳಿ ॥
ಹೊಂದಿದ ಬೇಸರ । ಚಂದದಿ ನೀಗುವ ।
ಇಂದೀ ಸಾಗರ । ತೀರದಿ ವಿಹರಿಸಿ ॥ ॥ ೨ ॥ [೧೭]

ರಾಗ : ಬೇಗಡೆ, ರೂಪಕತಾಳ

ಗೆಳೆಯರಂದು ಬಂದರಾಗಲೆ । ವಾರಿಧಿಯ ತೀರ ।
ಕಳೆಯೆ ದುಗುಡ ಚಂದದಿಂದಲೆ ॥
ನಲವಿನಿಂದ ಕರವ ಪಿಡಿದು ।
ಜಲಧಿಯೊಳಗೆ ಮಿಂದು ನಲಿಯೆ ।
ಇಳೆಯು ಬೆರಗುಪಡಲು ಕಂಡು ।
ಭಲರೆ ಮಿತ್ರರಹುದು ಧನ್ಯ ॥ ॥ ೧ ॥

ಮಿತ್ರನೊಡನೆ ಬಂದ ವರುಣಗೆ । ವಿಧಿನಿಯಮದಂತೆ ।
ಹತ್ತಿತಂದು ಮದವು ಪೊಸಬಗೆ ॥
ವರ್ತಮಾನದೊಳಗೆ ಯೆನ್ನ ।
ಶಕ್ತಿಶೌರ್ಯಗಳಿಗೆ ಎಣೆಯೆ ।
ಮಿತ್ರನೊಡನೆ ಪೇಳ್ವೆನೆನುತ ।
ಹತ್ತಿರಕೆ ಕರೆದು ನುಡಿದ ॥ ॥ ೨ ॥

ತರಣಿ ಪೇಳ್ವೆ ನಿಜವ ನಿನ್ನಲೆ । ನಮ್ಮಿಬ್ಬರೊಳಗೆ ।
ವರುಣ ನಾನೆ ಶ್ರೇಷ್ಠನಲ್ಲವೆ ॥
ಇರದು ಪೃಥ್ವಿಯೆನ್ನ ಹೊರತು ।
ಸುರರು ಉರಗ ಸಸ್ಯಸಹಿತ ।
ಇರುವುದೆಂತು ಎನ್ನ ತ್ಯಜಿಸಿ ।
ಒರೆಯಬೇಕು ಮಿತ್ರ ನೀನು ॥ ॥ ೩ ॥ [೨೦]

ರಾಗ : ಸಾಂಗತ್ಯ, ರೂಪಕತಾಳ

ವರುಣನು ನುಡಿದಾಗ । ಗಹಗಹಿಸುತ ನಕ್ಕು ।
ಮರುಳಾದೆಯೇಕಿಂತು ನೀನು ॥
ಪರಬ್ರಹ್ಮತತ್ತ್ವವ । ನರಿಯೆಯ ನಿಜವಿದು ।
ಪರಮಾತ್ಮನವನೆ ಜೀವಾಳ ॥ ॥ ೧ ॥ [೨೧]

ರಾಗ : ಕೇದಾರಗೌಳ, ಅಷ್ಟತಾಳ

ಮಿತ್ರ ನಿನ್ನಯ ಮಾತು । ಸತ್ಯವಲ್ಲವು ಪೂರ್ಣ ।
ವ್ಯಕ್ತವಲ್ಲದ ಶಕ್ತಿಯೀಗ ॥
ಇತ್ತರೆ ಮಾನ್ಯತೆ । ಒಪ್ಪರು ಪ್ರಾಜ್ಞರು ।
ಸತ್ತ್ವವ ಕೊಂಡಾಡಬಹುದು ॥ ॥ ೧ ॥ [೨೨]

ರಾಗ : ಸಾಂಗತ್ಯ, ರೂಪಕತಾಳ

ತನ್ನತನವದೆಷ್ಟು । ಯೆನ್ನುವ ಹದನವ ।
ನಿರ್ಣಯಿಸದೆ ಪ್ರಾಜ್ಞರಂತೆ ॥
ಅನ್ಯಥ ನುಡಿಗಳ । ನುಡಿದರೆ ನಾನೊಪ್ಪೆ ।
ಯೆನ್ನುವ ಮಿತ್ರನ ಕಂಡು ॥ ॥ ೧ ॥ [೨೩]

ರಾಗ : ಕೇದಾರಗೌಳ, ಅಷ್ಟತಾಳ

ನಾಡಿಗಾದರೆನ್ನ । ವಾದವನೊಪ್ಪರು ।
ಹೇಡಿ ನೀನಾಗಿರಲು ॥
ರೂಢಿಯೊಳಗೆ ಯೆನ್ನ । ಗೌರವ ಘನತೆಯ ।
ನೋಡದಾದೆಯ ಎಂದನು ॥ ॥ ೧ ॥ [೨೪]

ರಾಗ : ಸಾಂಗತ್ಯ, ರೂಪಕತಾಳ

ವಾದಿಸ ಹೊರಟರೆ । ಬೆಳಕೊಂದೆ ಶಕ್ತಿಯ ।
ಆಧಾರವಿರಲು ನಿನ್ನಂತೆ ॥
ಬೋಧಿಸ ಹೊರಟಿಲ್ಲ । ಮದದೊಳು ಕೊಡದಿರು ।
ಕ್ರೋಧಕ್ಕೆ ಮನವೆನ್ನ ಮಿತ್ರ ॥ ॥ ೧ ॥ [೨೫]

ರಾಗ : ಭೈರವಿ, ಏಕತಾಳ

ತರಣಿಯ ನುಡಿಯನೆ ಕೇಳಿ । ಆ ।
ವರುಣನು ಕ್ರೋಧವ ತಾಳಿ ॥
ಸರಿಸಮನಾದೆಯ ನನಗೆ । ನೀ ।
ಬರಿದೇ ಗಳುಹಿದೆ ಹೇಗೆ ॥ ॥ ೧ ॥

ಶ್ರೀವನಿತೆಯು ಸುತೆ ತನಗೆ । ರ ।
ಮಾವರ ಅಳಿಯನು ಮ್ಯಾಗೆ ॥
ನಾವಾ ದಿಕ್ಪಾಲಕರು । ಈ ।
ಭಾವವ ತಿಳಿಯದೆ ಪೊಗರು ॥ ॥ ೨ ॥

ಸರಿಸಮನಾಗುವೆಯೆಂತು । ನಿಜ ।
ವರಿತುಕೊ ಮುಂದಿನ್ನೆಂತೂ ॥
ಶರಧಿಪನನು ಕೆಣಕದಿರು । ಈ ।
ಸುರರೊಳಗಾರೆನಗಿದಿರು ॥ ॥ ೩ ॥ [೨೮]

ರಾಗ : ಮಾರವಿ, ಏಕತಾಳ

ದುರಹಂಕಾರದ । ನುಡಿಯನು ಕೇಳುತ ।
ಕೆರಳುತಲಾ ಮಿತ್ರ ॥
ಸರಿಸಮನೊಳು ಗೆಳೆ । ತನ ಮಾಡದೆ ನಾ ।
ನುರೆ ಕೆಟ್ಟೆನು ಯೆನುತ ॥ ॥ ೧ ॥

ತರಣಿಯ ಜ್ವಾಲೆಗೆ । ವರುಣನು ಎದುರೆ ।
ಪರತತ್ತ್ವವ ನೋಡು ॥
ವರ ನವಗ್ರಹಗಳೊಳ್ । ಪರತರ ನಾನಿರೆ ।
ಅರಿಯದೆ ಕೆಣಕಿದೆಯ ॥ ॥ ೨ ॥

ಎನ್ನೆಯ ಸುತನಿಂ । ನಿನ್ನಯ ಗರ್ವವ ।
ನಿರ್ಣಯ ಇಳಿಸುವೆನು ॥
ಎನ್ನುತ ನುಡಿದಾ । ಮಿತ್ರನು ಕ್ರೋಧದಿ ।
ಬೆನ್ನನು ತಿರುಗಿಸಿದ ॥ ॥ ೩ ॥ [೩೧]

ಕಂದ

ಬಂದಾ ಮಿತ್ರನು ಬೇಗುದಿ ।
ಯಿಂ ಬಸವಳಿದಿರಲು ಜಲಧಿ ತೀರದೊಳಾಗಂ ॥

ಕುಂದಿದ ವದನದಿ ವರುಣಂ ।
ಮುಂದೇನು ಗತಿಯೆನುತ ಚಿಂತಿಸಲಿತ್ತಲ್ ॥ ॥ ೧ ॥ [೩೨]

ರಾಗ : ಸೌರಾಷ್ಟ್ರ, ತ್ರಿವುಡೆತಾಳ

ಬಂದಳೂರ್ವಶಿ ದೇವಗಣಿಕೆಯು ।
ಮಂದಹಾಸವ ಬೀರುತಲಿ ಮುದ ।
ದಿಂದ ಸಖಿಯರ ಕೂಡಿಕೊಂಡಾ । ಚಂದ್ರಮುಖಿಯು ॥ ॥ ೧ ॥

ಕ್ಷೀರಸಾಗರತಟದಿ ವಿಹರಿಸೆ ।
ವಾರಿಜಾಂಬಕಿ ಬರುವ ಸೊಬಗನು ॥
ದೂರದಿಂದಲೆ ಕಂಡ ಮಿತ್ರನು । ಮಾರಶರಕೆ ॥ ॥ ೨ ॥

ತೆತ್ತನಾಗಲೆ ತನ್ನ ಮನವನು ।
ವೃತ್ತಕುಚೆ ಯಾರೆನುತ ಚಿಂತಿಸೆ ।
ಮತ್ತೆ ನಿಶ್ಚಯಿಸಿದನು ಊರ್ವಶಿ । ಯಿತ್ತ ಬಹಳು ॥ ॥ ೩ ॥ [೩೩]

ಭಾಮಿನಿ

ದೇವಗಣಿಕೆಯು ತನ್ನ ಮೋಹಕ ।
ಹಾವ ಭಾವದಿ ಮನವ ಸೆಳೆದಿರೆ ।
ಭಾವಜನ ಶರಕೆನ್ನ ಮನ ಸಂಪೂರ್ಣ ಸೋತಿರಲು ॥
ಭಾವಜಾಂಬಕಿಯೊಡನೆ ಮೋಹದ ।
ಭಾವ ಪ್ರಕಟಿಸಿ ಸುಖಿಪೆನೆನುತ ಪ್ರ ।
ಭಾವಲಯ ಬೀರುತ್ತ ಭಾಸ್ಕರನಂದು ಕಾಮಿನಿಯ ॥ ॥ ೧ ॥ [೩೪]

ರಾಗ : ಕೇದಾರಗೌಳ, ಅಷ್ಟತಾಳ

ತರಣಿ ಸಂಭ್ರಮದಿಂದ । ತರುಣಿಯೆಡೆಗೆ ಬರು ।
ತಿರೆ ಕಂಡು ಬೆರಗಿನಲಿ ॥
ಸರಸಿಜಾಂಬಕಿ ನಾಚು । ತೆರಗಿ ಮಿತ್ರಗೆ ನುಡಿ ।
ದರೆ ಬಲು ವಿನಯದಲಿ ॥ ॥ ೧ ॥

ಏನಿದು ಸೋಜಿಗ । ಭಾನುವೆ ನೀನಿಂದು ।
ಪೂರ್ಣಪ್ರಕಾಶದಿಂದ ॥
ಕಾಣಿಸಿಕೊಂಡಿಹೆ । ಯೆನ್ನಯ ಸನಿಹದಿ ।
ನಾನಿಂದು ಧನ್ಯಳೆಂದು ॥ ॥ ೨ ॥

ಸುರಗಣಿಕೆಯ ನುಡಿ । ಹರುಷದಿ ಕೇಳುತ್ತ ।
ತರಣಿ ಸಂಭ್ರಮದಿಂದಲಿ ॥
ಸರಸಿಜಾಂಬಕಿಯೆಡೆ । ಕಿರುನಗೆ ಬೀರುತ್ತ ।
ಲೊರೆದನು ಪ್ರೇಮದಲಿ ॥ ॥ ೩ ॥ [೩೯]

ರಾಗ : ಸುರುಟಿ, ಏಕತಾಳ

ಬಿಂಬಾಧರೆ ಕೇಳೆ । ಕೋಮಲೆ ।
ದುಂಬಿಗುರುಳೆ ಬಾಲೆ ॥
ತುಂಬಿದ ಯೌವನ । ದಿಂದಲೆ ಬೀಗುವ ।
ಕಂಬುಕಂಠಿ ನಾ । ನೆಂಬುವ ನುಡಿಗಳ ॥ ॥ ೧ ॥

ವಾರಿಜಮುಖಿ ನೀನು । ಕಂಡರೆ ।
ಮಾರನ ಸತಿಯನ್ನು ॥
ಮೀರುವ ರೂಪಸಿ । ಸೋತೆನು ಈ ಕ್ಷಣ ।
ಮಾರನ ಕೇಳಿಗೆ । ಒದಗುವುದೆನ್ನೊಡ ॥ ॥ ೨ ॥

ತರಣಿಯ ನುಡಿ ಕೇಳಿ । ನಾಚುತ ।
ತರುಣಿಯು ಬೆಡಗಿನಲಿ ॥
ಸ್ಮರಸನ್ನಿಭನಿಗೆ । ಒರೆದಳು ಸಮಯದ ।
ಪರಿವೆಯನರಿಯದೆ । ಕರೆಯುವುದುಚಿತವೆ ॥ ॥ ೩ ॥

ಹಗಲಿನ ವೇಳೆಯಿದು । ಕೂಡುವ ।
ಬಗೆಯದು ಮುದ ತರದು ॥
ಮಿಗೆ ಯಾರಾದರು । ಕಂಡರೆ ನಾಚಿಕೆ ।
ಹಗರಣವಪ್ಪುದು । ರಾತ್ರಿಯೊಳೊದಗುವೆ ॥ ॥ ೪ ॥ [೪೩]

ಭಾಮಿನಿ

ತರುಣಿಯಿಂತೆನೆ ಮಿತ್ರ ತನ್ನಲಿ ।
ತರಹರಿಸಿ ಬಳಿಕೆಂದನೂರ್ವಶಿ ।
ಬರುವೆ ರಾತ್ರಿಯ ವೇಳೆ ನಿನ್ನೊಡ ಕೂಡಬೇಕೆಂದೆ ॥
ಸುರಗಣಿಕೆ ನಿಯಮಾವಳಿಯನನು ।
ಸರಿಸುತಿಂದಿಗೆ ನಿನ್ನ ಪಡೆದೆನು ।
ಅರಿತುಕೋ ಎಂದೆನುತ ತೆರಳಿದ ಮಿತ್ರ ದುಗುಡದಲಿ ॥ ೧ ॥ [೪೪]

ರಾಗ : ಕೇದಾರಗೌಳ, ಅಷ್ಟತಾಳ

ಒಲ್ಲದ ಮನಸಿಂದ । ಮೆಲ್ಲನೆ ತೆರಳಲು ।
ಫುಲ್ಲನೇತ್ರೆಯ ನೆನೆದು ॥
ತಲ್ಲಣಗೊಂಡಿಹ । ಮಿತ್ರನು ಬಳಿಕಿತ್ತ । ॥ ೧ ॥
ಎಲ್ಲರಿಂದಧಿಕನೆಂದ ॥

ವರುಣದೇವನು ತಾನು । ತಿರುಗುತ್ತ ಬಂದನು ।
ಶರಧಿಯ ತೀರದೆಡೆ ॥
ಪರಿಕಿಸುತೂರ್ವಶಿ । ನಿಂತಿಹ ಸೊಬಗನು । ॥ ೨ ॥
ಬೆರಗಾಗಿ ವಿಧಿವಶದಿ ॥

ಚಂದ್ರಮುಖಿಯು ಸುಮ । ಗಂಧಿನಿ ಯಾರೀಕೆ ।
ನಿಂದಿಹ ಪರಿ ಸೊಬಗು ॥
ಕಂದರ್ಪಶರದಿಂದ । ಬೆಂದಿಹ ಮನಕೆನ್ನ । ॥ ೩ ॥ [೪೭]
ತಂದಳು ರಸಗವಳ ॥

ಭಾಮಿನಿ

ವರುಣದೇವನು ಬಳಿಕ ಚಿಂತಿಸು ।
ತರಿತನೂರ್ವಶಿಯಾಕೆಯಹುದೈ ।
ಸುರಗಣಿಕೆಯೆಂದಿರಲು ಕೂಡಲಿಕಡ್ಡಿಯೇನಿಹುದು ॥
ವರಮನೋರಥ ಸಿದ್ಧಿಸಲಿ ಈ ।
ತರುಣಿಮಣಿಯನು ಮಾತನಾಡಿಪೆ ।
ಹರುಷದಿಂದೊಳಗೆನುತ ಗಣಿಕಾಂಗನೆಯ ನುಡಿಸಿದನು ॥ ೧ ॥ [೪೮]

ರಾಗ : ಶಂಕರಾಭರಣ, ಆದಿತಾಳ

ಸಾರಸಾಕ್ಷಿ ಬಂದೆಯೇನೆ । ಕ್ಷೀರಶರಧಿಯೆಡೆಗೆ ಸನಿಹ ।
ಯಾರ ಕಾಣೆ ಹರುಷವಾಯ್ತು । ಮಾರನರಗಿಣಿ ॥ ॥ ೧ ॥

ವರುಣದೇವನಾಗಿ ನೀನು । ಮರುಳನಂತೆ ನುಡಿವುದೇನು ।
ಬರದಿರೆನ್ನ ಸನಿಹ ದೂರ । ತೆರಳಲೊಳ್ಳಿತು ॥ ॥ ೨ ॥

ಒಲ್ಲೆನೆಂದು ನುಡಿಯಬೇಡ । ಬಲ್ಲೆ ನೀನು ದೇವಗಣಿಕೆ ।
ಯಲ್ಲವೇನೆ ಯಾರು ಬರರು । ಫುಲ್ಲಲೋಚನೆ ॥ ॥ ೩ ॥

ಏರು ಪೇರು ಸಹಜ ನಿನಗೆ । ಯಾರನೊಲ್ಲೆ ತೆರಳು ಬರಿದೆ ॥
ಮಾರನಾಟಕೊದಗೆನೆಂದ । ನಾರಿಮಣಿಯೊಳು ॥ ॥ ೪ ॥

ಏಣನಯನೆ ಪೇಳು ಪಂಚ । ಬಾಣನಾಟಕೊದಗೆಯೇಕೆ ।
ನಾನು ತಿಳಿದುಕೊಂಬೆ ಹದನ । ವೇನು ಕಾರಣ ॥ ॥ ೫ ॥ [೫೩]

ವಾರ್ಧಕ

ಮಕರವಾಹನ ನಿನಗೆ ಸುಖ ಕೊಡುವ ಬಗೆಯೆಂತು ।
ಅಕಳಂಕ ಭಾನುವಿನ ವಶವರ್ತಿಯೀ ದಿನಕೆ ।
ಯುಕುತವಲ್ಲಿದು ನಮ್ಮ ನಿಯಮಾವಳಿಗಳಂತೆ ಮಿತ್ರನನು ಹೊರತನ್ಯರಾ ॥
ಸುಖಿಸಲಾರೆನು ಕ್ಷಮಿಸಿ ತೆರಳೆಂದು ನುಡಿದರಾ ।
ಶುಕವಾಣಿಯಾ ನುಡಿಗೆ ಭ್ರಮಿತ ವರುಣನು ಕೆರಳಿ
ಅಕಟಕಟ ಸುರವೇಶ್ಯೆಗಿನಿತು ಗರ್ವವೆಯೆಂದು ಗರ್ಜಿಸುತ ನುಡಿದನಾಗ ॥ ೧ ॥

ರಾಗ : ಸೌರಾಷ್ಟ್ರ, ತ್ರಿವುಡೆತಾಳ

ಏನನೆಂದೆಯೆ ಸುರಗಣಿಕೆಯೇ ।
ಸ್ಥಾನ ಮಾನವದೆನ್ನ ಕಾಣದೆ ।
ನೀನು ಕೆಣಕಿದೆಯೀಗ ಬಿಡುವೆನೆ । ಕ್ಷೋಣಿಯೊಳಗೆ ॥ ॥ ೧ ॥

ಮಿತ್ರನಾದರೆ ಹೆಚ್ಚಿನವ ಬಲು ।
ಕುತ್ಸಿತದಿ ನೀ ಕಂಡೆಯೆನ್ನನು ।
ಪಿತ್ಥ ನೆತ್ತಿಗೆಯೇರಿದಾ ಬಗೆ । ಸತ್ಯವಾಯ್ತು ॥ ॥ ೨ ॥

ಕ್ಷೋಣಿಯೆಡೆಗೈದುತ್ತ ಕಾಲದಿ ।
ಮಾನವನ ಕರವಿಡಿದು ಬಾಳೆನೆ ।
ಆ ನಿತಂಬಿನಿ ಶಾಪವಾಕ್ಯವ । ತಾನು ಕೇಳ್ದು ॥ ॥ ೩ ॥ [೫೭]

ಭಾಮಿನಿ

ಎನ್ನ ತಪ್ಪೇನಿಲ್ಲ ಬರ್ದಿಲ ।
ಕನ್ನೆ ನಾನಿರೆ ನಮ್ಮ ನಿಯಮವ ।
ನಿನ್ನ ಮೀರುವುದೆಂತು ಕರುಣಾರ್ಣವನೆ ಪೇಳೆನಲು ॥
ಬನ್ನ ಕೊಟ್ಟೆಯ ನೀನು ಬುವಿಯೊಳು ।
ನನ್ನ ಬಾಳ್ವೆಯ ಕರ್ಮಭೂಮಿಯು ।
ತನ್ನತನ ಬಿಟ್ಟೆಂತು ಸೇರುವೆನೆನಲು ತಿಳಿದಾಗ ॥ ॥ ೧ ॥ [೫೮]

ರಾಗ : ನವರೋಜು, ಏಕತಾಳ

ಅಳದಿರು ನೀನೆಲೆ ಬಾಲೆ । ವರ ।
ಇಳೆಯೊಳು ನೀ ಬಾಳುತಲೆ ॥
ಕೆಲಕಾಲವ ಕಳೆ । ಇಳೆಯಧಿಪನ ನೀ ।
ನೊಲಿಸುವೆ ಮುಂದಕೆ । ಸುರನಾಗುವನವ ॥ ॥ ೧ ॥

ಮತ್ತಿಲ್ಲಿ ನೀ ಬರುವೆ । ಈ ।
ಉತ್ತಮಲೋಕವ ಪಡೆವೆ ॥
ಚಿತ್ತದ ಶೋಕವ । ವಿಸ್ತರಿಸದೆಯಿರು ।
ಮತ್ತಕಾಶಿನಿಯೆ । ಅತ್ತಲು ನಡೆಯೆನೆ ॥ ॥ ೨ ॥

ತೆರಳಿದಳು ದುಗುಡದಲಿ । ವರ ।
ತರಣಿಯನೆ ನೆನೆಯುತಲಿ ॥
ವರುಣನು ತಾನುದ್ರೇಕದಿ ಕಂಪಿಸೆ ।
ವರವೀರ್ಯವು ತಾ । ಸುರಿಯಲು ತ್ವರಿತದಿ ॥ ॥ ೩ ॥ [೬೧]

ಭಾಮಿನಿ

ಕುಂಭಿನಿಗೆ ವರವೀರ್ಯ ಚೆಲ್ಲದೆ ।
ಅಂಬುನಿಧಿಪನು ಕಂಡನಲ್ಲಿಹ ।
ಕುಂಭದೊಳಗಿರಿಸುತ್ತ ತೆರಳಿದ ಬಳಿಕಲಾ ಮಿತ್ರ ॥
ಸಂಭ್ರಮದೊಳೂರ್ವಶಿಯ ತಾ ಮನ ।
ದುಂಬಿ ನೆನೆಯುತ ಬರಲು ವೀರ್ಯವು ।
ತುಂಬಿ ಸ್ಖಲಿಸಲು ಕುಂಭದೊಳಗದನಿರಿಸಿ ತೆರಳಲ್ಕೆ ॥ ॥ ೧ ॥ [೬೨]

ರಾಗ : ಕಾಂಬೋಧಿ, ಝಂಪೆತಾಳ

ಮಿತ್ರವರುಣರ ವೀರ್ಯ । ವುತ್ತಮದ ಫಲವೀಯೆ ।
ಮತ್ತೇನ ನುಡಿವೆನಾಕ್ಷಣದಿ ।
ಅತ್ಯುತ್ತಮದ ರೂಪ । ಚಿತ್ತಹರವಾಗಿರಲು ।
ಶಕ್ತಿಶಾಲಿಗಳೀರ್ವರುದಿಸೆ ॥ ॥ ೧ ॥

ಪರಮ ಬ್ರಹ್ಮರ್ಷಿಗಳು । ವರ ಶಾಸ್ತ್ರಕೋವಿದರು ।
ಸಾರ್ವಾಂಗಶೋಭಿತರು ಬರಲು ॥
ಸುರರು ಸುಮವೃಷ್ಟಿಯನೆ । ಸುರಿಸೆ ಸಂಭ್ರಮದಿಂದ ।
ಧರಣಿದೇವಿಯು ತಾನೆ ನಗಲು ॥ ॥ ೨ ॥

ವರುಣ ವೀರ್ಯದಿ ಬಂದ । ಗುರುವಸಿಷ್ಠನು ಬಳಿಕ ।
ತರಣಿ ರೇತಸ್ಸಿನಿಂದಾದ ॥
ಕಿರು ದೇಹದವನನ್ನೆ । ಕರೆಯೆ ಕುಂಭಜನೆಂದು ।
ಧರೆಯ ಮುನಿವೃಂದ ಸನ್ಮತದಿ ॥ ॥ ೩ ॥

ಬ್ರಹ್ಮನ ಸಮಾನರಾ । ದೆಮ್ಮೊಳಗೆ ಉದ್ಯೋಗ ।
ಸನ್ಮತದಿ ಕೈಗೊಂಬೆವೆನುತಾ ॥
ಹಮ್ಮಿಕೊಳಲಿಕ್ಷ್ವಾಕು । ಧರ್ಮವಂಶದ ನೃಪರು ।
ತಮ್ಮ ಗುರುವೆನೆ ವಸಿಷ್ಠನನು ॥ ॥ ೪ ॥

ಕೆರಳಿದನು ವರ ತರಣಿ । ತರಳನಾಕ್ಷಣ ನಮ್ಮ ।
ವರುಣನಾ ಕುವರ ಗುರುವಾದ ॥
ಪರಮ ಇಕ್ಷ್ವಾಕು ಕುಲ । ಮರೆತುದೆನ್ನನು ಭಲರೆ ।
ಇರಲಿ ನೋಳ್ಪೆನು ತನ್ನ ಬಗೆಗೆ ॥ ॥ ೫ ॥

ಉತ್ತರಾಪಥವೆಲ್ಲ । ವ್ಯರ್ಥವಾಯಿತು ತನ್ನ ।
ಶಕ್ತಿ ಶೌರ್ಯಗಳ ಕಾಣಿಸಲು ॥
ಉತ್ತಮದ ದಕ್ಷಿಣಾ । ವರ್ತಕೈದುವೆನೆಂದು ।
ಅತ್ಯುಗ್ರದಿಂದ ಬರುತ್ತಿದ್ದ ॥ ॥ ೬ ॥ [೬೮]

ವಾರ್ಧಕ

ರಾಜನಾಶ್ರಯ ಬೇಡವೀ ಜಗದಿ ಸರಿಯಾದ ।
ರಾಜೀವಮುಖಿಯನ್ನೆ ವರಿಸುತ್ತ ಮುದದೊಳು ವಿ ।
ರಾಜಿಸುವೆ ವಿಂಧ್ಯಾದ್ರಿ ಶಿಖರದಾಚೆಯೆ ತನ್ನ ಆಶ್ರಮವ ರಚಿಸಲೆಂದೆ ।
ರಾಜೀವಸಖಜಾತನಂದು ಪೊರಡಲು ಕಂಡು ।
ಸೋಜಿಗದಿ ಮುನಿವ್ರಾತ ಕೂಡಿಕೊಳೆ ಬರುತಿದ್ದ ।
ತೇಜಸ್ವಿ ಕುಂಭಸಂಭವನು ಸಂಭ್ರಮದಿಂದ ವಿಂಧ್ಯನನು ದಾಟಲೆನುತ ॥ ೧ ॥ [೬೯]

ರಾಗ : ಸೌರಾಷ್ಟ್ರ, ತ್ರಿವುಡೆತಾಳ

ಪೃಥ್ವಿಧರ ವಿಂಧ್ಯೇಶನೋಲಗ ।
ಬಿತ್ತರಿಸಲೇನಧಿಕ ಸಂಭ್ರಮ ।
ನಿತ್ಯಸುಖಿ ತಾನಿದ್ದನಂದಿಲಿ । ಸ್ವಸ್ಥದಿಂದ ॥ ॥ ೧ ॥

ಭರತಖಂಡದ ಮಧ್ಯೆ ಮೆರೆದಿರೆ ।
ಹರಡಿಕೊಂಡಿಹ ಪೂರ್ವ ಪಶ್ಚಿಮ ॥
ಹರಿವ ನದಿಗಳು ತಪತಿ ನರ್ಮದೆ । ಧರೆಯ ಬೆಳಗೆ ॥ ॥ ೨ ॥

ಮೇರುವಿಗೆ ಬದಲಾಗಿ ವಿಂಧ್ಯಗೆ ।
ಆ ರವಿಯು ತಾ ಸುತ್ತು ಬರದಿಹ ।
ಭೂರಿ ಕ್ರೋಧದಿ ನುಡಿದ ವಿಂಧ್ಯನು । ಆರುಭಟಿಸಿ ॥ ॥ ೩ ॥

ಪೃಥ್ವಿಧರ ನಾನಾಗಿ ಮೇರುವ ।
ಸುತ್ತು ಬರುತಿಹ ಭಾನು ಬಿಡುವೆನೆ ।
ಶಕ್ತಿ ಸಾಮರ್ಥ್ಯಗಳ ತೋರಿಪೆ । ಮಿತ್ರನಿಂಗೆ ॥ ॥ ೪ ॥

ದಕ್ಷಿಣಾಯನದಿಂದ ಮಿತ್ರನ ।
ಲಕ್ಷಣದಿ ಉತ್ತರಕೆ ಬರುವರೆ ।
ದಕ್ಷತನದೊಳಗಡ್ಡಗಟ್ಟುತ । ಶಿಕ್ಷಿಸುವೆನು ॥ ॥ ೫ ॥

ಮೇರುಗತಿಯನೆ ಮೀರಿ ಬೆಳೆದನು ।
ದಾರಿಗಡ್ಡೈಸುತ್ತ ಭಾನುವ ।
ಭಾರಿ ಗಾತ್ರದ ವಿಂಧ್ಯ ಬಲುಗಂ । ಭೀರದಿಂದ ॥ ॥ ೬ ॥ [೭೫]

ಭಾಮಿನಿ

ನಾರದನು ತಾನರಿತನಂದಿಲಿ ।
ಮೀರಿ ವಿಂಧ್ಯನು ಬೆಳೆದು ಮಿತ್ರನ ।
ದಾರಿಗಡ್ಡೈಸುತಿರೆ ಬರ್ದಿಲರೆಲ್ಲ ಮೊರೆಯಿಡಲು ॥
ಯಾರಿಹರು ಪಾತಕಿಯ ಭಂಗಿಸಿ ।
ದಾರಿತೋರುವ ಮಹಿಮರೆನೆ ನಿಜ ।
ತೋರಿತಂದಾ ಕುಂಭಸಂಭವಜನನ ದೃಶ್ಯವದು ॥ ॥ ೧ ॥ [೭೬]

ರಾಗ : ಕೇದಾರಗೌಳ, ಅಷ್ಟತಾಳ

ವಿಂಧ್ಯನ ಗರ್ವವ ನಿಂದು ಭಂಗಿಸೆ ರವಿ ।
ನಂದನ ತಕ್ಕವನು ॥
ಎಂದು ನಿಶ್ಚಯಿಸುತ । ಲಂದು ನಾರದ ತಾನು ।
ಬಂದರೆ ಮುನಿವರ್ಯನು ॥ ॥ ೧ ॥

ಹರಿನಾಮ ಸ್ಮರಿಸುತ್ತ ಬರೆ ನಾರದನ ಕಂಡು ।
ಪರಮಸಂತಸದಿಂದಲಿ ॥
ಕರೆತಂದು ದರ್ಭಾಸನವನಿತ್ತು ಮನ್ನಿಸು ।
ತೊರೆದನು ವಿನಯದಲಿ ॥ ॥ ೨ ॥ [೭೮]

ರಾಗ : ಸುರುಟಿ, ಏಕತಾಳ

ನಾರದ ಮುನಿಪತಿಯೆ । ವಿದ್ಯಾ ।
ವಾರಿಧಿ ಗುಣನಿಧಿಯೆ ॥
ಸಾರಸಭವಸುತ । ಶ್ರೀರಮಣಾರ್ಚಕ ।
ಯಾರೆಣೆ ನಿನಗೀ । ಧಾರುಣಿಯೊಳಗೆನೆ ॥ ॥ ೧ ॥

ಏನು ಬಂದೆ ಮುನಿಪ । ಬ್ರಹ್ಮನ ।
ಮಾನಸಸಂಜಾತ ॥
ಕ್ಷೋಣಿಯೊಳೆನ್ನಯ । ಸ್ಥಾನವನರಸುತ ।
ನಾನ್ಯೆದಲು ನೀ । ಕಾಣಿಸಿಕೊಂಡೆಯ ॥ ॥ ೨ ॥ [೮೦]

ರಾಗ : ಬೇಗಡೆ, ರೂಪಕತಾಳ

ಕುಂಭಸಂಭವ ಪರಮ ಬ್ರಹ್ಮರ್ಷಿ । ತ್ರೈಭುವನ ಪೂಜಿತ ।
ಅಂಬುಜಾಸಖಜಾತ ಧನ್ಯೋಸಿ ॥
ಕುಂಭಿನಿಯು ತಾ ನಡುಗೆ ಮೇಲಾ ।
ಅಂಬರದಿ ಸುರರೆಲ್ಲ ಬೆದರಲು ।
ನಂಬಿಕೆಯನಿರಿಸುತ್ತ ನಿನ್ನೆಡೆ ।
ಸಂಭ್ರಮದಿ ನಾ ಬಂದೆನಿಂದಿಲಿ ॥ ॥ ೧ ॥

ಪೃಥ್ವಿಧರ ವಿಂಧ್ಯೇಶ ಬಲುಧೂರ್ತ । ವರ ಮೇರುಗಿರಿಗಾ ।
ಮಿತ್ರದೇವನು ನಿತ್ಯ ಸುತ್ತುತ್ತಾ ॥
ವ್ಯರ್ಥ ಮರೆತನು ತನ್ನನೆನ್ನುತ ।
ಎತ್ತರಕೆ ತಾ ಬೆಳೆದು ನಿಂದಿರೆ ।
ಉತ್ತರಾಯಣಕೆಂದು ಭಾನುವು ।
ಇತ್ತ ಬರುವುದ ಬಿಡದೆ ನಿಂದಿಹ ॥ ॥ ೨ ॥

ನಿನ್ನ ಜನಕನ ಪರಿಯ ತಾ ಕಂಡು । ಸುರರೆಲ್ಲ ಬೆದರುತ ।
ಲೆನ್ನ ಕಳುಹಲು ನಿನ್ನ ಬಳಿಗೆಂದು ॥
ಬನ್ನಗೊಳಿಸುವ ವಿಂಧ್ಯಗಿರಿಯನೆ ।
ಸನ್ಮತದಿ ಶಿಕ್ಷಿಸುತ ನಡೆಯ್ಯೆ ।
ಪುಣ್ಯ ದಕ್ಷಿಣ ದಿಕ್ಕಿನೆಡೆ ನೀ ।
ನಿನ್ನು ಮೆರೆಯುವೆ ಈಶನಿಗೆ ಸಮ ॥ ॥ ೩ ॥ [೮೩]

ಭಾಮಿನಿ

ಸರಸಿಜಾಸನನೆನ್ನ ಕಳುಹಿದ ।
ದುರುಳ ವಿಂಧ್ಯನ ಗರ್ವವಿಳುಹಲು ।
ತರಣಿಸಂಭವ ಹೊರತು ಬೇರಿನ್ನಾರು ಯಿಲ್ಲೆಂದು ॥
ವರಮುನಿಪ ತಾನಂದು ನುಡಿದರೆ ।
ಧರೆಯೊಳಗೆ ಮಮ ಶಕ್ತಿ ತೋರಿಸೆ ।
ಸರಿಸಮಯ ಬಂತೆನುತ ಹಿಗ್ಗುತ ಮನದೊಳಗೆ ಮುನಿಪ ॥ ೧ ॥ [೮೪]

ರಾಗ : ಪೂರವಿ, ಏಕತಾಳ

ಬಿಡುಬಿಡು ನಾರದ । ಮುನಿಪನೆ ವಿಂಧ್ಯಗೆ ।
ಅಡರಿತೆ ಕಡು ಗರ್ವ ॥
ಜಡಜಸಖನನೆ । ಬಿಡದಡ್ಡೈಸಿದ ।
ಧಡಿಗನ ಬಿಡಲುಂಟೆ ॥ ॥ ೧ ॥

ವಿಂಧ್ಯೋಲ್ಲಂಘನ । ಚಂದದಿ ಗೈಯುತ ।
ಮುಂದಕೆ ನಾ ನಡೆವೆ ॥
ಬಂದಿಹ ದುಗುಡವ । ನೀಗಿಸಿ ಸುರರಿಗೆ ।
ಹೊಂದಿಪೆ ಸಂತಸವ ॥ ॥ ೨ ॥ [೮೬]

ಕಂದ

ನಾರದ ಮುನಿಪನ ಕಳುಹುತ ।
ಲಾ ರವಿಸೂನುವು ಮುನಿಗಳ ಕೂಡಿಕೊಳುತಲಾ ॥
ಮೇರುಗತಿ ಮೀರುತ ಬೆಳೆದ ।
ಕ್ರೂರಿಯು ವಿಂಧ್ಯೇಶನಂ ವಿಚಾರಿಸಲೆನುತಂ ॥ ॥ ೧ ॥ [೮೭]

ರಾಗ : ಬಿಲಹರಿ, ಅಷ್ಟತಾಳ

ಕಲಶಸಂಭವನನ್ನು ಕಂಡು । ಮುದ ।
ತಳೆದಾಗ ವಿಂಧ್ಯೇಶನಂದು ॥
ಇಳಿದು ಬಂದನು ಮುನಿಯೆಡೆಗೆ । ತನ್ನ ।
ಕುಲವು ಪಾವನವಾದ ಬಗೆಗೆ ॥ ॥ ೧ ॥

ತರಣಿಯಂದದಿ ಪ್ರಜ್ವಲಿಸುವ । ಪುರ ।
ಹರನಂತೆ ತನುಕಾಂತಿ ಮೆರೆವ ॥
ವರಮುನಿಪನಿಗೆರಗುತ್ತ । ಮತ್ತೆ ।
ಕರೆತಂದು ತಾ ಕುಳ್ಳಿರಿಸುತ್ತ ॥ ॥ ೨ ॥

ಬಂದ ಕಾರಣವೇನು ಇನಜ । ಮುದ ।
ದಿಂದ ಕೇಳುವೆನದು ಸಹಜ ॥
ವಿಂಧ್ಯೇಶನೆಡೆ ಬಪ್ಪನಲ್ಲ । ನೀನು ।
ಬಂದ ಪರಿಯು ಚೋದ್ಯವೆಲ್ಲ ॥ ॥ ೩ ॥ [೯೦]

ರಾಗ : ಕೇದಾರಗೌಳ, ಅಷ್ಟತಾಳ

ಪೃಥ್ವಿಧರನೆ ನಿನ್ನ । ಶಕ್ತಿ ಸಾಮರ್ಥ್ಯವ ।
ಪ್ರತ್ಯಕ್ಷ ಕಾಣಲೆಂದೆ ॥
ಅರ್ತಿಯೊಳ್ ಬಂದಿಹೆ । ಅತಿಶಯೋಕ್ತಿಯದಲ್ಲ ।
ಸತ್ಯವೆಲ್ಲವನು ಕಂಡೆ ॥ ॥ ೧ ॥

ಮೇರುಗತಿಯ ಮೀರಿ । ಈ ರೀತಿ ಬೆಳೆಯಲು ।
ಬೇರಾರಿಗಸದಳವು ॥
ತೋರುವ ಈ ರೂಪ ಭೀತಿ ಹುಟ್ಟಿಸಿಸುತಿದೆ ।
ದಾರಿಯ ತೋರುವೆಯ ॥ ॥ ೨ ॥

ದಕ್ಷಿಣಾಪಥದೆಡೆ । ಲಕ್ಷವೆನ್ನದು ಎನ್ನ ।
ಕಕ್ಷೆಯೊಳಗೆ ಬರಲು ॥
ಈಕ್ಷಿಸು ಕಿರುದೇಹ ದಾಟಲಾರೆನು ನಿನ್ನ ।
ಲಕ್ಷಣ ಬಲು ಪಿರಿದು ॥ ॥ ೩ ॥

ನಿನ್ನ ದಕ್ಷಿಣಕಿಹ । ಪುಣ್ಯಸ್ಥಳಗಳನ್ನೆ ।
ಕಣ್ಣಾರೆ ಕಾಣಲೆಂಬ ॥
ಉನ್ನತ ಬಯಕೆಯುಯೆನ್ನ ಕಾಡುತಲಿದೆ ।
ಪುಣ್ಯಾತ್ಮ ಕೇಳೆಂದನು ॥ ॥ ೪ ॥ [೯೪]

ವಾರ್ಧಕ

ಮುನಿವರೇಣ್ಯನ ನುಡಿಗೆ ವಿಂಧ್ಯೇಶ ತಾ ನುಡಿದ ।
ಘನವಾದ ಕಾಯವನು ಕುಗ್ಗಿಸುವೆನೀ ಕ್ಷಣವೆ ।
ಅನುಮಾನಿಸದೆಯೆನ್ನನೇರಿ ನೀ ನಡೆಯೆಂದು ಕಿರಿಯ ಗಾತ್ರದಿ ಮೆರೆಯಲು ॥

ಅನಿಮಿಷರು ಭಾಪೆನಲು ಮುನಿಯು ಸಂಭ್ರಮದಿಂದ ।
ತ್ರಿಣಯನನು ಧ್ಯಾನಿಸುತ ದಾಟಿ ವಿಂಧ್ಯನ ಬಳಿಕ ।
ಅನುಯಾಯಿಗಳು ಸಹಿತ ಬಳಿಕ ಪೃಥ್ವೀಧರಗೆ ಯಿತ್ತನಾಜ್ಞೆಯನುಗ್ರದಿ ॥ ೧ ॥ [೯೫

ರಾಗ : ಸೌರಾಷ್ಟ್ರ, ತ್ರಿವುಡೆತಾಳ

ಪೃಥ್ವಿಧರ ವಿಂಧ್ಯೇಶ ಕೇಳ್ ನಾ ।
ನುತ್ತಮದ ದಕ್ಷಿಣದಿ ಮೆರೆಯುವ ॥
ತೀರ್ಥಸ್ನಾನಗಳನ್ನೆಗೈಯುತ । ಯಿತ್ತ ಬಹೆನು ॥ ॥ ೧ ॥

ಯೆನ್ನ ಮರುಪಯಣವನು ಕಾಯುತ ।
ಸನ್ಮತದಿ ನೀನಿರುವುದಿಂತೆಯೆ ॥
ಎನ್ನುತಾಕ್ಷಣ ಪೊರಟ ಭರದಿಂ । ಮೌನಿತಿಲಕ ॥ ॥ ೨ ॥

ಅಗವ ಸ್ತಂಭನಗೈದ ದೆಸೆಯಿಂ ।
ಜಗದಿ ಕರೆದರಗಸ್ತ್ಯಮುನಿಯೆನೆ ।
ಜಗದೊಡೆಯ ಶಂಕರನ ಧ್ಯಾನಿಸಿ । ಸೊಗಸಿನಿಂದ ॥ ॥ ೩ ॥

ಬಂದ ಗೋದಾವರಿಯ ನದಿ ತಟ ।
ಕೆಂದು ಮುನಿಪತಿ ಬಳಿಕಲಲ್ಲಿಯೆ ।
ಚಂದದೊಳಗಾಶ್ರಮವ ಕಟ್ಟುವೆ । ನೆಂದು ಬಗೆದು ॥ ॥ ೪ ॥ [೯೯]

ಭಾಮಿನಿ

ವರ ತಪೋನಿಧಿಯಂದು ಗೋದಾ ।
ವರಿಯ ಸನಿಹವೆ ತನ್ನ ಆಶ್ರಮ ।
ವಿರುತಿರಲು ಮನಮಾಡೆ ಗಾರ್ಹಸ್ಥ್ಯವನು ಕೈಗೊಳಲು ॥
ತರುಣಿಯನು ಹುಡುಕುತ್ತ ಬರುತಿರ ।
ಲರಿತ ಮೆರೆವ ವಿದರ್ಭದೇಶದಿ ।
ವರ ಮನೋರಥಸಿದ್ಧಿ ಪಡೆಯುವುದೆಂದು ನಿಶ್ಚೈಸಿ ॥ ॥ ೧ ॥ [೧೦೦

ರಾಗ : ಕಾಂಬೋಧಿ, ಝಂಪೆತಾಳ

ಚಿತ್ತವಿಸು ಪೃಥ್ವಿಯೊಳ । ಗುತ್ತಮ ವಿದರ್ಭಪುರ ।
ಪೃಥ್ವಿಪಾಲಕ ಚಂದ್ರಸೇನ ॥
ಸತ್ಯಧರ್ಮದಿ ಪಾಲಿಸು । ತ್ತಿರಲು । ಗುಣನಿಧಿಯು ।
ಕೃತ್ತಿವಾಸನ ನೆನೆದು ಧನ್ಯ ॥ ॥ ೧ ॥

ಸಿರಿಯು ಸಂಪದಗಳಲಿ । ಇರದು ಕೊರತೆಯು ನೃಪಗೆ ।
ಧುರಪರಾಕ್ರಮಿಯಾಗಿ ಮೆರೆದ ॥
ಅರಿಗಳನು ಸದೆಬಡೆದ । ಖ್ಯಾತಿವಂತಗೆ ಬಂದ ।
ಕೊರತೆಯೇನೆಂದು ಪೇಳುವೆನು ॥ ॥ ೨ ॥

ಪುತ್ರಭಾಗ್ಯವದಿಲ್ಲ । ಪುತ್ರಿಯೋರ್ವಳೆ ತನಗೆ ।
ಚಿತ್ತಜನ ಸತಿಯಂತೆ ಮೆರೆವ ॥
ಮತ್ತಕಾಶಿನಿ ಲೋಪ । ಮುದ್ರೆ ಮಮ ಸುತೆಯಹಳ ।
ವೃತ್ತಾಂತವೇನ ಪೇಳುವೆನು ॥ ॥ ೩ ॥

ಇಳೆಯ ವೈರಾಗ್ಯ ಮೆ । ಯ್ದಳೆದು ಬಂದಿತೊ ಕಾಣೆ ।
ಲಲನೆಗೀ ರಾಜ್ಯಭೋಗದಲಿ ॥
ಸಲೆ ದ್ವೇಷ, ನಾರುಮಡಿ । ನಳಿನಾಕ್ಷಿ ಧರಿಸುವಳು ।
ಎಳವೆಯಲಿ ಯಾಕೆ ನಾ ಕಾಣೆ ॥ ॥ ೪ ॥ [೧೦೪]

ಭಾಮಿನಿ

ಮದುವೆ ಪ್ರಾಯಕೆ ಬಂದ ತರಳೆಯ ।
ಮುದದಿ ಲಗ್ನವ ಗೈವೆನೆಂದಾ ।
ಉದಧಿವಸನಾಧೀಶ ಯತ್ನವಗೈಯೆ ನೃಪಸುತರು ॥
ಹದನ ಮೊದಲೇ ತಿಳಿದು ಚಂದಿರ ।
ವದನೆಯನು ತಿರಸ್ಕರಿಸೆ ಚಿಂತಾಂ ।
ಬುಧಿಯೊಳಗೆ ನೃಪ ಮುಳುಗಿರಲು ಚರನೋರ್ವ ಬಂದಲ್ಲಿ ॥ ೧ ॥ [೧೦೫]

ರಾಗ : ಸಾರಂಗ, ಅಷ್ಟತಾಳ

ಪೃಥ್ವಿಪತಿಯೆ ಲಾಲಿಸು । ನಾವೆಂಬುದ ।
ಸತ್ಯವಂತನೆ ಪಾಲಿಸು ॥
ನಿತ್ಯ ನಿನ್ನಾಣತಿ । ಹೊತ್ತು ಜೀವಿಸುತಿದ್ದ ।
ಭೃತ್ಯರು ನಾವೆಲ್ಲ । ಅರ್ತಿಯಿಂ ಕಾದಿರೆ ॥ ॥ ೧ ॥

ಮುನಿವರೇಣ್ಯನು ಬಂದಿರೆ । ನೋಡಲು ಗಿಡ್ಡ ।
ತ್ರಿಣಯನಂದದಿ ಮೆರೆದಿರೆ ॥
ನೆನೆದರೆ ಭಯ ಕೋಟಿ । ಇನಸನ್ನಿಭನು ಮಹ ।
ಮುನಿವೃಂದ ಸಹಿತ ನಿ । ಮ್ಮೆಡೆಗಾಗಿ ಬಂದಿಹ ॥ ॥ ೨ ॥

ಕುಂಭಸಂಭವನಾತನು । ಅಗಸ್ತ್ಯನೆಂ ।
ದೆಂಬರು ಜಗದೊಳಿನ್ನು ॥
ತ್ರ್ಯಂಬಕರೂಪಿಯ । ನಂಬಿಸಿ ನಿಲಿಸುತ ।
ಸಂಭ್ರಮದಿಂದಲಿ । ಪೇಳಲು ಬಂದಿಹೆ ॥ ॥ ೩ ॥ [೧೦೮

ರಾಗ : ಸಾಂಗತ್ಯ, ರೂಪಕತಾಳ

ಅಗವ ಸ್ತಂಭನ ಗೈದ । ಗಸ್ತ್ಯಮುನಿಯು ಬಂದ ।
ಬಗೆಯನರಿತು ಚಂದ್ರಸೇನ ॥
ಮೃಗಧರ ಶರಣನ । ಬರಕೆಯಚ್ಚರಿಪಟ್ಟು ।
ಮಿಗೆ ಸಂಭ್ರಮದೊಳೆದ್ದು ಬಂದ ॥ ॥ ೧ ॥

ಮಾರವೈರಿಯ ತೆರ । ರಾರಾಜಿಸುತಲಿಪ್ಪ ।
ಚಾರು ಮುನಿಪನಂಘ್ರಿಗಂದು ॥
ಭೋರನೆರಗಿ ಕರೆ । ತಂದು ವಿಷ್ಟರವಿಟ್ಟು ।
ಯೀ ರೀತಿ ಪೇಳಿದ ನೃಪತಿ ॥ ॥ ೨ ॥

ಪರಮಪಾವನವಾಯ್ತು । ವರ ವಿದರ್ಭವೆ ನಿಮ್ಮ ।
ಬರವಿನಿಂದಲಿ ಮುನಿಪತಿಯೆ ॥
ಶರಣರೊಳಗೆ ಪ್ರೇಮ । ವಿರಿಸಿ ಬಂದಿರೆ ಧನ್ಯ ।
ಧರೆಯೊಳು ನಾನಾದೆನೆಂದ ॥ ॥ ೩ ॥ [೧೧೧

ರಾಗ : ಸುರುಟಿ, ಆದಿತಾಳ

ಚಂದ್ರಸೇನ ನೃಪನೆ । ವರ ದೇ ।
ವೇಂದ್ರನ ಸಮ ನೀನೆ ॥
ಕುಂದುಗಳೇನಿದೆ । ಯಿಂದು ದೇವನ ಕೃಪೆ ।
ಯಿಂದಲಾಳಲು ವ । ಸುಂಧರೆಯನು ಭಲ ॥ ॥ ೧ ॥

ನಿನ್ನೆಡೆ ನಾ ಬರಲು । ಕಾರಣ ।
ವನ್ನು ಪೇಳ್ವೆ ಮೊದಲು ॥
ಪುಣ್ಯಾತ್ಮನೆ ತ್ವತ್ । ಕನ್ಯೆಯ ಕರೆಸೆನೆ ।
ಸನ್ಮತಿಲಿ ಗುಣ । ರನ್ನಳ ಕರೆಯಲು ॥ ॥ ೨ ॥ [೧೧೩

ರಾಗ : ಸೌರಾಷ್ಟ್ರ, ತ್ರಿವುಡೆತಾಳ

ಬರ್ದಿಲಾಧಿಪ ಸತಿಯೊ ಗಿರಿಸುತೆ ।
ಯೆದ್ದು ಬಂದಳೊ ಕಮ್ಮಗೋಲನ ।
ಮುದ್ದು ಮಡದಿಯೊ ನೋಡೆ ಲೋಪಾ । ಮುದ್ರೆ ದೇವಿ ॥ ೧ ॥

ಮತ್ತಕಾಶಿನಿ ಬಂದು ಪಿತನಿಗೆ ।
ಭಕ್ತಿಯೊಳು ನಮಿಸುತ್ತ ಮುನಿಪನ ।
ನರ್ತಿಯೊಳು ಯೀಕ್ಷಿಸುತ ಮಣಿದೊಡ । ಗಸ್ತ್ಯ ನುಡಿದ ॥ ೨ ॥

ಧರಣಿಪತಿ ತವಸುತೆಯ ಹದನವ ।
ನರಿತು ಬಂದಿಹೆ ನಿನ್ನ ದುಗುಡವ ।
ಹರಿಸಲೆಂದೇ ಎಂಬ ಮುನಿಪಗೆ । ತವಕದಿಂದ ॥ ॥ ೩ ॥

ಶುದ್ಧವೈರಾಗ್ಯದೊಳು ಮುಳುಗಿಹ ।
ಮುದ್ದು ತರಳೆಯ ವರಿಪ ಮಹಿಮನ ।
ರುದ್ರಸನ್ನಿಭ ತೋರಿ ಧರೆಯೊಳು । ಉದ್ಧರಿಪುದು ॥ ॥ ೪ ॥ [೧೧೭]

ವಾರ್ಧಕ

ಎನ್ನಲಾ ಚಂದ್ರಸೇನಗೆ ನುಡಿದಗಸ್ತ್ಯಮುನಿ ।
ಕನ್ಯಾರ್ಥಿಯಾಗಿ ನಿನ್ನೆಡೆಗೆ ನಾ ಬಂದೆ ವಿಧಿ ।
ನಿರ್ಣಯವು ತವಸುತೆಯನೆನಗಿತ್ತು ಲಗ್ನವನು ಮೇಳೈಸು ಶುಭಸಮಯವು ॥
ಕರ್ಣಕರ್ಕಶ ನುಡಿಗೆ ಭೂರಮಣ ಧರೆಗುರುಳಿ ।
ಕಣ್ಣೀರು ಸುರಿಸುತ್ತ ನುಡಿದ ಹೇ ಶಿವನೆ ಸುತೆ ।
ಯನ್ನು ಮುನಿಪುಂಗವನು ಬಯಸಿದನೆ ದುರ್ವಿಧಿಯ ತಾಳಲಾರೆನು ಎಂದರೆ ॥ ೧ ॥

ರಾಗ : ಕೇದಾರಗೌಳ, ಅಷ್ಟತಾಳ

ಎಂದು ಮರುಗುತಿಪ್ಪ । ಚಂದ್ರಸೇನಗೆ ಮಣಿ ।
ದೆಂದಳು ನೃಪಸುತೆಯು ॥
ಚಂದದ ಸಮಯವು । ಬಂದಿದೆ ಜನಕನೆ ।
ಸಂದೇಹವ್ಯಾಕೆಂದಳು ॥ ॥ ೧ ॥

ಕಲಶಸಂಭವನೀತ । ಮುಳಿದು ನಿಂತರೆ ಜಗ ।
ದೊಳು ಬಾಳಲುಂಟೆ ಮತ್ತೆ ॥
ಹುಲು ನೃಪರೀತನ । ಪಾದಧೂಳಿಗೆ ಸಮ ।
ನಿಲಲಾರರಿಂದಿನೊಳು ॥ ॥ ೨ ॥

ಮನ್ಮಥಾರಿಯ ತೆರ । ಶೋಭಿಪನೀತನ ।
ನಿರ್ಣಯ ವರಿಸುವೆನು ॥
ಎನ್ನುವ ಮೋಹದ । ಕನ್ಯೆಯ ನುಡಿಗಳ ।
ತನ್ನೊಳು ಮಥಿಸುತ್ತಲಿ ॥ ॥ ೩ ॥ [೧೨೧

ಭಾಮಿನಿ

ಯೋಗಿನಿಯ ತೆರ ಬೆಳೆದ ಮಗಳನು ।
ಯೋಗಿವರ್ಯಗೆ ಪೊಪ್ಪಿಸುವೆ ವಿಧಿ ।
ಯೋಗ ಮೀರಲಿಕುಂಟೆ ಕಲಶಜನೀತ ಘನಮಹಿಮ ॥
ನಾಗವೇಣಿಯ ಬಯಸಿರಲು ಮಹ ।
ಯೋಗವೆಂದೇ ಬಗೆದು ಸುತೆಯನು ।
ಈ ಗುಣಾಢ್ಯಗೆ ಕೊಟ್ಟು ವೈವಾಹವನು ಮಾಡಿಸುವೆ ॥ ॥ ೧ ॥ [೧೨೨

ರಾಗ : ಕಾಂಬೋಧಿ, ಝಂಪೆತಾಳ

ಭೂರಿವೈಭವದಿಂದ । ಸಾರಸಾಕ್ಷಿಯ ಲಗ್ನ ।
ಧಾರಿಣೀಪತಿಯು ನಡೆಸಿದರೆ ॥
ಮಾರಾರಿ ಗಿರಿಜೆಯನು । ವರಿಸಿದಾ ಪರಿಯಂತೆ ।
ತೋರಿಹುದು ನೋಳ್ಪ ಸುರರಿಂಗೆ ॥ ॥ ೧ ॥

ನಾರುಮಡಿಯನ್ನುಟ್ಟು । ಪತಿಗೃಹಕೆ ಪೊರಡೆ ಸುತೆ ।
ಧಾರಿಣಿ ಪಾಲ ಶೋಕಿಸುತ ॥
ಭೂರಿ ಸಂಪದ ತೊರೆದು । ಪೊರಟವಳ ತಕ್ಕೈಸಿ ।
ವೀರ ನೃಪ ಪೇಳೆ ನೀತಿಯನು ॥ ॥ ೨ ॥

ಪೆತ್ತ ಗೃಹ ಪೊಕ್ಕ ಮನೆ । ಯೆರಡಕ್ಕು ಬೆಳಕಾಗಿ ।
ನಿತ್ಯ ನೀ ಬಾಳೆಂದು ಹರಸಿ ॥
ಋತ್ವಿಜೋತ್ತಮನಿಂಗೆ । ಒಪ್ಪಿಸಲು ಪೊರವಂಟ ।
ಅರ್ತಿಯೊಳು ತನ್ನ ಆಶ್ರಮಕೆ ॥ ॥ ೩ ॥ [೧೨೩

ರಾಗ : ಸೌರಾಷ್ಟ್ರ, ತ್ರಿವುಡೆತಾಳ

ಮಣಿಮತಿಯ ಪುರವರದಿ ಮರೆದಿರೆ ।
ಕನಕಕಶ್ಯಪ ಸುತನೆ ಯಿಲ್ವಲ ॥
ಅನುಜ ವಾತಾಪಿಯನು ಕೂಡುತ । ದನುಜಶ್ರೇಷ್ಠ ॥ ॥ ೧ ॥

ಲೋಕಕಂಟಕರಾಗಿ ಮೆರೆಯುತ ।
ಕಾಕು ದೈತ್ಯರನೆಲ್ಲ ಕೂಡಿಸ ।
ಲಾ ಕುಕರ್ಮಿಗಳದಟುತನ ವಿ । ವೇಕವಲ್ಲ ॥ ॥ ೨ ॥

ಅಣ್ಣ ಯಿಲ್ವಲ ಧರಣಿಸುರರನೆ ।
ಉಣ್ಣಲಾಹ್ವಾನಿಸುತ ತಮ್ಮನ ।
ಮುನ್ನ ಮೇಕೆಯ ಮಾಡಿ ಮಾಂಸವ । ನುಣ್ಣಲೆಂದು ॥ ॥ ೩ ॥

ಧರಣಿಸುರರುಂಡೊಡನೆ ದೈತ್ಯನು ।
ಕರೆಯೆ ಬಾ ವಾತಾಪಿ ಹೊರಗೆನೆ ॥
ಪರಮವಿಪ್ರರ ಉದರ ಬಗೆಯುತ । ಹೊರಗೆ ಬರುವ ॥ ॥ ೪ ॥

ಬಳಿಕಲವರೊಡನಿಷ್ಟಸಂಪದ ।
ಸೆಳೆದು ಮಣಿಮತಿಗೊಯ್ದು ಪೋದರೆ ॥
ಖಳರು ಸಂಪದಗಳಲಿ ಧನಪನ । ತುಳಿದು ಮೆರೆಯೆ ॥ ॥ ೫ ॥ [೧೩೦]

ರಾಗ : ಕಾಂಬೋಧಿ, ಝಂಪೆತಾಳ

ಧರಣಿಯ ಸುರರನೆಲ್ಲ । ನಿರತ ಪೀಡಿಸುತಿಪ್ಪ ।
ದುರುಳನಿಲ್ವಲನ ಕಾಲದಲಿ ॥
ಧರೆಗೆ ಕ್ಷಾಮವು ಬಂತು । ತಿರೆಯೊಣಗೆ ತಿನಲುಣಲು ।
ಕೊರತೆಯಾದುದು ಸರ್ವಜನಕು ॥ ॥ ೧ ॥

ದನಕರುಗಳೆಲ್ಲ ಮರ । ಣವನಪ್ಪೆ ಗಿಡಮರಗ ।
ಳೊಣಗಿತ್ತೈ ನೀರಿಲ್ಲದಿರಲು ॥
ಜನಗಳೆಲ್ಲರು ಗೋಳಿ । ಡಲು ಬಂದಿರುವ ಕಷ್ಟ ।
ವನು ತಾಳದಂದು ಹಾ ಶಿವನೆ ॥ ॥ ೨ ॥

ಅರಿತರವರೀ ಕಷ್ಟ । ಪರಿಹರಿಸೆ ಕಲಶಜನ ।
ಹೊರತನ್ಯರನು ಕಾಣೆವೆಂದು ॥
ದುರುಳರನು ಸಂಹರಿಸಿ । ಧರೆಯ ಕ್ಷಾಮವ ನೀಗೆ ।
ಕರುಣಾರ್ಣವನ ಮರೆಯ ಪೊಗಲು ॥ ॥ ೩ ॥ [೧೩೩]

ರಾಗ : ಕೇದಾರಗೌಳ, ಅಷ್ಟತಾಳ

ಇತ್ತಲಗಸ್ತ್ಯನು । ಪತ್ನಿ ಸಹಿತಲೆ ಪ ।
ವಿತ್ರಾಶ್ರಮಕೆ ಬರುತ ॥

ಅರ್ತಿಯಿಂದಿರುತಿರೆ । ವೈರಾಗ್ಯ ತಳೆದಳ ।
ಹತ್ತಿರ ಕರೆದೆಂದನು ॥ ॥ ೧ ॥

ಪ್ರಾಣವಲ್ಲಭೆ ಗುಣ । ಪೂರ್ಣಳೆ ಕೇಳನು ।
ಮಾನವು ಕಾಡುತಿದೆ ॥
ಕ್ಷೋಣಿಯೊಳೆಮ್ಮ ಸಂ । ಸಾರ ಕಾಂಬರಿಗಷ್ಟೆ ।
ಯೇನಿದೆ ಮನದೊಳಗೆ ॥ ॥ ೨ ॥

ಪುತ್ರಭಾಗ್ಯವ ಪಡೆ । ವತ್ತ ಗಮನವಿಲ್ಲ ।
ನಿತ್ಯ ಶೋಕಿಪಳಂತೆಯೆ ॥
ವ್ಯರ್ಥ ಕುಳಿತರೇನು । ಫಲವುಂಟು ಕಾರಣ ।
ಸತ್ಯಸಂಧಳೆ ಪೇಳೆನೆ ॥ ॥ ೩ ॥ [೧೩೬

ರಾಗ : ಮಧುಮಾಧವಿ, ಅಷ್ಟತಾಳ

ಪ್ರಾಣೇಶ್ವರನೆ ಕೇಳು ನಾನೆಂಬ ಮಾತ ।
ನೀನೆನ್ನ ವರಿಸಿರಲೇನುಂಟು ಲೋಪ ॥
ನಾನೊಮ್ಮೆ ವೈರಾಗ್ಯ ತಳೆದುದು ಅಹುದು ।
ಕಾಣಲಾ ಭಾವವೆ ವ್ಯರ್ಥವಾಗಿಹುದು ॥ ॥ ೧ ॥

ಪುತ್ರನ ಪಡೆಯಬೇಕೆಂದು ನಾ ಬಗೆಯೆ ।
ಋತ್ವಿಜರಾದೆಮ್ಮ ಬಾಳಿಗೆ ಸರಿಯೆ ॥
ವಿತ್ತವೆ ಪ್ರಮುಖವು ಸಂಸಾರಿಗಳಿಗೆ ।
ಸತ್ಯದ ಮಾತಿದು ಅರಿತೆನೀ ಘಳಿಗೆ ॥ ॥ ೨ ॥

ವರ ವಿದರ್ಭದ ವಿತ್ತ ಪಡೆದವಳಲ್ಲ ।
ದೊರೆ ನಿನ್ನ ಸ್ವಾರ್ಜಿತ ಸಂಪದವಿಲ್ಲ ॥
ಇರದಿರೆ ರಾಜಭೋಗವು ನಮಗೇಕೆ ।
ತರಳರು ಘನಘೋರ ಕ್ಷಾಮ ಕಾಲಕ್ಕೆ ॥ ॥ ೩ ॥ [೧೩೭

ಭಾಮಿನಿ

ಸತಿಯ ಮಾತಿಗೆ ನಕ್ಕು ಪೇಳಿದ ।
ಮತಿಯುತಳೆ ವರ ರಾಜಭೋಗದ ।
ಹಿತದಿ ಬಯಸಿದೆಯಲ್ಲ ಚೋದಿಗ ಭಲರೆ ಮುದಗೊಂಡೆ ॥
ಅತಿಶಯದ ವರ ಭೋಗ ಪಡೆಯುತ ।

ಕ್ಷಿತಿಯೊಳಗೆ ಮೆರೆಸುವೆನು ನಿನ್ನನು ।
ಸುತನ ಭಾಗ್ಯವು ಬಳಿಕ ನಮಗೆನೆ ವಿಪ್ರರೈತರಲು ॥ ॥ ೧ ॥ [೧೪೦]

ರಾಗ : ಸಾಂಗತ್ಯ, ರೂಪಕತಾಳ

ಮರುಗುತ್ತಲೈತಂದ । ಧರಣಿಸುರರ ಕಂಡು ।
ಬೆರಗಾಗಿ ಕಲಶಸಂಭವನು ॥
ಪರಿ ಪರಿಯೊಳು ಉಪ । ಚರಿಸುತ್ತ ಬೆಸಗೊಂಡ ।
ನರುಹಿ ನೀವೈತಂದುದೇನು ॥ ॥ ೧ ॥

ಭಾನುಜಾತನೆ ಕರು । ಣಾರ್ಣವ ಕೇಳಯ್ಯ ।
ಕ್ಷೋಣಿಯೊಳಗೆ ಕ್ಷಾಮ ಬರಲು ॥
ದಾನವನಿಲ್ವಲ । ಪ್ರಜ್ವಲಿಸುತ ಬಂದ ।
ಪ್ರಾಣವ ತೆಗೆದ ನಮ್ಮವನು ॥ ॥ ೨ ॥

ದುರುಳನ ವಧಿಸುತ್ತ । ಧರೆಯ ಕ್ಷಾಮವ ನೀಗೆ ।
ತರಣಿಜ ನೀನೆ ತಕ್ಕವನು ॥
ಯಿರಿಸುತ್ತ ಕರುಣವ । ಪೊರೆಯೆಂದು ಸರ್ವರು ।
ಮರುಗುತ್ತ ನುಡಿದರೆ ನುಡಿದ ॥ ॥ ೩ ॥ [೧೪೩]

ಭಾಮಿನಿ

ಬಳಲಿದಿರೆ ಭೂಸುರರು ನೀವಾ ।
ಖಳರ ಬಾಧೆಯ ತಾಳದಾದಿರೆ ।
ಇಳೆಯ ಕ್ಷಾಮದಿ ನೊಂದುಕೊಳ್ಳುತಲಿಲ್ಲಿ ಬಂದಿಹಿರೇ ॥
ಅಳಲದಿರಿ ಬಂದಿಪ್ಪ ಕಷ್ಟವ ।
ಕಳೆದುಕೊಡುವೆನು ಧೈರ್ಯ ತಾಳಿರಿ ।
ಉಳಿಯಬೇಕೀ ಪೃಥ್ವಿ ನ್ಯಾಯದ ತಳಹದಿಯ ಮೇಲೆ ॥ ॥ ೧ ॥ [೧೪೪]

ರಾಗ : ಕಾಂಬೋಧಿ, ಝಂಪೆತಾಳ

ಎಂದು ವಿಪ್ರರನೆಲ್ಲ । ಚಂದದೊಳು ಸಂತವಿಸಿ ।
ಚಂದ್ರಮುಖಿಗೊರೆದು ಧೈರ್ಯವನು ॥
ಬಂದನಾಗಸ್ತ್ಯಮುನಿ । ಯಂದು ಮಣಿಮತಿ ಪುರಕೆ ।
ಮಂದಮತಿಗಳ ಕೊಲಲು ತಾನು ॥ ॥ ೧ ॥

ಮುನಿಯು ಬರುತಿಪ್ಪ ಪರಿ । ದನುಜೇಶ ಕಂಡಾಗ ।
ಮನದಿ ಹಿಗ್ಗುತ ಬಳಿಕಲಂದು ॥

ಅನುಜ ಸಹಿತಲೆ ಬಂದು । ವಿನಯವನೆ ನಟಿಸುತ್ತ ।
ಮಣಿಮಯದ ಪೀಠವಿಟ್ಟಾಗ ॥ ॥ ೨ ॥

ಋತ್ವಿಜೋತ್ತಮರು ನೀ । ವಿತ್ತ ಬಂದುದು ನಮ್ಮ ।
ಪತ್ತನವು ಪಾವನವದಾಯ್ತು ॥
ಅರ್ತಿಯೊಳು ನಾವೀವ ಆ । ತಿಥ್ಯವನು ಸ್ವೀಕರಿಸಿ ।
ಮತ್ತೆ ವಿಶ್ರಮಿಪುದಿಂದೆನುತ ॥ ॥ ೩ ॥

ಭಳಿರೆ ಮೆಚ್ಚಿರುವೆನಿ । ಲ್ವಲದಾನವನೆ ನಿನ್ನೊ ।
ಳುಳಿವ ನಿಶ್ಚಯಗೈದೆನಿಂದು ॥
ಬಲುಹಸಿವು ಬಾಧಿಸುತ । ಲಿರಲು ಸ್ನಾನವ ಗೈದು ।
ತಳುವದೈತಹೆನೆಂದು ಪೊರಟ ॥ ॥ ೪ ॥ [೧೪೮

ಭಾಮಿನಿ

ಸಿಕ್ಕಿದನು ಭೂಸುರನು ಯೆನ್ನಯ ।
ಠಕ್ಕು ವಿನಯವ ನಂಬಿಕೊಂಡಿಹ ।
ನಿಕ್ಕುವೆನು ಸಹಭವನ ಮಾಂಸದಿ ಭೋಜನಕೆ ಯಿಂದು ॥
ರಕ್ಕಸನು ತಮ್ಮನಿಗೆ ಪೇಳಲು ।
ಪಕ್ಕನೆಯ ಆಡಾಗೆ ತಾ ಕಡಿ ।
ದಿಕ್ಕಿ ಮೇಕೆಯ ಮಾಂಸದಿಂದಲೆ ಅಡುಗೆ ಮಾಡಿದರೆ ॥ ೧ ॥ [೧೪೯

ರಾಗ : ಕೇದಾರಗೌಳ, ಝಂಪೆತಾಳ

ಸ್ನಾನವನು ಪೂರೈಸುತಾ । ಗಸ್ತ್ಯ ಬರೆ ।
ದಾನವೇಂದ್ರನು ಕಾಣುತ ॥
ಮೌನಿಪನ ಕರೆತಂದನು । ಕೂರಿಸುತ ।
ತಾನೆ ಉಣಬಡಿಸುತಲವನು ॥ ॥ ೧ ॥

ಈ ತೆರದ ಭೋಜನವನು । ಗೈಯೆ ಖಳ ।
ವಾತಾಪಿ ಬಾರೆಂದನು ॥
ವಾತಾಪಿ ಜೀರ್ಣೋ ಭವ । ಎನುತ ಮುನಿ ।
ತಾ ತೇಗೆ ಬಲುಚೋದ್ಯವ ॥ ॥ ೨ ॥

ಏನೆಂಬೆ ವಾತಾಪಿಯ । ಜಠರದಲೆ ।
ಜೀರ್ಣಿಸಿದಗಸ್ತ್ಯ ಮುನಿಯ ॥

ಕಾಣುತಲೆ ಬೆದರೆ ಖಳನು । ಓಡಲ್ಕೆ ।
ಯೇನೆಂಬೆ ಮುನಿಪ ತಾನು ॥ ॥ ೩ ॥

ಬಿಟ್ಟ ನೋಟದಿ ನೋಡಲು । ಯಿಲ್ವಲನು ।
ಸುಟ್ಟು ಭಸ್ಮವದಾಗಲು ॥
ಕೆಟ್ಟ ರಕ್ಕಸ ಸಾಯಲು । ಮುನಿಗೆ ಸುರ ।
ರಷ್ವರಲೆ ಸುಮ ಸುರಿಸಲು ॥ ॥ ೪ ॥ [೧೫೩]

ವಾರ್ಧಕ

ಧರೆಯಮರರನೆ ಕರೆದು ಸಿರಿಯ ಹಂಚಲು ಬಳಿಕ ।
ವರ ಮಂತ್ರಶಕ್ತಿಯೊಳು ಬರಿಸಿದರೆ ಜಡಿಮಳೆಯ ।
ಧರೆಯ ಕ್ಷಾಮವು ನೀಗೆ ಕಲಶಜನು ಪೊರವಂಟ ತನ್ನಾಶ್ರಮಕೆ ಮುದದಲಿ ॥
ತರುಣಿಯೊಳು ರಾಜವೈಭವದಿಂದ ಭೋಗಿಸುತ ।
ತರಳನನು ಪಡೆದ ವರ ಇಧ್ಮವಾಹನನೆಂಬ ।
ಪರಮ ತೇಜೋವಂತ ಸುತಸಹಿತ ದಕ್ಷಿಣಾವರ್ತದೊಳೆ ಮೆರೆಯುತಿರ್ದ ॥ ೧ ॥

ಭಾಮಿನಿ

ಲಾಲಿಸಿರಿ ಬಲು ಧೂರ್ತ ದೈತ್ಯರು ।
ಕಾಲಕೇಯರು ಸುರರ ಸೋಲಿಸಿ ।
ಲೀಲೆಯಿಂದಡಗಿಹರು ಸಾಗರತಳದಿ ವೈಭವದಿ ॥
ಖೂಳರುಪಟಳ ಹೆಚ್ಚುತಿರೆಯಿದ ।
ತಾಳಲಾರದೆ ಸುರರ ಕೂಡುತ ।
ಶ್ರೀಲಲಾಮನ ಬಳಿಗೆ ಬಂದನು ಸುರಪ ದುಗುಡದಲಿ ॥ ೧ ॥ [೧೫೫]

ರಾಗ : ಸೌರಾಷ್ಟ್ರ, ತ್ರಿವುಡೆತಾಳ

ಬಂದ ಮಘವನ ಕಂಡು ಶ್ರೀಹರಿ ।
ಚಂದದಿಂದುಪಚರಿಸಿ ಬಳಿಕಾ ।
ನಂದದಿಂದಲಿ ಪೇಳ್ದ ಸುರಪನೆ । ಬಂದೆಯೇನು ॥ ॥ ೧ ॥

ಏನು ನಿನ್ನಯ ದುಗುಡ ಪೇಳೈ ।
ಆನನವು ಕಂದಿರ್ಪುದಿಂದಿಲಿ ।
ದಾನವರ ಭಯವುಂಟೆ ಸುರರಿಗೆ । ಹೇಳಬೇಕು ॥ ॥ ೨ ॥ [೧೫೭]

ರಾಗ : ಬೇಹಾಗ್, ಆದಿತಾಳ

ಕರುಣಾಕರ ಶ್ರೀವರ ಹರಿಯೆ । ಕೇಳ್ –
ಸುರರಿಗೆ ಬಂದಿಹ ದುರ್ಗತಿಯ ॥
ಅರುಹಲದೇನದ ದುರುಳದಾನವರು ।
ಧುರದೊಳು ಭಂಗಿಸಿ ನಮ್ಮನ್ನು ॥
ಶರಧಿಯ ನೀರಲು । ಅಡಗುತ ನಿಶೆಯೊಳು ।
ಬರುವರು ನಭಕೆ । ಕೇಳಿನ್ನು ॥ ॥ ೧ ॥

ಕಾಲಕೇಯರಾ । ಖೂಳರು ರಕ್ಕಸ ।
ಪಾಳಿಯ ಹಾವಳಿ ನಮಗಾಗೆ ॥
ತಾಳಲಾರದೆಯೆ ಬಂದಿಹೆಯಿಲ್ಲಿದೆ ।
ಪಾಲಿಸು ಅಭಯವ ನೀಡೆಮಗೆ ॥ ॥ ೨ ॥ [೧೫

ರಾಗ : ಸೌರಾಷ್ಟ್ರ, ತ್ರಿವುಡೆತಾಳ

ಕೇಳಿ ನಸುನಗುತೆಂದ ಶ್ರೀಹರಿ ।
ಕಾಲಕೇಯರುಪಟಳಕೆ ಹಾದಿಯ ।
ಪೇಳುವೆನು ಬಿಡಿ ದುಗುಡ ಸಂತಸ । ತಾಳಿ ನೀವು ॥ ॥ ೧ ॥

ಭಾನುಶಾಪವನಾಂತ ವರುಣಗೆ ।
ಭಾನುಸುತನಾಗಸ್ತ್ಯ ಮುನಿಪತಿ ।
ತಾನೆ ಭಂಗಿಸಿ ವರುಣದೇವನ । ಗರ್ವ ಮುರಿವ ॥ ॥ ೨ ॥

ತೆರಳಿಯಾ ಕುಂಭಜನ ಮುದದಿಂ ।
ಶರಣು ಬಂದರೆ ನಿಮ್ಮ ಕಷ್ಟವ ।
ಪರಿಹರಿಸಿ ಪೊರೆಯುವರು ನಿಶ್ಚಯ । ತೆರಳಿ ನೀವು ॥ ॥ ೩ ॥ [೧೬

ಭಾಮಿನಿ

ಇಂದಿರೇಶನ ನುಡಿಗೆ ಸಂತಸ ।
ದಿಂದ ಬರ್ಹಿಲರನ್ನು ಕೂಡುತ ।
ಬಂದ ಗೋದಾವರಿಯ ತೀರಕೆ ಮುನಿಪನಾಶ್ರಮಕೆ ।
ಮಂದಮತಿಗಳು ಕಾಲಕೇಯರ ।
ಕೊಂದು ಕೆಡಹಲು ಶರಧಿಪನ ಬಲ ।
ಕುಂದಿಸಲು ಕುಂಭಜನು ತಕ್ಕವನೆಂದು ಸಂಭ್ರಮಿಸಿ ॥ ೧ ॥ [೧೬೩]

ರಾಗ : ಬಿಲಹರಿ, ಅಷ್ಟತಾಳ

ಬಿಡುಗಣ್ಣರೊಡೆಯನ ಕಂಡು । ಮುದ ।
ಪಡುತಲಗಸ್ತ್ಯನು ಮಘವನನಂದು ॥
ಬಿಡದೆ ಸತ್ಕರಿಸಿ ವಿಧವಿಧದಿ । ಸುರ ।
ಪಡೆ ಸಹಿತ್ಯೆದಿದ ಪರಿಗೆ ವಿಸ್ಮಯದಿ ॥ ॥ ೧ ॥

ಏನು ಬಂದಿಹೆ ಸುರಪತಿಯೆ । ನಿನ್ನ ।
ಕಾಣುತ್ತ ಸಂತಸಗೊಂಡೆ ಬಂದಿಪ್ಪ ಪರಿಯೆ ॥
ಮಾನನಿಧಿಯು ನೀನು ನೋಡೆ । ನಿನ್ನ ।
ಆನನ ಕಂದಿದೆ ಏನಾಯ್ತು ನಿಮಗೆ ॥ ॥ ೨ ॥ [೧೬೫]

ಭಾಮಿನಿ

ಕೇಳು ಮುನಿವರ ನಮ್ಮವರ ನೆರೆ ।
ಪಾಲಿಸಿಂದಿಲಿ ದೈತ್ಯ ಶ್ರೇಷ್ಠರು ।
ಕಾಲಕೇಯರು ಶರಧಿಪನನಾಶ್ರಯಿಸಿ ರಾತ್ರಿಯೊಳು ॥
ಧಾಳಿ ಮಾಡುತ ಮಾಳ್ಪ ಹಾನಿಯ ।
ತಾಳದೆಯೆ ಶ್ರೀಹರಿಗೆ ಪೇಳಲು ।
ಶ್ರೀಲಲಾಮನು ನಿನ್ನ ಬಳಿ ಕಳುಹಿದನು ಪೊರೆಯೆಮ್ಮ ॥ ೧ ॥ [೧೬೬]

ರಾಗ : ಮಾರವಿ, ಏಕತಾಳ

ಸುರರೆಂದಾ ನುಡಿ । ಕೇಳುತ ಮುನಿವರ । ಕೆರಳಿದನಂದಿನಲಿ ॥
ಶರಧಿಪನಿಂದಿಲಿ । ದುರಳರಿಗಾಶ್ರಯ । ಹರುಷದಿ ಕೊಡುತಿಹನೆ ॥ ೧ ॥

ಬಿಡಿ ಬಿಡಿ ಚಿಂತೆಯ । ಬಿಡುಗಣ್ಣರೆಯಾ । ಧಡಿಗನ ಭಂಗಿಪೆನು ॥
ದೃಢದೊಳುಮಾಡುವೆ । ನೋಡಿರಿ ರಕ್ಕಸ । ಪಡೆಯನು ತೋರಿಸುವೆ ॥ ೨ ॥

ಹಿಂದಕೆ ಯೆನ್ನಯ । ಪಿತನನು ಕೆಣಕುತ । ಹೊಂದಿರೆ ಶಾಪವನು ।
ಮಂದಮತಿಗೆ ಆ । ವರುಣಗೆ ಶಾಸ್ತಿಯ । ನಿಂದು ಮಾಳ್ಪೆನೆನುತಾ ॥ ೩ ॥ [೧೬೭]

ಭಾಮಿನಿ

ಭೋರಿಡುವ ಸಾಗರದ ಸಂಭ್ರಮ ।
ಧಾರುಣಿಯ ಮೆಚ್ಚಿಸಲು ಮುನಿಯು ।
ಭೈರಿ ರೋಷದಿ ಗರ್ಜಿಸುತ ಶರಧಿಪನ ಭಂಗಿಸುವೆ ॥

ವಾರಿಧಿಯ ನೀರನ್ನೆ ಈ ಕ್ಷಣ ।
ಹೀರಿಬಿಡುವೆನು ಮಂತ್ರಬಲದಿಂ ।
ಭಾರಿಗಾತ್ರದ ನೀರು ಹೃಸ್ವವದಾಗೆ ಶಪಿಸಿದನು ॥ ॥ ೧ ॥ [೧೭

ರಾಗ : ಸೌರಾಷ್ಟ್ರ, ತ್ರಿವುಡೆತಾಳ

ವಾರಿಧಿಯ ನೀರೆಲ್ಲ ಮುನಿಪನ ।
ಚಾರು ಬೊಗಸೆಯ ಸೇರೆ ಬಂಧಿಸಿ ।
ಹೀರಿ ಬಿಡೆ ರಕ್ಕಸರು ಕಾಣರು । ಆರುಭಟಿಸಿ ॥ ॥ ೧ ॥

ದೈತ್ಯರನು ಸಂಹರಿಸಿ ಸುರಪತಿ ।
ಮತ್ತೆ ಕುಂಭಜನನ್ನು ಪೊಗಳುತ ।
ಪೃಥ್ವಿಯೊಳು ತವ ಮಹಿಮೆ ಪೊಗಳಲು ಶಕ್ತನಲ್ಲ ॥ ॥ ೨ ॥

ಸುರರ ಪೊರೆದೆಯ ಕರುಣದಿಂದಲಿ ।
ತರಣಿ ಶಾಪವು ವರವದಾಯಿತು ।
ಧರಣಿಗಾಗಲಿ ಶುಭವು ಯೆನ್ನುತ । ಶರಣು ಬರಲು ॥ ॥ ೩ ॥

ಸುರಪನನು ಮನ್ನಿಸುತ ಕುಂಭಜ ।
ಹರುಷದಿಂದಿರುತಿರಲು ಈ ಪರಿ ।
ಧರೆಗೆ ಮಂಗಲವಾದ ಕಥನವ । ಬರೆದೆನಿಂದು ॥ ॥ ೪ ॥

ಯಕ್ಷಗಾನದೊಳಗರಿ ಭಾಸ್ಕರ ।
ಪಕ್ಷಿವಾಹನ ದಯದೊಳಿಂದಿಲಿ ।
ರಕ್ಷಿಸಲಿ ಶ್ರೀಹರಿಯು ಮಂಗಲ । ವಿತ್ತು ಧರೆಗೆ ॥ ॥ ೫ ॥ [೧೭

ರಾಗ : ಮೋಹನ, ಏಕತಾಳ

ಮಂಗಲ ಜಗದಂಬಿಕೆ ಶಿವೆಗೆ ।
ಮಂಗಲಶಕ್ತಿ ಸ್ವರೂಪಿಣಿಗೆ ।
ಮಂಗಲ ಸರ್ವೇಶ್ವರಿ ಶ್ರೀಶಂಕರಿ ।
ಮಂಗಲ ಭಕ್ತರ ಪೊರೆವವಗೆ । ಮಂಗಲಂ ।
ಜಯ ಮಂಗಲಂ । ಶುಭ ಮಂಗಲಂ ॥ ॥ ೧ ॥ [೧೭

॥ ಅಂತು ಪದ ೧೭೬ಕ್ಕೆ ಅಗಸ್ತ್ಯಚರಿತೆ ಸಂಪೂರ್ಣಂ ॥